


ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿ ವಾರ ಪತ್ರಿಕೆ ಡಿಸೆಂಬರ್ 25,1988 ಸಂಪುಟ 10, ... ರೂ. 1

ಹದಿಮೂರನೇ ಮಹಾಧಿವೇಶನದತ್ತ

ರಾಜ್ಯದ ಅಭಿವೃದ್ಧಿಗಾಗಿ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಬೇಕು

ಸಿ.ಪಿ.ಐ(ಎಂ)ನ 13ನೇ ಕರ್ನಾಟಕ ರಾಜ್ಯ ಸಮ್ಮೇಳನ ಅಂಗೀಕರಿಸಿದ ರಾಜ್ಯದ ನೀರಾವರಿ ಯೋಜನೆ ಕುರಿತಾದ ಪ್ರಮುಖ ನಿರ್ಣಯ ಹೀಗಿದೆ:

ಕೃಷ್ಣ, ಘಟಪ್ರಭಾ, ಮಲಪ್ರಭಾ, ಕಾವೇರಿ, ತುಂಗಭದ್ರಾ ಮೊದಲಾದ ನೀರಾವರಿಗೆ ಅತ್ಯಮೂಲ್ಯವಾದ ದೊಡ್ಡ ನದಿಗಳು ಕರ್ನಾಟಕ ರಾಜ್ಯದಲ್ಲಿ ಹರಿಯುತ್ತಿದ್ದರೂ ಕೂಡ ರಾಜ್ಯದಲ್ಲಿಯ ನೀರಾವರಿ ಪ್ರದೇಶ ಶೇ.29 ಕ್ಕಿಂತ ಹೆಚ್ಚು ವಿಸ್ತಾರಗೊಂಡಿಲ್ಲ. ಈ ನದಿಗಳಲ್ಲಿ ಹರಿಯುತ್ತಿದ್ದರೂ ನೀರಿನ ಉಪಯೋಗ ಪಡೆಯಲು ಹಾಗೆಯೇ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಬೇಕಾದ ಹಲವಾರು ಯೋಜನೆಗಳು ಸ್ವಾತಂತ್ರ್ಯ ಪೂರ್ವದಲ್ಲಿಯೂ ಅನಂತರವೂ ಸಿದ್ಧಗೊಳಿಸಲ್ಪಟ್ಟಿವೆ. ಆದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಸಮರ್ಪಕ ಯೋಜನಾ ನೀತಿಯಿಂದಾಗಿ ಆ ಯೋಜನೆಗಳು ನೆನೆಗುದಿಗೆ ಬಿದ್ದಿವೆ. ಕೆಲವು ಪ್ರಾರಂಬದ ಹಂತದಲ್ಲಿಯೇ ಕುಂಠಿತಗೊಂಡಿವೆ. ಸಂಪನ್ಮೂಲಗಳ ಅಭಾವದ ನೆವ ಒಂದೆಡೆಯಾದರೆ, ಮಂತ್ರಿಗಳ ಕ್ಷೇತ್ರಗಳಿಗೆ ಪ್ರಾಧಾನ್ಯತೆ ನೀಡುವ ಸ್ವಭಾವ ಮತ್ತೊಂದೆಡೆಯಾಗಿದೆ. ಹೀಗಾಗಿ ಸೌಕರ್ಯವನ್ನು ಸರಿಯಾಗಿ ಉಪಯೋಗಿಸದಿರುವುದರಿಂದ, ಪ್ರಾರಂಭಿಸಿದ ನೀರಾವರಿ ಯೋಜನೆಗಳಿಗೆ ಸಂಪನ್ಮೂಲ ಒದಗಿಸಿ ಸಕಾಲದಲ್ಲಿ ಅವುಗಳನ್ನು ಮುಗಿಸದಿರುವುದರಿಂದ ನಮ್ಮ ರಾಜ್ಯದಲ್ಲಿ ಅರ್ಧಕ್ಕಿಂತಲೂ ಹೆಚ್ಚಿನ ಭಾಗ, 176 ತಾಲ್ಲೂಕುಗಳ ಪೈಕಿ 96 ತಾಲ್ಲೂಕುಗಳು ಯಾವಾಗಲೂ ಬರಕ್ಕೆ ತುತ್ತಾಗಿ, ಅಲ್ಲಿಯ ಜನ ಅಪಾರ ಬವಣೆಯನ್ನನುಭವಿಸುವಂತಾಗಿದೆ. ಮಳೆ ಅಭಾವದಿಂದ ಊರುಬಿಟ್ಟು ವಲಸೆ ಹೋಗುವಂತಾಗಿದೆ.

ಮಳೆಯನ್ನೇ ಆಶ್ರಯಿಸಿಕೊಳ್ಳಬೇಕಾಗಿರುವ ಬಿಜಾಪುರ, ಗುಲ್ಬರ್ಗ, ರಾಯಚೂರು ಜಿಲ್ಲೆಗಳಲ್ಲಿ ಪ್ರಾರಂಭದಲ್ಲಿ 12 ಲಕ್ಷ ಎಕರೆಗೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದ್ದ ಕೃಷ್ಣಾ ಮೇಲ್ದಂಡೆ ಯೋಜನೆಯ ಅಂದಾಜು ವೆಚ್ಚ ಆಗ ರೂ.58 ಕೋಟಿ ಆಗಿತ್ತು. ಸ್ವಾತಂತ್ರ್ಯ ಪೂರ್ವದಲ್ಲಿಯೇ ಸಿದ್ಧಗೊಳಿಸಲಾಗಿದ್ದ ಈ ಯೋಜನೆಯನ್ನು, ಕರ್ನಾಟಕ ರಾಜ್ಯವಾದ ನಂತರವೂ ಕೇಂದ್ರ ಮತ್ತು ರಾಜ್ಯ ಸರ್ಕಾರ ಕೈಗೆತ್ತಿಕೊಳ್ಳಲು ಮೀನಮೇಷ ಹಾಕಿದಾಗ, 1964ರಲ್ಲಿ ಬಿಜಾಪುರದಲ್ಲಿ ಕಮ್ಯುನಿಸ್ಟ್ ಪಕ್ಷ ರೈತ ಸಂಘ, ನಗರ ಸಭೆ, ವ್ಯಾಪಾರಸ್ಥರು, ಇತರ ಸಾರ್ವಜನಿಕರ

8ನೇ ಪುಟ ನೋಡಿ

ಮಹಾಧಿವೇಶನದಲ್ಲಿ ಸೌಹಾರ್ದ ಪ್ರತಿನಿಧಿಗಳು

ಹದಿಮೂರನೇ ಮಹಾಧಿವೇಶನಕ್ಕೆ ಸಿ.ಪಿ.ಐ.(ಎಂ) ಕೇಂದ್ರ ಸಮಿತಿ ಮೊತ್ತ ಮೊದಲ ಬಾರಿಗೆ ಹತ್ತೊಂಬತ್ತು ಸೋದರ ಪಕ್ಷಗಳ ಪ್ರತಿನಿಧಿ ಮಂಡಲಗಳಿಗೆ ಆಮಂತ್ರಣ ನೀಡಿದೆ. ಡಿಸೆಂಬರ್ 15 ರವರೆಗೆ 14 ಪಕ್ಷಗಳು ತಾವು ಭಾಗವಹಿಸುವ ಬಗ್ಗೆ ಖಚಿತಪಡಿಸಿವೆ.

1. ಆಫ್ಘಾನಿಸ್ತಾನ ಜನತಾ ಪ್ರಜಾಪ್ರಭುತ್ವ ಪಕ್ಷ
2. ಬಲ್ಗೇರಿಯಾ ಕಮ್ಯುನಿಸ್ಟ್ ಪಕ್ಷ
3. ಚೀಣಾ ಕಮ್ಯುನಿಸ್ಟ್ ಪಕ್ಷ
4. ಕ್ಯೂಬಾ ಕಮ್ಯುನಿಸ್ಟ್ ಪಕ್ಷ
5. ಜೆಕೋಸ್ಲೋವಾಕಿಯಾ ಕಮ್ಯುನಿಸ್ಟ್ ಪಕ್ಷ
6. ಫ್ರಾನ್ಸ್ ಕಮ್ಯುನಿಸ್ಟ್ ಪಕ್ಷ
7. ಜರ್ಮನಿ ಸಮಾಜವಾದಿ ಐಕ್ಯತಾ ಪಕ್ಷ
8. ಇಟಲಿ ಕಮ್ಯುನಿಸ್ಟ್ ಪಕ್ಷ
9. ಜಪಾನ್ ಕಮ್ಯುನಿಸ್ಟ್ ಪಕ್ಷ
10. ಕೊರಿಯಾ ಕಾರ್ಮಿಕ ಪಕ್ಷ
11. ಮಂಗೋಲಿಯಾ ಜನತಾ ಕ್ರಾಂತಿಕಾರಿ ಪಕ್ಷ
12. ಪೋಲಿಷ್ ಸಂಯುಕ್ತ ಕಾರ್ಮಿಕ ಪಕ್ಷ
13. ಸೋವಿಯತ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷ
14. ವಿಯೆಟ್ನಾಂ ಕಮ್ಯುನಿಸ್ಟ್ ಪಕ್ಷ

ಎತ್ತ ತಿರುಗಿ ನೋಡಿದರೂ ಒಂದು ಸ್ವಾಗತ ನಿಲಯ. ಕೆಂಬಾವುಟಗಳಿಂದ, ಪತಾಕೆಗಳಿಂದ, ಭಾವಚಿತ್ರಗಳಿಂದ ಕಾರ್ಮಿಕ ವರ್ಗದ ಕಲಾಕಾರರ ಕಲ್ಪನಾಶೀಲತೆಯನ್ನು ಬಿಂಬಿಸುವ ಅಲಂಕಾರಗಳಿಂದ ತುಂಬಿದ ಸ್ವಾಗತ ನಿಲಯಗಳು. ಯಾವ ವೃತ್ತ, ಚೌಕ ನೋಡಿದರೂ ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯ ಮುಖಂಡರ ಬೃಹತ್ ಭಾವಚಿತ್ರಗಳು. ಯಾವ ಗೋಡೆ ನೋಡಿದರೂ ದುಡಿಮೆಗಾರರ ಹೋರಾಟದ ಇತಿಹಾಸ ಸಾರುವ ಚಿತ್ರಗಳು. ಕಲಾತ್ಮಕ ಬೆಳಕಿನಿಂದ ಸಜ್ಜಿತ ಬೃಹತ್ ಘೋಷಣಾ ಫಲಕಗಳು. ಸ್ವಾಗತ ಕಮಾನುಗಳು, ಗಾನಮೇಳಗಳು, ಚಂಡೆಗಳು, ಮನೆ, ಅಂಗಡಿ, ಮಾರುಕಟ್ಟೆ, ಶಾಲೆ, ಕಾಲೇಜು, ಕಚೇರಿ, ಕಾರ್ಖಾನೆ - ಎಲ್ಲೆಲ್ಲೂ ಈಗ ಒಂದೇ ಮಾತು.

ಹೌದು. ಇದು ತಿರುವನಂತಪುರ. ಮೊತ್ತ ಮೊದಲ ಬಾರಿಗೆ ಸಿ.ಪಿ.ಐ.(ಎಂ)ನ ಮಹಾಧಿವೇಶನಕ್ಕೆ ಆತಿಥ್ಯನೀಡಲು ಸರ್ವಸಿದ್ಧವಾಗಿ ನಿಂತಿರುವ ತಿರುವನಂತಪುರ.

ರಾಜ್ಯದಲ್ಲಿ ಪಕ್ಷದ ವಿವಿಧ ಹಂತಗಳಲ್ಲಿ 15812 ಸಮ್ಮೇಳನಗಳಲ್ಲಿ, ಕಳೆದ ಮೂರು ತಿಂಗಳು ಕೇರಳ ರಾಜ್ಯಾದ್ಯಂತ ಮಿಲಿಯಾಂತರ ಜನರನ್ನು ಒಳಗೊಂಡ ಕೆಂಪು ಉತ್ಸವಗಳ ಸಾಗರವೇ ಉಕ್ಕಿ ಬಂದಿತ್ತು. ಇದುವರೆಗೆ ಪ್ರಜಾಪ್ರಭುತ್ವ ಚಳುವಳಿಗಳಿಂದ ದೂರನಿಂತಿದ್ದ ಜನವಿಭಾಗಗಳು ಹಲವು ಕೂಡಾ ಈ ಸಾಗರವನ್ನು ಸೇರಿಕೊಂಡವು. ಇತ್ತೀಚಿನ ವರೆಗೆ ಕಾಂಗ್ರೆಸ್(ಐ) ಮತ್ತು ಅದರ ಜಾತಿ-ಕೋಮುವಾದಿ ಮಿತ್ರರ ಪ್ರಭಾವದಲ್ಲಿದ್ದ ಜನ ಸಮೂಹಗಳು ಕೂಡಾ ಈ ಸಾಗರದತ್ತ ಹರಿದು ಬಂದವು.

ಈ ಹಿನ್ನೆಲೆಯಲ್ಲಿ ರಾಜ್ಯ ಸಮ್ಮೇಳನದ ನಂತರ ನವೆಂಬರ್ 22 ರಂದು ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್. ಮಕ್ಕಳ ಒಂದು ಗುಂಪಿನ ಜತೆಗೂಡಿ 13 ಬಿಳಿ ಪಾರಿವಾಳಗಳನ್ನು ಬಿಡುಗಡೆ ಮಾಡುವುದರೊಂದಿಗೆ ಹದಿಮೂರನೇ ಮಹಾಧಿವೇಶನದ ಸಂಘಟನೆಯನ್ನು ಉದ್ಘಾಟಿಸಿದರು.

ಸಿ.ಪಿ.ಐ.(ಎಂ) ಯೋಚನಾ ಶಕ್ತಿಯಿರುವವರ ಪಕ್ಷ. ಎಲ್ಲರೂ ಸದಾ ಒಂದೇ ರೀತಿ ಯೋಚಿಸಲು ಸಾಧ್ಯವಿಲ್ಲ. ಇಲ್ಲೇ ರಾಜೀವ್‌ರ ಕಾಂಗ್ರೆಸ್(ಐ)ಗೂ ಸಿ.ಪಿ.ಐ(ಎಂ)ಗೂ ಇರುವ ವ್ಯತ್ಯಾಸ. ಅಲ್ಲಿ ಮುಖಂಡನ ಒಂದು ಭಾಷಣದೊಂದಿಗೆ ಎಲ್ಲಾ ಯೋಚನೆಗಳು ಅಂತ್ಯ ಗೊಳ್ಳುತ್ತವೆ. ನಮ್ಮ ಪಕ್ಷದಲ್ಲಿ ಭಿನ್ನಾಭಿಪ್ರಾಯಗಳನ್ನು ಪ್ರಜಾಸತ್ತಾತ್ಮಕ ಚರ್ಚೆಯ ಮೂಲಕ ಪರಿಹರಿಸಿಕೊಳ್ಳುತ್ತೇವೆ.

ಪಾರ್ಟಿ ಒಡೆದು ಹೋಗುತ್ತಿದೆ. ಬಿ.ಟಿ.ಆರ್., ಇ.ಎಂ.ಎಸ್. ಸದ್ಯದಲ್ಲೇ ದೂರವಾಗಲಿದ್ದಾರೆ ಎಂಬ ಮೌಢ್ಯ ಮತ್ತು ಸೊಕ್ಕಿನ ಮಿಶ್ರಣದ ಊಹಾಪೋಹಗಳಿಗೆ ಇ.ಎಂ.ಎಸ್. ನೀಡಿದ ಉತ್ತರವಿದು.

ನವಂಬರ್ 23 ರಿಂದ ಕಾಂ.ಇ.ಕೆ.ನಾಯನಾರ್ ಅಧ್ಯಕ್ಷತೆಯಲ್ಲಿ ಸಭೆ ಸೇರುತ್ತಾ ಮಹಾಧಿವೇಶನದ ಸ್ವಾಗತ ಸಮಿತಿ ತಿರುವನಂತಪುರವನ್ನು ಸಜ್ಜುಗೊಳಿಸುತ್ತಿದೆ. 13 ವಿವಿಧ ಉಪ ಸಮಿತಿಗಳು ರಚನೆಗೊಂಡು ತಮ್ಮ ತಮ್ಮ ಜವಾಬ್ದಾರಿ ನಿರ್ವಹಣೆಯಲ್ಲಿ ತೊಡಗಿವೆ.

ಉದಾಹರಣೆಗೆ, ಸಾಂಸ್ಕೃತಿಕ ಉಪಸಮಿತಿ ಮಹಾಧಿವೇಶನದ ಐದೂ ದಿನಗಳಲ್ಲಿ ಒಂದು ಸುವ್ಯವಸ್ಥಿತ ಸಾಂಸ್ಕೃತಿಕ ಕಾರ್ಯಕ್ರಮ ನೀಡಲು ಸಿದ್ಧತೆ ನಡೆಸುತ್ತಿದೆ. ನಗರದ ಐದು ಕೇಂದ್ರಗಳಿಂದ ಕೇರಳ ಜಾನಪದ ಕಲೆಗಳು, ನಾಟಕ, ಸಂಗೀತ, ಗಾನಮೇಳ, ಚಂಡೆನಿನಾದದ, ಕಥಕ್ಕಳಿಯ ಪ್ರದರ್ಶನ. ಅದೇ ರೀತಿ ಚಲನಚಿತ್ರ ಪ್ರದರ್ಶನ. ಸಮ್ಮೇಳನಗಳು, ಚರ್ಚೆಗಳು, ವಿಚಾರ ಸಂಕಿರಣಗಳು.

ತಿರುವನಂತಪುರದ ಪ್ರತಿಯೊಂದು ವಾರ್ಡಿನಲ್ಲಿ ಇಡೀ ಜಿಲ್ಲೆಯಲ್ಲಿ ಎಲ್ಲೆಡೆ ಸ್ವಾಗತ ಸಮಿತಿಗಳು, ಏರ್ಪಟ್ಟಿವೆ. ಅಲ್ಲೂ ಸಮಾವೇಶಗಳು, ವಿಚಾರ ಸಂಕಿರಣಗಳು, ಗಾನಮೇಳಗಳು, ನಾಟಕಗಳು, ದಾರಿ ಬದಿ ಸಭೆಗಳು.

ಸಾಮೂಹಿಕ ಸಂಘಟನೆಗಳು ತಮ್ಮ ಸದಸ್ಯರಿಗೆ ಭಾರತದ ಪ್ರಜಾಪ್ರಭುತ್ವ ಆಂದೋಳನ ಬಲಪಡಿಸುವಲ್ಲಿ ಮಹಾಧಿವೇಶನದ ಮಹತ್ವವನ್ನು ಅದರ ಸಂದೇಶವನ್ನು ತಲುಪಿಸಲು ಪ್ರಯತ್ನಿಸುತ್ತಿವೆ.

ವಿಶೇಷವಾಗಿ ಪ್ರತಿಯೊಬ್ಬ ಸದಸ್ಯರ ಕುಟುಂಬಗಳನ್ನು ಇದರಲ್ಲಿ ಒಳಗೊಳ್ಳಲು ಯಶಸ್ವೀ ಪ್ರಯತ್ನ ನಡೆಸಲಾಗಿದೆ. ಪ್ರತಿಯೊಂದು ವಾರ್ಡ್,ತಾಲ್ಲೂಕು, ಸಾಮೂಹಿಕ ಸಂಘಟನೆ ಜನವರಿ 1 ರ ಕೆಂಪು ಮೆರವಣಿಗೆಗೆ ಸ್ವಯಂಸೇವಕರ ತರಬೇತಿ, ನಿಧಿಸಂಗ್ರಹ, ಆಹಾರ ಸಂಗ್ರಹ ಮುಂತಾದ ಕೆಲಸಗಳಲ್ಲಿ ತೊಡಗಿದೆ. ಜಿಲ್ಲಾದ್ಯಂತ ಕಾರ್ಮಿಕರ, ನೌಕರರ, ರೈತರ ಕುಟುಂಬಗಳ ಸಭೆ ನಡೆದಿವೆ.

ದಕ್ಷಿಣ ತಿರುವಾಂಕೂರು ಸಿನಿಮಾ ಕಾರ್ಮಿಕರ ಸಂಘದ ಸಾಮಾನ್ಯ ಸಭೆ ಒಂದು ನಿರ್ಣಯ ಕೈಗೊಂಡು ಒಂದು ದಿನದ ಸಂಬಳ ನೀಡಲು, ಯೂನಿಯನ್ ಹೆಸರಿನಲ್ಲಿ ಸ್ವಾಗತ ಕಮಾನುಗಳನ್ನು ನಿಲ್ಲಿಸಲು, ರ್‍ಯಾಲಿಯ ದಿನ ಕುಟುಂಬದ ಎಲ್ಲಾ ಸದಸ್ಯರ ಸಮೇತ ಭಾಗವಹಿಸಲು ನಿರ್ಧರಿಸಿತು.

ತಿರುವಾಂಕೂರು ನಾರು ಕಾರ್ಮಿಕರ ಸಂಘ 2500 ಕೆಂಪು ಸ್ವಯಂಸೇವಕರಿಗೆ ತರಬೇತಿ ನೀಡಿದೆ. ನಾರಿನ ಐದು ಬೃಹತ್ ಕಮಾನುಗಳನ್ನು ಜಿಲ್ಲೆಯ ಪ್ರಮುಖ ನಾರು ಕೈಗಾರಿಕಾ ಕ್ಷೇತ್ರಗಳಲ್ಲಿ ನಿಲ್ಲಿಸಿದೆ. 15 ಸಾವಿರ ಕುಟುಂಬಗಳು ರ್‍ಯಾಲಿಯಲ್ಲಿ ಭಾಗವಹಿಸಬೇಕೆಂದು ನಿರ್ಧರಿಸಿವೆ.

ಇದೇ ರೀತಿ ಕಟ್ಟಡ ಕೆಲಸಗಾರರು, ಮೀನು ಕಾರ್ಮಿಕರು, ರೈತಸಂಘದ ಸದಸ್ಯರು ನಿರ್ಧರಿಸಿದ್ದಾರೆ. ಇತ್ತೀಚಿನ ವರೆಗೆ ಕಾಂಗ್ರೆಸ್(ಐ) ಭದ್ರಕೋಟೆಯಾಗಿದ್ದ ಜಿಲ್ಲೆಯ ಕರಾವಳಿ ಪ್ರದೇಶದ ಬಣ್ಣವೂ ಬದಲಾಗಿ ಕೆಂಪಾಗಿದೆ. ಮೀನು ಕಾರ್ಮಿಕರು ಅಪಾರ ಸಂಖ್ಯೆಯಲ್ಲಿ ಮಹಾಧಿವೇಶನದ ಕೆಲಸದಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

ಮಹಿಳಾ ಸಂಘಟನೆ ಎರಡು ಲಕ್ಷ ಮಹಿಳೆಯರು ರ್‍ಯಾಲಿಯಲ್ಲಿ ಭಾಗವಹಿಸುವಂತಾಗಲು ತೀವ್ರ ಪ್ರಚಾರ ನಡೆಸಿದೆ.

ರಾಜ್ಯಾದ್ಯಂತ ಕಂಡುಬಂದಿರುವ ಉತ್ಸಾಹವನ್ನು ಗಮನಿಸಿದ ಸ್ವಾಗತ ಸಮಿತಿ ರ್‍ಯಾಲಿಯಲ್ಲಿ ಕೇವಲ ತಿರುವನಂತಪುರ ಜಿಲ್ಲೆ ಮಾತ್ರ ಭಾಗವಹಿಸುವುದೆಂದು ವಿಧಿಸಬೇಕಾಗಿ, ಬಂದಿದೆ, ... ಸಂಘಟನೆಯು

8ನೇ ಪುಟ ನೋಡಿ

ಆಮದಿನ ಉದಾರೀಕರಣ- ಸ್ವಾವಲಂಬನೆಗೆ ತಿಲಾಂಜಲಿ

"ಕಳೆದ ನಾಲ್ಕು ದಶಕಗಳಲ್ಲಿ ಆಮದು ಮಾಡಿದ ತಂತ್ರಜ್ಞಾನಗಳ ಮೇಲೆ ಅವಲಂಬನೆ ಕಿಂಚಿತ್ತೂ ಕಡಿಮೆಯಾಗಿಲ್ಲ. ಬದಲು ಹೆಚ್ಚಿದೆ ಎನ್ನಬಹುದು. ಅತ್ಯಾಧುನಿಕ ತಂತ್ರಜ್ಞಾನವನ್ನು ಆಮದು ಮಾಡುವ ನೆಪದಲ್ಲಿ ಕೈಗಾರಿಕೆ ಕ್ಷೇತ್ರಕ್ಕೆ ಉತ್ಪಾದನಾ "ಜ್ಞಾನ"ವನ್ನು ಬಹಳ ಉದಾರವಾಗಿ ಆಮದು ಮಾಡಲಾಗುತ್ತಿದೆ. ಸರ್ಕಾರದ ಅಧಿಕೃತ ಸ್ವಾವಲಂಬನಾ ನೀತಿ ಬದಲಾಗದಿದ್ದರೂ ಉದಾರ ಆಮದಿನ "ಅಗತ್ಯ"ದ ಬಗ್ಗೆ ಸರ್ಕಾರ ಸುಹಮತವಾಗಿರುವಂತಿದೆ. ಉದಾರೀಕರಣ ನೀತಿ, ಉಚ್ಚ ವಿಜ್ಞಾನ- ತಂತ್ರಜ್ಞಾನ ಉತ್ಪನ್ನಗಳ ಕ್ಷೇತ್ರಗಳಲ್ಲಿ, ಬಳಕೆ ವಸ್ತುಗಳ ಉತ್ಪಾದನೆಯಲ್ಲಿ, ಸ್ನೇಹ ಸ್ವಾವಲಂಬನೆಗೆ ತಿಲಾಂಜಲಿ ಕೊಡುವ ಧೋರಣೆಗೆ ಉತ್ತೇಜನ ಕೊಡುವಂತಿದೆ. ಹಲವು ಪ್ರಬಲ ರಾಜಕೀಯ ಶಕ್ತಿಗಳ ಒತ್ತಡದಿಂದ ಸ್ವಾವಲಂಬನೆಗೆ ಬಲವಾದ ಏಟು ಬಿದ್ದಿದೆ. ಸ್ವಾವಲಂಬನೆಯ ನೀತಿಗೆ ಮುಖಸ್ತುತಿ ಮಾಡಿ, ಕಾರ್ಯಾಚರಣೆಯಲ್ಲಿ ತಿಲಾಂಜಲಿ ಕೊಡುವುದು ಈ ಹಿನ್ನೆಲೆಯಲ್ಲಿ ಸ್ವಾಭಾವಿಕವಾಗಿ ಬಿಟ್ಟಿದೆ..." ಎಂಬ ಡಾ. ಎಸ್.ಆರ್. ವಲ್ಲೂರಿ (ರಾಷ್ಟ್ರೀಯವೈಮಾನಿಕ ಪ್ರಯೋಗಶಾಲೆಯ ಮಾಜಿ ನಿರ್ದೇಶಕ) ಅವರ ಉದ್ಘಾಟನಾ ಭಾಷಣದ ಅಂಶಗಳು ಇತರ ಭಾಷಣಕಾರರು, ಪರಿಚರ್ಚಾಕಾರರು ಆಗಿದ್ದ ಹಲವು ಹಿರಿಯ ವಿಜ್ಞಾನಿಗಳ ಮಾತುಗಳಲ್ಲಿ ಮತ್ತೆ ಮತ್ತೆ ಪ್ರತಿಧ್ವನಿತವಾದವು.

ಇದು ನಡೆದದ್ದು ನಗರದಲ್ಲಿ ಇತ್ತೀಚೆಗೆ (ಅಕ್ಟೋಬರ್ ೨೩) ಆಸಕ್ತ ವಿಜ್ಞಾನಿ, ಇಂಜನಿಯರುಗಳ "ವಿಜ್ಞಾನ ಮತ್ತು ಬೆಳವಣಿಗೆಯ ವೇದಿಕೆ" ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ. ವಿಚಾರ ಸಂಕಿರಣದ ವಿಷಯ "ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಸ್ವಾವಲಂಬನೆ" ಆಗಿತ್ತು. ಭಾರತದ ಬೆಳವಣಿಗೆಯಲ್ಲಿ ಸ್ವಾವಲಂಬನೆಯ ಧೋರಣೆಗೆ ತಿಲಾಂಜಲಿ ನೀಡಲಾಗಿದೆ. ಆದುದರಿಂದ ಇದರ ಭಾಗವಾದ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಸ್ವಾವಲಂಬನೆಗೆ ಬಲವಾದ ಏಟು ಬೀಳುತ್ತಿದೆ. ಇದಕ್ಕೆ ಮುಖ್ಯ ಕಾರಣ ಸರ್ಕಾರದ ಉದಾರೀಕರಣ, ಆಧುನೀಕೀಕರಣದ ನೀತಿ ಎಂಬ ಸಾಮಾನ್ಯ ಆಶಯ ವಿಚಾರ ಸಂಕಿರಣದಲ್ಲಿ ಮೂಡಿಬಂದಿತ್ತು. ಈ ಸಂಕಿರಣದಲ್ಲಿ ವೇದಿಕೆಯಲ್ಲೂ ಸಭಿಕರಾಗೂ ಭಾಗವಹಿಸಿದವರು ನಗರದ ಪ್ರಮುಖ ವಿಜ್ಞಾನ ಮತ್ತು ತಂತ್ರಜ್ಞಾನದ ಸಂಶೋಧನಾ ಸಂಸ್ಥೆಗಳು, ಪ್ರಮುಖ ಕೈಗಾರಿಕೆಗಳು, ವಿಶ್ವವಿದ್ಯಾಲಯಗಳು ಮತ್ತಿತರ ಬೋಧನಾ ಸಂಸ್ಥೆಗಳ ವಿಜ್ಞಾನಿಗಳು, ಇಂಜನಿಯರುಗಳು ಮತ್ತಿತರ ವೈಜ್ಞಾನಿಕ ಕಾರ್ಯಕರ್ತರು ಎಂಬುದು ಇಲ್ಲಿ ಗಮನಾರ್ಹವಾಗಿತ್ತು. ಈ ವಿಚಾರ ಸಂಕಿರಣ ಸ್ವಾವಲಂಬನೆಗೆ ಒದಗಿರುವ ಅಪಾಯದ ಬಗ್ಗೆ ನಗರದ ವೈಜ್ಞಾನಿಕ ಸಮುದಾಯದ ಆತಂಕವನ್ನು ಪ್ರತಿಬಿಂಬಿಸಿತು.

ವಿಚಾರ ಸಂಕಿರಣವನ್ನು ಡಾ. ಎಸ್.ಆರ್. ವಲ್ಲೂರಿಯವರು ಉದ್ಘಾಟಿಸಿದ ನಂತರ, ಭಾರತೀಯ ವಿಜ್ಞಾನ ಮಂದಿರದ ಪ್ರೊ. ಎ.ಆರ್. ವಾಸುದೇವಮೂರ್ತಿ, ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ತಿನ ಡಾ. ಎಂ.ಪಿ. ಪರಮೇಶ್ವರನ್, ಭಾರತೀಯ ವಿಜ್ಞಾನ ಸಂಸ್ಥೆಯ ಪ್ರೊ. ಎ.ಕೆ.ಎನ್. ರೆಡ್ಡಿ, ದೆಹಲಿಯ ದಿನೇಶ ಅಬ್ರೋಲ್ ಪ್ರಬಂಧಗಳನ್ನು ಮಂಡಿಸಿದರು.

ರಾಜಕೀಯ ಸ್ಥೈರ್ಯದ ಅಗತ್ಯ

ಡಾ|| ವಲ್ಲೂರಿ ತಮ್ಮ ಪ್ರಬಂಧದಲ್ಲಿ ೧೯೫೮ರಲ್ಲಿ ಕಾಂಗ್ರೆಸ್ ಸರ್ಕಾರ ಅಂಗೀಕರಿಸಿದ ವಿಜ್ಞಾನ ಧೋರಣೆ ಹೇಳಿಕೆ ಕಳೆದ ೪೦ ವರ್ಷಗಳಲ್ಲಿ ಎಷ್ಟರ ಮಟ್ಟಿಗೆ ಕಾರ್ಯಗತವಾಗಿದೆ ಎಂದು ವಿಶ್ಲೇಷಿಸುತ್ತಾ, ಬಾಹ್ಯಾಕಾಶ ಮತ್ತು ಅಣುಶಕ್ತಿ ತಂತ್ರಜ್ಞಾನದ ಕ್ಷೇತ್ರಗಳ ಅಪವಾದ ಬಿಟ್ಟರೆ ಬೇರೆ ಎಲ್ಲಾ ಕ್ಷೇತ್ರಗಳಲ್ಲಿ ಪುನಃ ಪುನಃ ತಂತ್ರಜ್ಞಾನ ಆಮದು ಮಾಡುವ ಪರಿಸ್ಥಿತಿ ಇದೆ ಎಂದು ಅಭಿಪ್ರಾಯ ಪಟ್ಟರು. ಬಾಹ್ಯಾಕಾಶ ಮತ್ತು ಅಣುಶಕ್ತಿ ಕ್ಷೇತ್ರಗಳಲ್ಲಿನ ಸಫಲತೆಗೆ ರಾಜಕೀಯ ಸ್ಥೈರ್ಯ ಮತ್ತು ಈ ಕ್ಷೇತ್ರಗಳಲ್ಲಿ ಪಾಶ್ಚಿಮಾತ್ಯ ದೇಶಗಳು ತಂತ್ರಜ್ಞಾನ ರಫ್ತಿಗೆ ಹಿಂತೆಗೆಯುವುದು ಕಾರಣ ಎಂದು ಅವರ ಅಭಿಪ್ರಾಯವಾಗಿತ್ತು. ಉಳಿದ ಕ್ಷೇತ್ರಗಳಲ್ಲಿನ ಪರಿಸ್ಥಿತಿಗೆ ರಾಷ್ಟ್ರೀಯ ಗುರಿಗಳು, ಯೋಜನೆಗಳು ಮತ್ತು ವೈಜ್ಞಾನಿಕ-ತಂತ್ರಜ್ಞಾನ ಸಂಶೋಧನೆಯ ಸಂಘಟನೆಯ ನಡುವಿನ ಕಂದರ ಮತ್ತು ರಾಜಕೀಯ ಸ್ಥೈರ್ಯದ ಅಭಾವವೇ ಕಾರಣ. ಈ ಕ್ಷೇತ್ರಗಳಲ್ಲಿ ಸ್ವಾಲಂಬನೆ ಮತ್ತು ತಂತ್ರಜ್ಞಾನ ಆಮದಿನ ಪೈಪೋಟಿಯ ಪರಿಣಾಮ ನಿರ್ಧರಿಸಿದ್ದು ಮಾರುಕಟ್ಟೆಯ ಶಕ್ತಿಗಳು. ಇತ್ತೀಚಿನ ಉದಾರೀಕರಣ - ಆಧುನೀಕರಣದ ಹೆಸರಿನಲ್ಲಿ ಸ್ವಾವಲಂಬನೆಗೆ ಮಾರಕವಾಗಿದೆ. ಇದನ್ನು ತೊರೆದು ದೇಶದ ಸಂಶೋಧನಾ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು ಮತ್ತು ಕೈಗಾರಿಕೆಗಳ ನಡುವೆ ರಾಷ್ಟ್ರೀಯ ಗುರಿಗಳತ್ತ ವೈಜ್ಞಾನಿಕ ಸಂಶೋಧನೆಯನ್ನು ನಡೆಸುವ ಸಂಘಟನಾತ್ಮಕ ವ್ಯವಸ್ಥೆ ತರುವುದೇ ಸ್ವಾವಲಂಬನೆ ಪರವಾದ ನೀತಿ ಎಂಬುದು ಅವರ ಸಲಹೆಯಾಗಿತ್ತು.

ಡಾ. ಎಂ.ಪಿ. ಪರಮೇಶ್ವರನ್ 'ಸ್ವಾವಲಂಬನೆ' ವರ್ಗ-ವಿಭಜಿತ ಸಮಾಜದಲ್ಲಿ ಯಾರದು ಎಂದು ಕೇಳಿ, ಸ್ವಾಲಂಬನೆಯ ನಿರ್ವಹಣೆಗೆ ಹೊಸ ಆಯಾಮ ನೀಡಿದರು. ಇಂತಹ ಸಮಾಜದಲ್ಲಿ ಶೋಷಿತರ ಮತ್ತು ಶೋಷಕರ 'ಸ್ವಾವಲಂಬನೆ'ಗೆ ಪೂರಕವಾದದ್ದು ಎಂದರು. ಶೋಷಿತರ 'ಸ್ವಾವಲಂಬನೆ'ಗೆ ಹೋರಾಡುವ ಜನಪರ ವಿಜ್ಞಾನ ಚಳುವಳಿ ವಿಜ್ಞಾನ ಮತ್ತು ಸಮಾಜದ ನಡುವಣ ಕೊಂಡಿಯಾಗಿ ಕೆಲಸ ಮಾಡುವುದು. ಜನಪರ ವಿಜ್ಞಾನ ಚಳುವಳಿಯ ಚರಿತ್ರೆ, ಪ್ರಸ್ತುತ ಭಾರತದಲ್ಲಿ ಅದರ ಬೆಳವಣಿಗೆಯ ಹೆಜ್ಜೆ - ಗುರುತುಗಳನ್ನು ತೋರಿಸಿದರು. ವಿಜ್ಞಾನವನ್ನು ಜನಪ್ರಿಯಗೊಳಿಸುವುದರಿಂದ ಹಿಡಿದು ಶೋಷಕರ ಮುಕ್ತಿ ಹೋರಾಟದಲ್ಲಿ ವಿಜ್ಞಾನದ ಖಡ್ಗ ಹಿಡಿಯುವ ಪ್ರಜ್ಞೆ ಎತ್ತರಿಸುವವರೆಗೆ ಈ ಚಳುವಳಿ ಹರಡಬಲ್ಲುದು. ಇದರಲ್ಲಿ ವಿಜ್ಞಾನಿಗಳು ಶೋಷಿತರ ಪರ ಪಕ್ಷವಹಿಸಬೇಕು ಎಂದು ನೆರೆದಿದ್ದ ವಿಜ್ಞಾನಿಗಳಿಗೆ ಕರೆನೀಡಿದರು.

ತಂತ್ರಜ್ಞಾನದ ಸರಪಣಿ ಮತ್ತು ಆಧುನಿಕೀಕರಣ

ಪ್ರೊ|| ಎ.ಕೆ.ಎನ್. ರೆಡ್ಡಿ ಸ್ವಾವಲಂಬನೆ ಬೆಳವಣಿಗೆಯ ಅವಿಭಾಜ್ಯ ಅಂಗ ಎಂಬ ನಿರ್ವಚನೆಯಿಂದ ಆರಂಭಿಸಿ, ಸ್ವಾವಲಂಬನೆಯನ್ನು ಪೂರ್ತಿಯಾಗಿ ಅರ್ಥ ಮಾಡಿಕೊಳ್ಳಲು ತಂತ್ರಜ್ಞಾನ ಉತ್ಪಾದಿಸುವ ಸರಪಣಿ ಕ್ರಿಯೆಯನ್ನು ವಿವರಿಸಿದರು. ತಂತ್ರಜ್ಞಾನ ಆಮದಿನ ಪರಿಣಾಮಗಳನ್ನು ಅವರು ಈ ಸರಪಣಿ ಕ್ರಿಯೆಯ ಹಲವು ಹಂತಗಳನ್ನು ಜಿಗಿಯುವುದರ ಮೂಲಕ ಹೇಗೆ ಬೀರುತ್ತದೆ? ಜಪಾನು ತಂತ್ರಜ್ಞಾನ ಆಮದು ಮಾಡಿದಾಗ ತಂತ್ರಜ್ಞಾನ ಉತ್ಪಾದಿಸುವ ಸರಪಣಿ ಕ್ರಿಯೆಯ ಬಿಟ್ಟುಹೋದ ಕೊಂಡಿಗಳನ್ನು ಹೇಗೆ ಸೇರಿಸುತ್ತಾರೆ ಎಂದು ವಿವರಿಸಿ ಭಾರತದಲ್ಲಿ ಇಂತಹ ಕೆಲಸ ಆಗದಿರುವುದೇ, ನಮ್ಮ ಸತತ ತಂತ್ರಜ್ಞಾನ ಪರಾವಲಂಬನೆಗೆ ಕಾರಣವೆಂದರು. ಇದಕ್ಕೆ ಅಪವಾದ ಅಣುಶಕ್ತಿ ಮತ್ತು ಬಾಹ್ಯಾಕಾಶ ವಲ್ಲದೆ, ಬಹಳ ಮಟ್ಟಿಗೆ ಸಣ್ಣ ಕೈಗಾರಿಕೆಗಳು. ಮುಂದುವರಿದು ಸ್ವಾತಂತ್ರ್ಯೋತ್ತರ ಭಾರತದಲ್ಲಿ ತಂತ್ರಜ್ಞಾನ ಆಮದುಗಳ ಮೂರು ಪ್ರಮುಖ ಹಂತಗಳನ್ನು ಗುರುತಿಸಿ, ಅದರ ಸಾಮಾಜಿಕ-ಆರ್ಥಿಕ ಆಯಾಮಗಳನ್ನು ವಿವರಿಸಿದರು.

ಈಗಿನ ಆಧುನಿಕೀಕರಣ ಉದಾರೀಕರಣ-ರಫ್ತು ಆಧಾರಿತ ನೀತಿಗಳನ್ನು ವಿಮರ್ಶಿಸುತ್ತಾ ತಂತ್ರಜ್ಞಾನದಲ್ಲಿ ಸ್ವಾಲಂಬನೆ ಸಾಧಿಸಲು ಅದರ ಅಪಾಯಗಳನ್ನು ವಿವರಿಸಿದರು. 'ಸ್ಕ್ರೂಡ್ರೈವರ್' ತಂತ್ರಜ್ಞಾನ ಇಂತಹ ನೀತಿಯ ಫಲ. ಅನಿವಾಸಿ ಭಾರತೀಯರು ಸರ್ಕಾರಿ ಉದಾರ ನೀತಿಯ ಬೆನ್ನಲುಬಾಗಿದ್ದರೂ, ಈವರೆಗೆ ತಂತ್ರಜ್ಞಾನ ಮಟ್ಟವನ್ನು ಎತ್ತರಿಸುವುದರ ಉದಾಹರಣೆಗಳೇನೂ ಕಂಡುಬಂದಿಲ್ಲ ಎಂಬುದು ರೆಡ್ಡಿಯವರ ವಾದವಾಗಿತ್ತು.

ಶ್ರೀ ದಿನೇಶ್ ಅಬ್ರೋಲ್ ದೇಶದ ರಾಷ್ಟ್ರೀಯ ಪ್ರಯೋಗಶಾಲೆಗಳು ಸ್ವಾವಲಂಬನೆಗೆ ನೀಡಿದ ಕೊಡುಗೆ ಬಗ್ಗೆ ಮಾತನಾಡಿದರು. ವೈಜ್ಞಾನಿಕ, ಕೈಗಾರಿಕಾ ಸಂಶೋಧನೆಯ ಕೌನ್ಸಿಲ್ (ಸಿ.ಎಸ್.ಐ.ಆರ್)ನ ಚರಿತ್ರೆಯನ್ನು ಅವರು ವಿವರಿಸಿ ಬೇರೆ ಬೇರೆ ಹಂತಗಳಲ್ಲಿ ಸರ್ಕಾರಿ ನೀತಿಗಳು ನೌಕರಶಾಹಿ ರೀತಿ ಹೇಗೆ ಪ್ರಯೋಗಶಾಲೆಗಳ ಕೆಲಸದ ಮೇಲೆ ಪರಿಣಾಮ ಬೀರಿದವು ಎಂದು ತೋರಿಸಿಕೊಟ್ಟರು. CSIR ಪ್ರಯೋಗಶಾಲೆಗಳಲ್ಲಿ ನಿರ್ವಹಣಾ ವಿಧಾನಕ್ಕೆ ಹಲವು ಸಲಹೆಗಳನ್ನು ನೀಡಿ, ಅವರು ಸಹ ಸರ್ಕಾರದ ಉದಾರ ನೀತಿಯನ್ನು ಕಟುವಾಗಿ ಟೀಕಿಸಿದರು. ಈ ನೀತಿಯ ಇತ್ತೀಚಿನ ಉದಾಹರಣೆಯಾದ 'ಪೆಪ್ಸಿಕೋಲಾ'ದ ಬಗ್ಗೆ ವಿವರಗಳನ್ನು ನೀಡಿ, ಅದರ ಅಪಾಯಗಳನ್ನು ಮನದಟ್ಟು ಮಾಡಿದರು.

ಪ್ರೊ|| ಎ.ಆರ್. ವಾಸುದೇವ ಮೂರ್ತಿ ಸಂಪೂರ್ಣವಾಗಿ ಸ್ಥಳೀಯವಾಗಿ ಬೆಳೆಸಿದ "ಸಿಲಿಕಾನ್ ತಂತ್ರಜ್ಞಾನ"ದ ಕಥೆಯನ್ನು ವಿವರವಾಗಿ ಹೇಳಿದರು.

ಅನಂತರ ನಡೆದ ಪರಿಚರ್ಚೆಯ ಅಧ್ಯಕ್ಷತೆಯನ್ನು ಕರ್ನಲ್ ಜಿ.ಕೆ.ರಾವ್ (ಬಿ.ಇ.ಎಲ್.ನ ಮಾಜಿ ಡೈರೆಕ್ಟರ್) ವಹಿಸಿ, ಹಲವು ಪ್ರಮುಖ ವಿಜ್ಞಾನಿ -ಕೈಗಾರಿಕೋದ್ಯಮಿಗಳು ಭಾಗವಹಿಸಿದರು. ಪರಿಚರ್ಚೆಯ ವಿಷಯವಾದ 'ಸ್ವಾವಲಂಬನೆಗೆ ಅಡೆತಡೆಗಳು-ಅದನ್ನು ದಾಟುವುದು ಹೇಗೆ?' ಬಗ್ಗೆ ಅವರು ತಮ್ಮ ಅನುಭವ ಆಧಾರಿತ ಅಭಿಪ್ರಾಯಗಳನ್ನು ಮಂಡಿಸಿದರು. ಪರಿಚರ್ಚೆಯ ಕೊನೆಯಲ್ಲಿ ಕರ್ನಲ್‌ರಾವ್ ನಮ್ಮ ಸ್ವದೇಶೀ ಬುದ್ಧಿ ಎಲ್ಲಿ ಹೋಗಿದೆ? ಆತಂಕ ವ್ಯಕ್ತಪಡಿಸಿದರು.

ವಿಚಾರ ಸಂಕಿರಣದ ಕೊನೆಯಲ್ಲಿ ಸಭಿಕರು ಚರ್ಚೆಯಲ್ಲಿ ಭಾಗವಹಿಸಿ, ಅಲ್ಲಿ ವ್ಯಕ್ತವಾದ - ಸಾಮಾನ್ಯ ಆಶಯಗಳನ್ನು ಒಂದುನಿರ್ಣಯದ ರೂಪದಲ್ಲಿ ಕ್ರೋಢಿಕರಿಸಿ ಇನ್ನೂ ಹೆಚ್ಚಿನ ವಿಜ್ಞಾನಿಗಳನ್ನು ತಲುಪಬೇಕು ಮತ್ತು ಈ ನಿರ್ಣಯವನ್ನು ಪ್ರಧಾನಿಯವರ ವೈಜ್ಞಾನಿಕ ಸಲಹಾ ಮಂಡಳಿಗೆ ಕಳಿಸಬೇಕೆಂದು ತೀರ್ಮಾನಿಸಲಾಯಿತು.

ಸಮಸ್ಯೆಯ ಅಂಚನ್ನೂ ಮುಟ್ಟದ ತೇಪೆ ಚುನಾವಣಾ ಸುಧಾರಣೆ

ವಾಸ್ತವ ಸಂಗತಿಯೆಂದರೆ ಈ ಪ್ರಸ್ತಾಪಗಳು ಸಮಸ್ಯೆಯ ಅಂಚನ್ನು ಕೂಡಾ ಮುಟ್ಟಿಲ್ಲ.

ದೇಶದ ಅತ್ಯಂತ ದೊಡ್ಡ ಪಕ್ಷ ಅಲ್ಪಸಂಖ್ಯೆಯ ಮತಗಳಿಸಿಯೂ ಸಂಸತ್ತು ಮತ್ತು ರಾಜ್ಯ ವಿಧಾನ ಮಂಡಲಗಳಲ್ಲಿ ಬಹುಮತ ಗಿಟ್ಟಿಸಿಕೊಳ್ಳಲು ಅವಕಾಶ ನೀಡಿರುವುದು ಸದ್ಯದ ಚುನಾವಣಾ ಪದ್ಧತಿಯ ಪ್ರಮುಖ ಕೊರತೆ. ೧೯೫೨ರ ಮೊದಲ ಸಾರ್ವತ್ರಿಕ ಚುನಾವಣೆಗಳಿಂದ ಹಿಡಿದು ೧೯೬೭ರವರೆಗೆ (ಕೇರಳದಲ್ಲಿ ೧೯೫೭ರಲ್ಲಿ ಬಿಟ್ಟು) ಕಾಂಗ್ರೆಸ್ ಪಕ್ಷ ಇದರಿಂದ ಪ್ರಯೋಜನ ಪಡೆಯಿತು. ೧೯೬೭ರಲ್ಲಿ ಕೆಲವು ರಾಜ್ಯಗಳಲ್ಲಿ ಮತ್ತು ೧೯೭೭ರಲ್ಲಿ ಕೇಂದ್ರದಲ್ಲಿ ವಿರೋಧ ಪಕ್ಷಗಳಿಗೆ ಇದರ ಪ್ರಯೋಜನವಾಯಿತು. ೧೯೮೦ರಲ್ಲಿ ಮತ್ತೆ ಕಾಂಗ್ರೆಸ್ (ಐ) ಅಲ್ಪಸಂಖ್ಯೆಮತ ಪಡೆದರೂ ಅಧಿಕಾರಕ್ಕೆ ಬಂತು. ೧೯೮೪ರಲ್ಲಿ ಕಾಂಗ್ರೆಸ್ (ಐ) ಸುಮಾರು ೮೦% ಸ್ಥಾನ ಪಡೆಯಿತು. ಆದರೆ ಅದು ಗಳಿಸಿದ್ದ ಮತ ಕೇವಲ ೪೯ ಶೇಕಡಾ.

ಹೀಗಾಗಿ ಪಡೆದ ಸೀಟುಗಳು ಸರಿ ಸುಮಾರು ಗಳಿಸಿದ ಮತಗಳ ಅನುಪಾತದಲ್ಲಿರುವಂತೆ ಮಾಡಲು ಅನುಪಾತಿಕ ಪ್ರಾತಿನಿಧ್ಯ ಮತ್ತು ಲಿಸ್ಟ್ ಪದ್ಧತಿಯಿರುವ ವ್ಯವಸ್ಥೆಯಿರಬೇಕೆಂದು ಹೆಚ್ಚಿನ ವಿರೋಧಪಕ್ಷಗಳು ಸೂಚಿಸಿದ್ದವು. ಆಗ ಪ್ರತಿಯೊಂದು ಪಕ್ಷವೂ ಅದು ಬಹುಮತವಿರಲಿ, ಅಲ್ಪಮತದಿರಲಿ ಸರಿ ಸುಮಾರಿಗೆ ತಾನು ಗಳಿಸಲು ಶಕ್ತವಾದ ಮತಗಳಿಗೆ ಅನುಗುಣವಾಗಿ ಸಂಸತ್ತಿನಲ್ಲಿ, ರಾಜ್ಯದ ವಿಧಾನ ಮಂಡಲಗಳಲ್ಲಿ ಪ್ರಾತಿನಿಧ್ಯ ಪಡೆಯುವುದು ಸಾಧ್ಯವಾಗುತ್ತದೆ.

ಸಹಜವಾಗಿಯೇ ಆಳುವ ಪಕ್ಷ ಇದನ್ನು ವಿರೋಧಿಸುತ್ತದೆ. ಯಾಕೆಂದರೆ ಈ ವ್ಯವಸ್ಥೆ ಜಾರಿಗೆ ಬಂದಿದ್ದರೆ ೧೯೫೨ರ ಮೊದಲ ಸಾರ್ವತ್ರಿಕ ಚುನಾವಣೆಗಳಿಂದ ಹಿಡಿದು ಪ್ರತಿಯೊಂದರಲ್ಲೂ ಕಾಂಗ್ರೆಸ್ ಪಕ್ಷ ಅಲ್ಪಮತಕ್ಕಿಳಿಯುತ್ತಿತ್ತು. ಈ ಪದ್ಧತಿ ವ್ಯಾವಹಾರಿಕವಲ್ಲ ಎಂದು ಕಾಂಗ್ರೆಸ್ (ಐ) ಕಾರ್ಯಕಾರಿ ಸಮಿತಿ ಪರವಾಗಿ ಈ ವಿಷಯವನ್ನು ಅಧ್ಯಯನ ಮಾಡಿದ ಗಾಡ್ಗಿಳ್ ಸಮಿತಿ ತಳ್ಳಿಹಾಕಿತಂತೆ.

ಪರ್ಯಾಯವಾಗಿ ಇನ್ನೊಂದು ಪ್ರಸ್ತಾಪವನ್ನೂ ಕೊಡಲಾಗಿತ್ತು. ಯಾವುದೇ ಅಭ್ಯರ್ಥಿ ೫೦ ಶೇಕಡಾ ಮತಗಳಿಸದಿದ್ದರೆ, ಅತಿ ಹೆಚ್ಚು ಮತಗಳಿಸಿದ ಮೊದಲ ಇಬ್ಬರು ಅಭ್ಯರ್ಥಿಗಳು ಮಾತ್ರವೇ ಸ್ಪರ್ಧಿಸುವ ಮರುಚುನಾವಣೆ ನಡೆಸುವುದು. ಆಗ ಇಬ್ಬರಲ್ಲಿ ಒಬ್ಬರು ೫೦ ಶೇಕಡಾ ಅಥವಾ ಹೆಚ್ಚು ಮತಗಳಿಸಿ ಅಲ್ಪ ಮತದಿಂದ ಎಂ.ಪಿ., ಎಂ.ಎಲ್.ಎ ಗಳಾಗುವ ಪರಿಸ್ಥಿತಿ ತಪ್ಪುತ್ತದೆ. ಕಾಂಗ್ರೆಸ್ (ಐ) ಇದನ್ನೂ ತಿರಸ್ಕರಿಸಿದೆ.

ಇವೆರಡೂ ಪ್ರಸ್ತಾಪಗಳು ಸೈದ್ಧಾಂತಿಕವಾಗಿ ಸರಿಯಿರಬಹುದು; ಆದರೆ ವ್ಯಾವಹಾರಿಕ ದೃಷ್ಟಿಯಿಂದ ಅದನ್ನು ತಿರಸ್ಕರಿಸಬೇಕಾಗಿದೆ ಎಂದು ಕಾಂಗ್ರೆಸ್ (ಐ) ವಾದ. ಕೇವಲ ಅಲ್ಪಮತಗಳನ್ನು ಪಡೆದ ಹಲವಾರು ಸದಸ್ಯರಿಂದ ಕೂಡಿದ ಸಂಸತ್ತು ಅಥವಾ ವಿಧಾನಮಂಡಲ ಪಡೆದಿರುವುದು ಅವರಿಗೆ ವ್ಯಾವಹಾರಿಕ ಸೌಕರ್ಯದ ಸಂಗತಿ!

ನಿಜ ಸಂಗತಿಯೇನೆಂದರೆ ೧೯೫೨ರಿಂದ ೧೯೭೭ರವರೆಗೆ, ೧೯೮೦ ರಿಂದ ಇದುವರೆಗೆ ಕೇಂದ್ರದಲ್ಲಿ ಇರುವಂತೆ ತಾವು ಪ್ರಬಲ ರಾಜಕೀಯ ಶಕ್ತಿಯಾಗಿ ಉಳಿಯುವುದು ಸಾಧ್ಯವಿಲ್ಲ ಎಂಬ ಭಯವೇ ಅವರ ವಾಸ್ತವ "ವ್ಯಾವಹಾರಿಕ ದೃಷ್ಟಿ". ಬೇರೆಲ್ಲಾ ತತ್ವ, ನೀತಿ ಆಳುವ ಪಕ್ಷದ ಸ್ಥಾನ ಉಳಿಸಿಕೊಳ್ಳುವ ಈ "ವ್ಯಾವಹಾರಿಕ ದೃಷ್ಟಿ"ಗೆ ಅಡಿಯಾಳು!

ಇತರ ಎಡ ಮತ್ತು ಪ್ರಜಾಪ್ರಭುತ್ವವಾದಿ ವಿರೋಧ ಪಕ್ಷಗಳಂತೆ ಸಿ.ಪಿ.ಐ.(ಎಂ) ಕೂಡಾ ಜಾತಿವಾದ, ಕೋಮುವಾದ, ಪ್ರಾದೇಶಿಕತೆ ಮತ್ತಿತರ ಪ್ರತ್ಯೇಕತಾವಾದಿ ತತ್ವಗಳಿಗೆ ಬದ್ಧ ವಿರೋಧಿ. ಆದರೆ ಈ ದುಷ್ಟ ಶಕ್ತಿಗಳನ್ನು ಆಡಳಿತಾತ್ಮಕ ಅಥವಾ ಕಾನೂನು ಕ್ರಮಗಳಿಂದ ಪರಿಣಾಮಕಾರಿಯಾಗಿ ಎದುರಿಸುವುದು ಸಾಧ್ಯವಿಲ್ಲ ಎಂಬುದೂ ನಮಗೆ ತಿಳಿದಿದೆ. ಎಡ ಮತ್ತು ಇತರ ಜಾತ್ಯತೀತ ಶಕ್ತಿಗಳಂತೆ ಕೋಮುವಾದಿ, ಜಾತಿವಾದಿ ಅಥವಾ ಪ್ರಾದೇಶಿಕ ಪ್ರತ್ಯೇಕತಾವಾದಿ ಪಕ್ಷಗಳೊಂದಿಗೆ ಯಾವುದೇ ಚುನಾವಣಾ ಮೈತ್ರಿ ಅಥವಾ ಹೊಂದಾಣಿಕೆ ಮಾಡಿಕೊಳ್ಳುತ್ತಿರುವುದಿಲ್ಲ ಎಂದು ನಿರ್ಧರಿಸಿದರೆ ಕಾಂಗ್ರೆಸ್ (ಐ) ಮುಖಂಡತ್ವ ಕೋಮುವಾದ ಮತ್ತು ಪ್ರತ್ಯೇಕತಾವಾದದ ವಿರುದ್ಧ ಹೋರಾಟಕ್ಕೆ ಒಂದು ದೊಡ್ಡ ಕೊಡುಗೆ ನೀಡಿದಂತಾಗುತ್ತದೆ. ಹಾಗೆ ಮಾಡದೆ, ಇಂತಹ ಮೈತ್ರಿಗಳನ್ನು ಮುಂದುವರಿಸಿಕೊಂಡು ಇಂತಹ ಪ್ರಸ್ತಾಪ ಮಾಡುವುದು ಈ ದುಷ್ಟ ಶಕ್ತಿಗಳನ್ನು ಕಾನೂನು-ಆಡಳಿತ ನಿಷೇಧವನ್ನು [illegible] ತಪ್ಪಿಸಿಕೊಳ್ಳುವ ತಂತ್ರಗಳತ್ತ ತಳ್ಳಿದ ಹಾಗಾಗುತ್ತದೆ.

ಮತದಾನದ ವಯಸ್ಸನ್ನು ೨೧ರಿಂದ ೧೮ಕ್ಕೆ ಇಳಿಸಬೇಕೆಂಬ ವಿರೋಧ ಪಕ್ಷಗಳ ಒತ್ತಾಯವನ್ನು ಮಾತ್ರ ಕಾಂಗ್ರೆಸ್ (ಐ)ನ ಈ ಸಮಿತಿ ಒಪ್ಪಿಕೊಂಡಿದೆ.

ಇದರಿಂದ ಯುವಕರ ಈಗಿನ ಪೀಳಿಗೆ ರಾಜಕೀಯ ಪ್ರಕ್ರಿಯೆಯಲ್ಲಿ ನೇರವಾಗಿ ಭಾಗವಹಿಸಿ ಭಾರತೀಯ ಸಮಾಜದ ಸರ್ವತೋಮುಖ ಮುನ್ನಡೆಗೆ ಕಾಣಿಕೆ ನೀಡಲು ಅವರಿಗೆ ಅವಕಾಶ ದೊರೆಯುತ್ತದೆ. ಮೊತ್ತಮೊದಲ ಬಾರಿಗೆ ಮತದಾರರ ಪಟ್ಟಿಗೆ ಸೇರುವ ಯುವಜನ ತಮ್ಮ ಈ ಹಕ್ಕನ್ನು ಬಳಸಿ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ಹೋರಾಟಗಳನ್ನು ಮತ್ತು ಇತರ ವ್ಯಾಪಕ ಪ್ರಜಾಪ್ರಭುತ್ವ ಹಕ್ಕುಗಳ ಹೋರಾಟವನ್ನು ಖಂಡಿತವಾಗಿಯೂ ಬಲಗೊಳಿಸುತ್ತಾರೆ.

ಕಾಂಗ್ರೆಸ್ (ಐ)ನ ಇತರ ಪ್ರಸ್ತಾಪಗಳೆಲ್ಲಾ ಈ ಸಮಸ್ಯೆಯ ಅಂಚಿನಲ್ಲಿ ಅಲ್ಪಸ್ವಲ್ಪ ಪರಿಣಾಮ ಮಾತ್ರ ಬೀರಬಲ್ಲವಷ್ಟೆ. ಈಗಿರುವ ಏಕ ಸದಸ್ಯ ಚುನಾವಣಾ ಆಯೋಗವನ್ನು ಬಹುಸದಸ್ಯ ಆಯೋಗವಾಗಿ ಮಾಡುವುದು, ಕೆಲವು ಸ್ಪರ್ಧಿಗಳು ಸುಮ್ಮ-ಸುಮ್ಮನೇ ಚುನಾವಣೆಗೆ ನಿಲ್ಲಿಸುವುದನ್ನು ತಪ್ಪಿಸುವುದು, ಮತದಾರರಿಗೆ ಪರಿಚಯ ಪತ್ರ ಇವೆಲ್ಲಾ ಒಳ್ಳೆಯ ಪ್ರಸ್ತಾಪಗಳೇ ಆದರೂ ಪ್ರಮುಖ ಕೊರತೆಗಳ ನಿವಾರಣೆಯಾಗದೆ ಮತದಾರರ ನಿಜವಾದ ಇಚ್ಛೆಯನ್ನು ವಿಕೃತಗೊಳಿಸುವ ಈಗಿನ ಪದ್ಧತಿಯ ಮೇಲೆ ಅವು ಲೇಶಮಾತ್ರ ಪ್ರಭಾವ ಕೂಡಾ ಬೀರಲಾರವು. ಆದ್ದರಿಂದ **ಕಾಂಗ್ರೆಸ್ (ಐ) ಕಾರ್ಯಕಾರೀ ಸಮಿತಿ ಈಗ ಸೂಚಿಸಿರುವ ತೇಪೆ ಸುಧಾರಣೆಗಳ ಬದಲು ನೈಜ ಚುನಾವಣಾ ಸುಧಾರಣೆಗಳಿಗಾಗಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಹೋರಾಡಬೇಕು.**

ಕಾಂಗ್ರೆಸ್ (ಐ) ನ ಇನ್ನೊಂದು ಸೂಚನೆಯೆಂದರೆ ಕೋಮುವಾದಿ ಮತ್ತು ಪ್ರತ್ಯೇಕತಾವಾದಿ ಪಕ್ಷಗಳು ಚುನಾವಣೆಯಲ್ಲಿ ಭಾಗವಹಿಸದಂತೆ ಮಾಡಬೇಕು. ದೇಶದ ವಿವಿಧ ಭಾಗಗಳಲ್ಲಿ ಕೋಮುವಾದಿ ಮತ್ತು ಪ್ರತ್ಯೇಕತಾವಾದಿ ಶಕ್ತಿಗಳೊಂದಿಗೆ ಕಾಂಗ್ರೆಸ್ (ಐ) ತಮ್ಮ ಸಂಬಂಧಗಳನ್ನು ಕಡಿದುಕೊಂಡಿದ್ದರೆ ಈ ಪ್ರಸ್ತಾಪಕ್ಕೆ ಸ್ವಲ್ಪವಾದರೂ ಬೆಲೆ ಬರುತ್ತಿತ್ತು.

ಕೇರಳದಲ್ಲಿ ಮುಸ್ಲಿಂ ಲೀಗ್, ಕೇರಳ ಕಾಂಗ್ರೆಸ್‌ಗಳು ಈಗಲೂ ತನ್ನ ಚುನಾವಣಾ ಮಿತ್ರರುಗಳಾಗಿರುವಾಗ, ತಮಿಳುನಾಡಿನಲ್ಲಿ ಮುಸ್ಲಿಂಲೀಗ್‌ನೊಂದಿಗೆ ಇಂತಹದೇ ಒಂದು ಮೈತ್ರಿಗೆ ಸತತಪ್ರಯತ್ನ ಮಾಡುತ್ತಿರುವಾಗ, ತ್ರಿಪುರದಲ್ಲಿ ಟಿ.ಎನ್.ವಿ.ಯೊಂದಿಗೆ ಸೇರಿಯವಾಗ ಇಂತಹ ಸೂಚನೆ ಮಾಡಿರುವುದು ರಾಜಕೀಯ ಅಪ್ರಾಮಾಣಿಕತೆಯ ಪರಮಾವಧಿ.

ಆಂಧ್ರದಲ್ಲಿ ಎ.ಐ.ಕೆ.ಎಸ್. ೨೬ನೇ ಸಮ್ಮೇಳನ ಮೇ. ೨ನೇ ವಾರದಲ್ಲಿ

೧) ಅಖಿಲ ಭಾರತ ಕಿಸಾನ ಸಮ್ಮೇಳನದ ಪೂರ್ವದಲ್ಲಿ ಎಲ್ಲಾ ರಾಜ್ಯ ಸಮ್ಮೇಳನಗಳನ್ನು ಮಾರ್ಚ್ ಕೊನೆಯೊಳಗೆ ಮುಗಿಸಬೇಕು. ಜಿಲ್ಲಾ ಸಮ್ಮೇಳನಗಳನ್ನು ಜನವರಿ ಕೊನೆಯೊಳಗೆ ಮುಗಿಸಬೇಕು. ಅದಕ್ಕೆ ಪೂರ್ವದಲ್ಲಿ ತಾಲೂಕು ಸಮ್ಮೇಳನಗಳನ್ನು ನಡೆಸುವಂತಾಗಬೇಕು.

೨) ಅಖಿಲ ಭಾರತ ಮಟ್ಟದ ಭೂ ಸುಧಾರಣಾ ಸಮಾವೇಶವನ್ನು ಏಪ್ರಿಲ್ ತಿಂಗಳಲ್ಲಿ ನವದೆಹಲಿಯಲ್ಲಿ ನಡೆಸಲಾಗುವುದು. ಅದಕ್ಕೆ ಪೂರ್ವಭಾವಿಯಾಗಿ ರಾಜ್ಯ ಸಮಾವೇಶ, ಜಿಲ್ಲಾ ಸಮಾವೇಶಗಳನ್ನು ಮುಗಿಸಬೇಕಾಗಿದೆ.

೩) ಕೃಷಿಕೂಲಿಕಾರ ಕೇಂದ್ರೀಯ ಸಮಗ್ರ ಮಸೂದೆಯನ್ನು ಒತ್ತಾಯಿಸಿ ಏಪ್ರಿಲ್ ತಿಂಗಳಲ್ಲಿ ನವದೆಹಲಿಯಲ್ಲಿ ಸಮಾವೇಶವನ್ನು ನಡೆಸಲಾಗುವುದು.

ಸಿ.ಎಸ್.ಬಾಳಿ
ಕಾರ್ಯದರ್ಶಿ
ಕರ್ನಾಟಕ ಪ್ರಾಂತ ರೈತ ಸಂಘ

ರೈತ ಸಂಘದ ಚಟುವಟಿಕೆಗಳು

ಹೂವಿನ ಹಡಗಲಿ

ಇತ್ತೀಚೆಗೆ ತಾಲ್ಲೂಕು ಸಂಘಟನಾ ಸಮಿತಿ ರಚಿಸಲಾಯಿತು. ಸಂಚಾಲಕರಾಗಿ ಮರೇಗೌಡ, ಸಹ ಸಂಚಾಲಕರಾಗಿ ರೂಪ್ಲಾ ನಾಯಕ ರನ್ನೊಳಗೊಂಡ 15 ಜನರ ಸಮಿತಿ ರಚಿಸಲಾಗಿದೆ. ಈ ಸಮಿತಿ ನೇತೃತ್ವದಲ್ಲಿ ನಾಗ್ರಿ ಬಸಾಪುರ, ಹೊಳಲು, ನಡುವಿನ ತಾಂಡ, ಡೊಂಬ್ರಳ್ಳಿ ತಾಂಡ, ಬಸರಕೋಡ ತಾಂಡ,ಬಾವಿಹಳ್ಳಿ, ಹುಗಲೂರು ಗ್ರಾಮಗಳಲ್ಲಿ ಸಭೆಗಳನ್ನು ನಡೆಸಿ ಗ್ರಾಮ ಸಮಿತಿಗಳನ್ನು ರಚಿಸಲಾಗಿದೆ.

ರೈತ ಸಂಘಕ್ಕೆ ಸದಸ್ಯತ್ವ ನೋಂದಾಯಿಸುವ ಕಾರ್ಯವನ್ನು ತೀವ್ರಗೊಳಿಸ ಲಾಗಿದೆ. ಹೂವಿನ ಹಡಗಲಿಯಲ್ಲಿ ನಡೆದ ಭೂ ಆಕ್ರಮಣ ಚಳುವಳಿಯಲ್ಲಿ ರೈತ ಸಂಘ, ಇದುವರೆವಿಗೂ 280 ಎಕರೆ ಭೂಮಿಯನ್ನು ವಶಪಡಿಸಿಕೊಂಡು ಅದರಲ್ಲಿ ರೈತರು ಸಾಗುವಳಿ ಮಾಡು ತ್ತಿದ್ದಾರೆ. ತಾಲೂಕಿನಾದ್ಯಂತ ಈ ಭೂ ಆಕ್ರಮಣ ಚಳುವಳಿಯಿಂದ ಸ್ಫೂರ್ತಿ ಪಡೆದು ರೈತರು ರೈತ ಸಂಘ ಕಟ್ಟಲು ಮುಂದಾಗುತ್ತಿದ್ದಾರೆ. ಕಾರ್ಯಕರ್ತರಲ್ಲಿ ಉತ್ಸಾಹ ಬೆಳೆದು ಬರುತ್ತಿದೆ.

ನಗನೂರು ಗ್ರಾಮ ಘಟಕ

ರೈತ ಸಂಘದ ಸುರಪುರ ತಾಲ್ಲೂಕು ನಗನೂರಿನಲ್ಲಿ ಗ್ರಾಮ ಘಟಕವನ್ನು ರಚಿಸಲಾಗಿದ್ದು ಗುರುನಾಥಪ್ಪ ದೇಸಾಯಿ (ಅಧ್ಯಕ್ಷ) ಶರಣಪ್ಪ ಕೆಂಚಾಗೋಳು, ವೀರಭದ್ರಪ್ಪ ಸಾಹು ಸಜ್ಜನ್ (ಉಪಾಧ್ಯಕ್ಷ) ಹರಿಶ್ಚಂದ್ರ ಕಟ್ಟಿಮನಿ (ಪ್ರ.ಕಾರ್ಯದರ್ಶಿ) ಶಾಂತಣ್ಣ ಬೆನ್ನೂರ ಗುರುರಾಜ ಕುಲಕರ್ಣಿ (ಸಹ ಕಾರ್ಯದರ್ಶಿ) ಅಜೀಜಸಾಬ ಟೇಲರ್(ಖಜಾಂಚಿ) ಯವರನ್ನೂ ಆಯ್ಕೆ ಮಾಡಲಾಗಿದೆ.

ದೇವಲ್ ಕೆರೆ ಘಟಕ

ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿನ ದೇವಲಕೆರೆ ಘಟಕವನ್ನು ನವಂಬರ್ 2 ರಂದು ಉದ್ಘಾಟಿಸ ಲಾಯಿತು. ರೈತ ಸಂಘದ ಜಿಲ್ಲಾ ಮುಖಂಡರಾದ ಕಾ॥ಗೋವಿಂದ ರಾಜು, ಹನುಮಂತರಾಯ, ಹೆಚ್.ಸಿ.ಚನ್ನಪ್ಪ ರವರ ಹಾಗೂ ಉಪನ್ಯಾಸಕರಾದ ರಂಗಾರೆಡ್ಡಿ ಕೋಡಿರಾಂಪುರ, ಅಳ್ಳಪ್ಪನವರುಗಳು ಸಭೆಯಲ್ಲಿ ಮಾತನಾಡಿದರು.

ಸಿರುಗುಪ್ಪ

ರೈತಸಂಘ, ಡಿ.ವೈ.ಎಫ್.ಐ. ಜಂಟಿಯಾಗಿ ಸ್ಥಳೀಯ ರೈತರ ಬೇಡಿಕೆಗಳನ್ನು ಒತ್ತಾಯಿಸಿ ತಾಲ್ಲೂಕು ಕಛೇರಿ, ನೀರಾವರಿ ಇಲಾಖೆ, ಪುರಸಭೆಗಳಿಗೆ ಮೆರವಣಿಗೆಯಲ್ಲಿ ತೆರಳಿ ಮನವಿ ಪತ್ರವನ್ನು ಅರ್ಪಿಸ ಲಾಯಿತು. ಐನೂರಕ್ಕೂ ಹೆಚ್ಚು ರೈತ-ಯುವಜನರು ಈ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ರೈತ ಸಂಘದ ಬಸವ ನಗೌಡ ಯುವನಾಯಕರಾದ ಎಲ್ಲಪ್ಪ, ವಿದ್ಯಾರ್ಥಿ ಮುಖಂಡ ಷಣ್ಮುಖಪ್ಪನವರು ನೇತೃತ್ವವಹಿಸಿದ್ದರು.

ಸಿ.ಪಿ.ಐ.(ಎಂ) ಹೋರಾಟಗಳು

ದ.ಕ.ಜಿಲ್ಲೆ ಬಂಟ್ವಾಳದ ನರಿ ಕೊಂಬುಮಂಡಲ ಪಂಚಾಯತ್ 50% ರಷ್ಟು ಬಾರಿ ತೆರಿಗೆ ಹೆಚ್ಚಳಮಾಡಿ ಹೊರಡಿಸಿರುವ ಪ್ರಕಟಣೆಯನ್ನು ಸಿ.ಪಿ.ಐ.(ಎಂ) ಪಕ್ಷದ ತಾಲ್ಲೂಕು ಸಮಿತಿ ತೀವ್ರವಾಗಿ ಖಂಡಿಸಿದೆ. ಈ ಕುರಿತು ನರಿಕೊಂಬು ಗ್ರಾಮ ಘಟಕ ಡಿಸೆಂಬರ್ 11ರಂದು ಸಭೆ ಸೇರಿ ನಿರ್ಣಯ ಕೈಗೊಂಡು ಹೆಚ್ಚಿಸಿರುವ ತೆರಿಗೆಯನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಿ ಡಿ.12ರಂದು ನೂರಾರು ಜನರ ಸಹಿಯನ್ನೊಳಗೊಂಡ ಮನವಿ ಪತ್ರವನ್ನು ಪಂಚಾಯತ್ ಬೋರ್ಡಿಗೆ ಅರ್ಪಿಸಲಾಯಿತು.

ಬಂಟ್ವಾಳ ಪೇಟೆಯ ಬೀದಿಗಳಲ್ಲಿ ಸಂಚರಿಸುವ ಸಾರ್ವಜನಿಕರು, ಶಾಲಾ ಮಕ್ಕಳಿಗೆ ತೊಂದರೆ ನೀಡುತ್ತಿದ್ದ ಹೋರಿಯೊಂದನ್ನು ಪಕ್ಷದ ಕಾರ್ಯಕರ್ತರು ಹಿಡಿದು ಪುರಸಭೆಗೆ ಒಪ್ಪಿಸಿರುತ್ತಾರೆ.

ಗುಲ್ಬರ್ಗಾ

ಮುಂಬರುವ ಗುಲ್ಬರ್ಗಾ ಮಹಾನಗರ ಸಭೆ ಚುನಾವಣೆಯ ಕುರಿತು ಜಿಲ್ಲಾಸಮಿತಿ ಸಭೆ ಚರ್ಚಿಸಿ ನಗರದಲ್ಲಿ ತಲೆ ಎತ್ತುತ್ತಿರುವ ಜಾತಿವಾದಿ ಶಕ್ತಿಗಳ ವಿರುದ್ಧ ಜನರು ಜಾಗೃತರಾಗಿರ ಬೇಕೆಂದು ಪಕ್ಷ ಮನವಿ ಮಾಡಿದೆ. ಎಡ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಬೆಂಬಲಿಸಿ ಸರ್ವಾಧಿಕಾರಿ ಜಾತಿವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸಬೇಕೆಂದು ಕರೆ ನೀಡಿದೆ.

ಬಳ್ಳಾರಿ

ಜಿಲ್ಲೆಯ ಹರಪ್ಪನಹಳ್ಳಿ, ಬಳ್ಳಾರಿ, ಹೂವಿನಹಡಗಲಿ ಮುಂತಾದೆಡೆಗಳಲ್ಲಿ ತ್ರಿಪುರಾದಲ್ಲಿ ಕಾಂಗ್ರೆ ಟಿ.ಯು.ಜೆ.ಎಸ್. ನಡೆಸುತ್ತಿರುವ ಅಮಾನುಷ ಕಗ್ಗೊಲೆ ಯನ್ನು ಖಂಡಿಸಿ ಹೋರಾಡುತ್ತಿರುವ ಸಿ.ಪಿ.ಐ.(ಎಂ) ಪಕ್ಷದ ಕಾರ್ಯಕರ್ತರಿಗೆ ಸೌಹಾರ್ದ ಬೆಂಬಲ ವ್ಯಕ್ತಪಡಿಸಿ ಇತ್ತೀಚೆಗೆ "ತ್ರಿಪುರಾದಿನ"ವನ್ನು ಆಚರಿಸಲಾಯಿತು. ಬಳ್ಳಾರಿಯಲ್ಲಿ 150 ಜನರ ಪಂಜಿನ ಮೆರವಣಿಗೆ ಪ್ರಮುಖ ಬೀದಿಯಲ್ಲಿ ಹಾದು ಕಾಂಗ್ರೆಸ್(ಐ) ಭೂತವನ್ನು ದಹನ ಮಾಡಿ ಬಹಿರಂಗಸಭೆಯನ್ನು ನಡೆಸ ಲಾಯಿತು. ಹರಪ್ಪನಹಳ್ಳಿಯಲ್ಲಿ ಸಂಜೆ ಪಂಜಿನ ಮೆರವಣಿಗೆ ನಡೆಸಿ ಹಳೆಯ ಬಸ್ ನಿಲ್ದಾಣದಲ್ಲಿ ಬಹಿರಂಗ ಸಭೆ ನಡೆಸಲಾಯಿತು. ಸಭೆಯಲ್ಲಿ ಪರುಶ ರಾಮ, ಕೃಷ್ಣಾಜಿ ಕಲಾಲ್, ಗೌಸ್ ರವರು ಮಾತನಾಡಿದರು.

ಬೀಡಿಕಾರ್ಮಿಕರ ಯಶಸ್ವಿ ಮುಷ್ಕರ

ಬಂಟ್ವಾಳ

ಬೀಡಿ ಕೈಗಾರಿಕೆಯಲ್ಲಿ ಕಂಟ್ರಾಕ್ಟ್ ಪದ್ಧತಿ ರದ್ದುಗೊಳಿಸುವ ಕುರಿತು ಸರ್ಕಾರ ನೇಮಿಸಿದ ಸಮಿತಿ ಅಧ್ಯಕ್ಷರಾದ ಕಾ॥ವಿ.ಜೆ.ಕೆ.ನಾಯರ್ ರವರು ಬಂಟ್ವಾಳಕ್ಕೆ ಬಂದಾಗ ಒಂದು ಸಾವಿರ ಬೀಡಿ ಕಾರ್ಮಿಕರು ಅವರಿಗೆ ಮನವಿ ಅರ್ಪಿಸಿದರು. ಅಕ್ಟೋಬರ್ 31 ರಂದು ಒಂದು ದಿನದ ಮುಷ್ಕರ ನಡೆಸಿದ ಪರಿಣಾಮವಾಗಿ ಎಲ್ಲಾ ಬೀಡಿ ಡಿಪೋ ಗಳು ಮುಚ್ಚಲ್ಪಟ್ಟಿದ್ದವು. ಇಲ್ಲಿನ ಲೋಡ್ ಮತ್ತು ಅನ್‌ಲೋಡ್ ಕಾರ್ಮಿಕರ ಹೋರಾಟದ ಫಲವಾಗಿ ತಮ್ಮ ಸಂಬಳದಲ್ಲಿ ಶೇ. 23 ಹೆಚ್ಚಳ ಪಡೆದಿದ್ದಾರೆ.

ಬೀಡಿ ಕಾರ್ಮಿಕರಿಗೆ ಕನಿಷ್ಠ ಕೂಲಿ 750 ರೂ. ನೀಡಬೇಕು. ಕಂಟ್ರಾಕ್ಟ್ ಪದ್ಧತಿ ರದ್ದು ಗೊಳಿಸಬೇಕು ಮುಂತಾದ ಬೇಡಿಕೆಗಾಗಿ ನಡೆದ ಬೀಡಿ ಕಾರ್ಮಿಕರ ಒಂದು ದಿನದ ಮುಷ್ಕರ ತುಮಕೂರು ಜಿಲ್ಲೆಯಾದ್ಯಂತ ಯಶಸ್ವಿಗೊಂಡಿದೆ. ತುಮಕೂರಿನ ಜ್ಯೋತಿ ಹೋಂ ಇಂಡಸ್ಟ್ರೀಸ್ ಮುಂದೆ ಪ್ರದರ್ಶನ ಸಭೆ ಯಲ್ಲಿ ಮದೂದ್ ಖಾನ್, ಮಹಮದ್ ದಸ್ತಗೀರ್ ರವರು ನೇತೃತ್ವ ವಹಿಸಿದ್ದರು. ಕುಣಿಗಲ್ ನಲ್ಲಿ ಮನೆ ಮನೆಯಲ್ಲಿ ಬೀಡಿ ಕಟ್ಟುವ ಕಾರ್ಯ ಪೂರ್ಣ ಸ್ತಬ್ಧವಾಗಿತ್ತು. ಬಡೇಸಾಬ್, ಯೂನಸ್ ಸಾಬ್, ಅಂಜಪ್ಪ ನೇತೃತ್ವ ವಹಿಸಿದ್ದರು. ಸಿರಾದಲ್ಲಿಯೂ ಸಹ ಮುಷ್ಕರ ಯಶಸ್ವಿಯಾದ ವರದಿ ಯಾಗಿದೆ.

ಕೈಗಾ ಸ್ಥಾಪನೆ ವಿಳಂಬವಾದರೆ ಉಗ್ರ ಚಳುವಳಿ

ನವೆಂಬರ್ 27ರಿಂದ 30ರ ವರೆವಿಗೆ ಬೆಂಗಳೂರಿನಲ್ಲಿ ನಡೆದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ 13ನೇ ಸಮ್ಮೇಳನದ ಕರೆಯಂತೆ ಡಿಸಂಬರ್ 20ರಂದು ಕರ್ನಾಟಕ ರಾಜ್ಯದಾದ್ಯಂತ 'ಕೈಗಾ ದಿನಾಚರಣೆ'ಯನ್ನು ಆಚರಿಸಿದ ವರದಿಗಳು ಬರುತ್ತಿವೆ. ಡಿಸೆಂಬರ್ 20 ರಂದು ಬೆಂಗಳೂರು ಜಿಲ್ಲಾ ಸಮಿತಿ ಆಶ್ರಯದಲ್ಲಿ ವಿಧಾನಸೌಧದ ಮುಂದೆ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳ ನಾಯಕರು ಕಾರ್ಯಕರ್ತರು ಸಾಮೂಹಿಕ ಧರಣಿ ಸತ್ಯಾಗ್ರಹ ನಡೆಸಿದರು. ಜಿಲ್ಲಾ ಕಾರ್ಯದರ್ಶಿ ಹಾಗೂ ರಾಜ್ಯ ಸೆಕ್ರಟಾರಿಯೇಟ್ ಸದಸ್ಯರಾದ ಕಾ॥ಸೂರ್ಯ ನಾರಾಯಣ್‌ರಾವ್ ರವರ ನೇತೃತ್ವದಲ್ಲಿ ಜಿಲ್ಲಾ ಸಮಿತಿ ಸದಸ್ಯರು ರೈತ, ಕಾರ್ಮಿಕ, ವಿದ್ಯಾರ್ಥಿ ಯುವಜನ, ಮಹಿಳೆಯರ ಸಂಘಟನೆಯ ಕಾರ್ಯಕರ್ತರು ಬೆಳಿಗ್ಗೆ 10ರಿಂದ ಸಂಜೆ ವರೆವಿಗೂ ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿ ಸಂಜೆ 4 ಗಂಟೆಗೆ ಮೈಸೂರು ಬ್ಯಾಂಕ್ ವೃತ್ತದಿಂದ ಮೆರವಣಿಗೆ ಯೊಂದರನ್ನು ನಡೆಸಿ ಕಬ್ಬನ್ ಪಾರ್ಕ್‌ನಲ್ಲಿ ಬಹಿರಂಗ ಸಭೆ ನಡೆಸಲಾಯಿತು.

ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ ಕಾ॥ ಎಸ್.ಸೂರ್ಯನಾರಾಯಣರಾವ್ ರವರು ರಾಜ್ಯದಲ್ಲಿ ವಿದ್ಯುತ್ ಅಭಾವದಿಂದ ನೂರಾರು ಕೈಗಾರಿಕೆಗಳು ಲೇ ಆಫ್, ಲಾಕೌಟ್, ರಿಟ್ರೆಂಚ್‌ಮೆಂಟ್ ಮಾಡಿರುವ ಕಾರಣ ಲಕ್ಷಾಂತರ ಕಾರ್ಮಿಕರು ಬೀದಿ ಪಾಲಾಗಿದ್ದಾರೆ. ಉದ್ಯೋಗಿಗಳು ನಿರುದ್ಯೋಗಿಗಳಾಗುತ್ತಿರುವ ಈ ಕಾಲದಲ್ಲಿ ರಾಜ್ಯಕ್ಕೆ ಪರಮಾಣು ವಿದ್ಯುತ್ ಅತ್ಯಂತ ಅಗತ್ಯ ಹಾಗೂ ಅನಿವಾರ್ಯವೆಂದು ಹೇಳಿದರು. ನಮ್ಮ ದೇಶ ಎಂದೂ ಹಿಂದುಳಿದು ತಮ್ಮ ಕೈಗೊಂಬೆಯಾಗಿರ ಬೇಕೆಂದು ಬಯಸುವ ಸಾಮ್ರಾಜ್ಯಶಾಹಿ ಅಮೇರಿಕಾದ ಸಂಚನ್ನು ಕೈಗಾ ಸ್ಥಾಪನೆ ವಿರೋಧಿಸುತ್ತಿರುವ ಪರಿಸರ ವಾದಿಗಳು ಅರ್ಥಮಾಡಿಕೊಂಡಿಲ್ಲವೆಂದು ಆರೋಪಿಸಿ, ಭೂಪಾಲ ಅನಿಲ ದುರಂತ ಸಂಭವಿಸಿ ಸಾವಿರಾರು ಭಾರತೀಯರು ತಮ್ಮ ಪ್ರಾಣ ತೆತ್ತ ಸಂದರ್ಭದಲ್ಲಿ ಮೌನವಹಿಸಿದವರು ಕೈಗಾ ವಿರೋಧಿಸುತ್ತಿರುವ ಔಚಿತ್ಯವನ್ನು ಅವರು ಪ್ರಶ್ನಿಸಿದರು.

ವಿಜ್ಞಾನಿಗಳು ಈ ಸಂದರ್ಭದಲ್ಲಿ ಆಸಕ್ತಿ ವಹಿಸಬೇಕೆಂದು ಮನವಿ ಮಾಡಿದ ಅವರು ಕೇಂದ್ರ ಹಾಗೂ ರಾಜ್ಯ ಸರ್ಕಾರ ಕೈಗಾ ಯೋಜನೆಯನ್ನು ಕೈಬಿಡುವ ಯೋಚನೆ ಮಾಡಿದರೆ ಕೈಗಾ ಪರಶಕ್ತಿಗಳೊಂದಿಗೆ ಸೇರಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ರಾಜ್ಯದಾದ್ಯಂತ ಉಗ್ರ ಸ್ವರೂಪದ ಕೈಗಾರಿಕಾ ಚಳುವಳಿಗೆ ಕರೆ ನೀಡಲಾಗುವುದೆಂದು ಎಚ್ಚರಿಸಿದರು. ಕಾ॥ಟಿ. ಎಸ್. ಅನಂತರಾಮ್ ಹಾಗೂ ಎಸ್.ಆರ್. ಆರಾಧ್ಯರವರು ಸಭೆಯಲ್ಲಿ ಮಾತನಾಡಿದರು.

ಬಹಿರಂಗ ಸಭೆಯ ನಂತರ ನಿಯೋಗ ತೆರಳಿ ಮುಖ್ಯಮಂತ್ರಿ ಹಾಗೂ ರಾಜ್ಯಪಾಲರಿಗೆ ಮನವಿ ಪತ್ರವನ್ನು ಅರ್ಪಿಸಿ ಕೈಗಾ ಯೋಜನೆಯನ್ನು ಶೀಘ್ರ ಪೂರ್ಣಗೊಳಿಸ ಬೇಕೆಂದು ಒತ್ತಾಯಿಸಲಾಯಿತು.

ಒಂದು ವಾರ ನಗರದ ವಿವಿಧ ಬಡಾವಣೆಗಳಲ್ಲಿ ಪಕ್ಷ ಸಾರ್ವಜನಿಕ ಸಭೆಗಳನ್ನು ನಡೆಸಿ ಸಹಸ್ರಾರು ಕರಪತ್ರ ಪೋಸ್ಟರ್ ಮುದ್ರಿಸಿ ವ್ಯಾಪಕವಾಗಿ ಜನ ಜಾಗೃತಿಯನ್ನುಂಟು ಮಾಡಿತಲ್ಲದೆ ಶರತ್ ಚಂದ್ರರವರು ಬರೆದ ಕೈಗಾ ಕುರಿತಾದ ಕಿರು ಪುಸ್ತಕವನ್ನು ಬಿಡುಗಡೆ ಮಾಡಿದೆ.

ಡಿ.ವೈ.ಎಫ್.ಐ. 8ನೇ ಸ್ಥಾಪನಾ ದಿನಾಚರಣೆ

ಡಿ.14ರಂದು ಆಳಂದ ತಾಲ್ಲೂಕು ಲಾಡಮುಗಳಿಯಲ್ಲಿ ಘಟಕವನ್ನು ರೈತಸಂಘದ ಕಾ॥ಬಾಬುಮುಗಳಿ ಯವರು ಉದ್ಘಾಟಿಸಿದರು. ಜಿಲ್ಲಾ ಪರಿಷತ್ ಸದಸ್ಯರಾದ ಕಾ॥ಮಾರುತಿ ಮಾನ್ಪಡೆಯವರು ಮುಖ್ಯ ಅತಿಥಿ ಗಳಾಗಿದ್ದರು. ಎಸ್.ಎಫ್.ಐ.ನ ಹಣಮಂತಗುತ್ತಿಗೆ, ಮಂಡಲ ಪಂಚಾ ಯತ್ ಸದಸ್ಯಮೇಘರಾಜ ಕಠಾರೆ ಯವರು ಮಾತನಾಡಿದರು. ಅರವಿಂದ ಪ್ಯಾನಾಗೂರ ಅಧ್ಯಕ್ಷತೆ ವಹಿಸಿದ್ದರು. ನೂತನ ಸಮಿತಿಗೆ ಸಂಗಣ್ಣಾ ಸರಡೆ (ಅಧ್ಯಕ್ಷ) ತಿಪ್ಪಣ್ಣಾಪೂಜಾರಿ ಬಾಬುಶಂಕೆ, ಅಪ್ಪಾರಾವ್,ನೀಲಕಂಠ ಯ(ಉಪಾಧ್ಯಕ್ಷ ನಾಗಣ್ಣ ನಾಗೂರ (ಕಾರ್ಯದರ್ಶಿ) ಮತ್ತು ರಮೇಶ್ ಉದೇಶಿ ಖಜಾಂಚಿ ಯವರನ್ನುಆಯ್ಕೆಮಾಡಲಾಯಿತು.

ಅಂಬಲಗಾ

ಡಿ.12ರಂದು ಬಂಡವಾಳಶಾಹಿ ಸಮಾಜದಲ್ಲಿ ಇಂದಿನ ಯುವಜನರ ನೈತಿಕ ಹೊಣೆ ಕುರಿತು ವಿಚಾರ ಸಂಕಿರಣವೊಂದನ್ನು ನಡೆಸಲಾಯಿತು.

ಬಸ್ರೂರು

ಕುಂದಾಪುರ ತಾಲ್ಲೂಕಿನ ಬಸ್ರೂರು ಬಳಿ ಇರುವ ಕೊಳ್ಕೇರಿ ಘಟಕದ ಉದ್ಘಾಟನೆ ಅಕ್ಟೋಬರ್ 29 ರಂದು ನಡೆದು ಜಿಲ್ಲಾ ಸಹಕಾರ್ಯದರ್ಶಿ ಗೋವಿಂದಮಾರ್ಗೋಳಿ ತಾಲ್ಲೂಕು ಅಧ್ಯಕ್ಷ ವೆಂಕಟೇಶ ಕೋಣಿ ಯವರು ಹಾಗೂ ಸಂಜೀವಪ್ಪ ನವರು ಸಭೆಯಲ್ಲಿ ಮಾತನಾಡಿದರು. 21 ಜನರ ನೂತನ ಸಮಿತಿಗೆ ಶೀನು ಆಚಾರಿ (ಅಧ್ಯಕ್ಷ) ಆರ್.ಶಂಕರ್, ಕುಮಾರಿ ಜಲಜ (ಉಪಾಧ್ಯಕ್ಷರು) ಮಹಾಲಿಂಗ (ಕಾರ್ಯದರ್ಶಿ) ಕುಮಾರಿ ಬಾಬಿ, ರಮೇಶ್ (ಜೊತೆ ಕಾರ್ಯದರ್ಶಿಗಳು) ರವರುಗಳನ್ನು ಆಯ್ಕೆಮಾಡಲಾಯಿತು.

ವಾರ್ಷಿಕೋತ್ಸವಗಳು

ಡಿ.ವೈ.ಎಫ್.ಐ. 8ನೇ ಸ್ಥಾಪನಾ ದಿನಾಚರಣೆಯನ್ನು ತೋರಣಗಲ್ಲು ಘಟಕ ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿ ಸುವುದರ ಮೂಲಕ ಆಚರಿಸಿತು. ಸಂಡೂರಿನ ರೈತ ನಾಯಕ ಶಂಕಣ್ಣ ನವರು ಧ್ವಜಾರೋಹಣ ಮಾಡಿದರು. ಸಿ.ಪಿ.ಐ. ಶಾಸಕ ಯು.ಭೂಪತಿ ಬಹುಮಾನ ವಿತರಿಸಿದರು. ರೈತ ಸಂಘದ ಕಾ॥ಯು.ಬಸವರಾಜು, ವಿದ್ಯಾರ್ಥಿ ಮುಖಂಡ ಷಣ್ಮುಖಪ್ಪ ಯುವ ನಾಯಕ ರಮೇಶ್ ರವರು ಮಾತನಾಡಿದರು. ತೋರಣಗಲ್ಲು ಸಮುದಾಯ ಘಟಕದವರು 'ಕಲಿಕೆ ಹೆಗ್ಗಳಿಕೆ' ಮತ್ತು 'ಬೆಳೆದವರು' ಎಂಬ ನಾಟಕಗಳನ್ನು ಪ್ರದರ್ಶಿಸಿದರು.

ಕೊಡಗುಜಿಲ್ಲೆ

ನವಂಬರ್ 3 ರಂದು ಕೊಡಗು ಜಿಲ್ಲೆ ವಿರಾಜಪೇಟೆ ನಗರ, ನೆಹರು ನಗರ, ಆರಮೇರಿ, ಸಿದ್ದಾಪುರ, ನಲ್ಲು, ದಿಕಾರಿ, ಪೆಗ್ಗೆಚರಕಾಡು, ಗೋಣಿಕೊಪ್ಪ ಘಟಕಗಳಲ್ಲಿ ಧ್ವಜಾರೋಹಣ ನಡೆಸ ಲಾಯಿತು. ಸಿದ್ದಾಪುರ ಘಟಕ 13 ರಂದು ವರದಕ್ಷಿಣಾ ಸಮಸ್ಯೆ, ಯುದ್ಧದ ಅಪಾಯ, ಭೂಪಾಲ್ ದುರಂತ ಕುರಿತು ಚಿತ್ರ ಪ್ರದರ್ಶನ ಏರ್ಪಡಿಸಿದೆ. ಕುಶಾಲನಗರಕ್ಕೆ ಖಾಸಗಿ ಶಿಕ್ಷಣ ಸಂಸ್ಥೆಗೆ ಇಂಜಿನಿಯರಿಂಗ್ ಕಾಲೇಜು ಪ್ರಾರಂಭಿಸಲು ಅನುಮತಿ ನೀಡುವ ಸರ್ಕಾರದ ಕ್ರಮವನ್ನು ಡಿ.ವೈ.ಎಫ್.ಐ. ವಿರೋಧಿಸಿದೆ. ಈ ಕುರಿತು ಸ್ಥಳೀಯ ಜನತೆಯನ್ನು ತಪ್ಪು ದಾರಿಗೆಳೆಯುತ್ತಿರುವ ಕೋಮುವಾದಿ ಜಾತಿವಾದಿ ಶಕ್ತಿಗಳ ಪಿತೂರಿ ವಿರುದ್ಧ ಜನರು ಎಚ್ಚರ ದಿಂದಿರಬೇಕೆಂದು ಒತ್ತಾಯಿಸಿದೆ.

ಕೋಲಾರ ಜಿಲ್ಲಾ ಸಮಿತಿ

1) ಕಾಂ. ಕೆ.ಎಂ.ವೆಂಕಟೇಶ್
2) ,, ಬಿ.ಎಸ್.ಮಣಿ
3) ,, ಜಿ.ವಿ.ಶ್ರೀರಾಮರೆಡ್ಡಿ (ಕಾರ್ಯದರ್ಶಿ ಮಂಡಳಿ)
4) ,, ಎಸ್.ಸವರೀದಾಸ್
5).. ಎ.ಜಯರಾಮ್
6) ,, ಆರ್.ವೆಂಕಟರಾಮಯ್ಯ(ಶಾಸಕರು)
7).. ಅಬ್ದುಲಾ ಮಜೀದ್
8).. ಜಿ.ವಿ.ಅಶ್ವತ್ಥನಾರಾಯಣ ರೆಡ್ಡಿ
9).. ಎಸ್. ಲಕ್ಷ್ಮಯ್ಯ
10).. ಕೆ.ಸಿ. ವೆಂಕಟೇಶ್
11).. ಇ.ಎಸ್.ರಾಮಕೃಷ್ಣಪ್ಪ
12).. ಎಂ.ಗೋಪಾಲ್
13).. ಜಿ.ಅರ್ಜುನ್

ಹರಿಹರ ಪಾಲಿಫೈಬರ್ ಚುನಾವಣೆ

ಕಾ॥ವಿ.ಜೆ.ಕೆ. ನಾಯರ್ ಜಯ

ಇತ್ತೀಚೆಗೆ ನಡೆದ ಹರಿಹರದ ಪಾಲಿಫೈಬರ್ ಎಂಪ್ಲಾಯಿಸ್ ಯೂನಿಯನ್ ಚುನಾವಣೆಯಲ್ಲಿ ಸಿ.ಐ.ಟಿ.ಯು. ರಾಜ್ಯ ಕಾರ್ಯದರ್ಶಿ ಕಾ॥ವಿ.ಜೆ.ಕೆ. ನಾಯರ್‌ರವರು, ಎ.ಐ.ಟಿ.ಯುಸಿ.ಯ ಮುಖಂಡ ಹಾಗೂ ಶಾಸಕ ಪಂಪಾಪತಿಯವರನ್ನು ೬ ಮತಗಳ ಅಂತರದಿಂದ ಸೋಲಿಸಿ ಜಯಗಳಿಸಿದ್ದಾರೆ.

೧೯೮೪ರಲ್ಲಿ ಕಾ॥ವಿ.ಜೆ.ಕೆ.ಯವರು ೧೨೦ ಮತಗಳ ಅಂತರದಿಂದ ಸೋತಿದ್ದರು. ಪ್ರಧಾನ ಕಾರ್ಯದರ್ಶಿಯಾಗಿ ಕಾ॥ಧ್ರುವಕುಮಾರ್‌ರವರು ೫೪ ಅಧಿಕಮತ ಪಡೆದು ಚುನಾಯಿತರಾಗಿದ್ದಾರೆ. ೬ ಪದಾದಿಕಾರಿಗಳ ಸ್ಥಾನದಲ್ಲಿ ೫ ಸಿ.ಐ.ಟಿ.ಯು. ವಿಗೂ ಒಂದು ಉಪಾಧ್ಯಕ್ಷ ಸ್ಥಾನಕ್ಕೆ ಎ.ಐ.ಟಿ.ಯು.ಸಿ. ಅಭ್ಯರ್ಥಿ ಆಯ್ಕೆಯಾಗಿದ್ದಾರೆ. ಕಾರ್ಯಕಾರಿ ಸಮಿತಿಯ ೧೫ ಸ್ಥಾನದಲ್ಲಿ ೮ ಸ್ಥಾನ ಸಿ.ಐ.ಟಿ.ಯು. ಗೆದ್ದುಕೊಂಡಿದೆ.

ಚುನಾವಣೆಯಲ್ಲಿ ಜಯಗಳಿಸಿದ ಸಿ.ಐ.ಟಿ.ಯು. ಮುಖಂಡರುಗಳು.

ಕಾ॥ ವಿ.ಜೆ.ಕೆ. ನಾಯರ್	ಅಧ್ಯಕ್ಷ
,, ಜಯಪ್ಪ ಎಂ.	ಉಪಾಧ್ಯಕ್ಷ
,, ಶ್ರೀನಿವಾಸ್	,,
,, ಧ್ರುವಕುಮಾರ್ ಇನಾಂದರ್	ಪ್ರಧಾನಕಾರ್ಯದರ್ಶಿ
,, ಎಂ.ಎಸ್. ಆನಂದ್‌ರಾವ್	ಜಂಟಿಕಾರ್ಯದರ್ಶಿ
,, ಪ್ಪ. ಚಂದ್ರಪ್ಪ	ಖಜಾಂಚಿ

ಪೊಳ್ಳುವಾದ-ಅಪಾಯದ ಕರಿನೆರಳು

ಪೆಪ್ಸಿಕೋ. ಯೋಜನೆಯನ್ನು ಸಮರ್ಥಿಸಿಕೊಳ್ಳುವ ಕೇಂದ್ರ ಸರಕಾರ ಹಾಗೂ ಪಂಜಾಬಿನ ಆಡಳಿತಾಧಿಕಾರಿಗಳ ಪ್ರಮುಖ ವಾದಗಳೆಂದರೆ ೧) ಈ ಯೋಜನೆಯಿಂದ ಅಪಾರ ವಿದೇಶೀ ವಿನಿಮಯ ದೊರೆಯುತ್ತದೆ. ೨) ಹಣ್ಣಿನ ಸಾರ ತಯಾರಿಸುವ ಅತ್ಯಾಧುನಿಕ ತಂತ್ರಜ್ಞಾನ ದೊರೆಯುತ್ತದೆ. ೩) ಪಂಜಾಬಿನ ರೈತರಿಗೆ ಇದರಿಂದ ಬಹಳಷ್ಟು ಅನುಕೂಲಗಳಿವೆ. ಇವನ್ನು ಒಂದೊಂದಾಗಿ ಪರಿಶೀಲಿಸೋಣ.

ಈ ಯೋಜನೆಯ ಉತ್ಪಾದನೆಗಳಿಗೆ ಹೊರದೇಶಗಳಲ್ಲಿ ಮಾರುಕಟ್ಟೆ ಒದಗಿಸುವ ಶರತ್ತಿಗೆ ಪೆಪ್ಸಿಕೋ ಬದ್ಧವಾಗಿ ಆದ್ದರಿಂದ ಮೊದಲ ಐದು ವರ್ಷಗಳಲ್ಲಿ ನಾವು ೩೭ ಕೋಟಿ ರೂ. ವಿದೇಶೀ ವಿನಿಮಯ ಕಳಕೊಂಡರೂ ಅದಕ್ಕೆದುರಾಗಿ ಕನಿಷ್ಠ ೧೯೪ ಕೋಟಿ ರೂ.ಗಳ ರಫ್ತನ್ನು ನಾವು ಸುಲಭವಾಗಿ ಪಡೆಯುತ್ತೇವೆ ಇದು ಮೊದಲನೆಯ ವಾದದ ಹಿಂದಿನ ಸಮರ್ಥನೆ.

ವಿಶೇಷ ರಿಯಾಯ್ತಿಯೇಕೆ ?

ಇದು ಕೇಂದ್ರ ಸರ್ಕಾರದ ಸದ್ಯದ ಆಮದು-ರಫ್ತು ನೀತಿಯ ಪ್ರಕಾರವೇ ಒಂದು ವಿಚಿತ್ರವಾದ. ಈನೀತಿಯ ಪ್ರಕಾರ ಹಣ್ಣಿನ ರಸದ ರಫ್ತುಗಾರರು ತಾವುಗಳಿಸಿಕೊಡುವ ವಿದೇಶೀ ವಿನಿಮಯದ ೧% ರಷ್ಟು ಮಾತ್ರವೇ ಆಮದು ಮಾಡಿಕೊಳ್ಳಬಹುದು. ಆದರೆ ಪೆಪ್ಸಿಕೋಗೆ ೧೯೯೩ರಲ್ಲಿ ಕೊಡಿಸಬಹುದಾದ ೧೧ಕೋಟಿ ರೂ.ಗಳ ರಫ್ತಿಗೆ ೩.೨ಕೋಟಿರೂ.ಗಳ ರಾಸಾಯನಿಕ ದ್ರವ್ಯಗಳನ್ನು ಆಮದುಮಾಡಿಕೊಳ್ಳಬಹುದು. ಅದರೆ ಸುಮಾರು ೩೦% ಏಕೆ ಪೆಪ್ಸಿಕೋಗೆ ವಿಶೇಷ ರಿಯಾಯ್ತಿ ?

ಈ ವಾದ ಪರಿಶೀಲಿಸುವಾಗ ಇನ್ನೊಂದು ಪ್ರಶ್ನೆ- ಪೆಪ್ಸಿಕೋ ರಫ್ತು ಮಾಡಿಸಿಕೊಡುವ ಒಪ್ಪಿದ ಶರತ್ತನ್ನು ಪಾಲಿಸುತ್ತದೇಯೇ? ರಾಜೀವರ ಹೊಸ ಆರ್ಥಿಕ ನೀತಿಯ ಪ್ರಕಾರ ಬಹುರಾಷ್ಟ್ರೀಯ ಕಂಪನಿಗಳು ಇದುವರೆಗೆ ರಫ್ತಿನ ಬಗ್ಗೆ ಒಪ್ಪಿದ ಶರತ್ತನ್ನು ಪಾಲಿಸಿದ್ದಕ್ಕಿಂತ ಮುರಿದಿರುವ ಉದಾಹರಣೆಗಳೇ ಬಹಳ ಜಾಸ್ತಿ. ಪೆಪ್ಸಿಕೋ ಕೂಡಾ ಇದೇ ಜಾಡುಹಿಡಿಯುವ ಸಂಭವಗಳೇ ಹೆಚ್ಚು. ಯಾಕೆಂದರೆ ಹಣ್ಣು ಅಥವಾ ತರಕಾರಿ ಸಂಸ್ಕರಣ ಅಥವಾ ಮಾರಾಟದ ಕ್ಷೇತ್ರದಲ್ಲಿ ಪೆಪ್ಸಿಕೋಗೆ ವಿಶೇಷ ಪರಿಗಣತಿಯೇನೂ ಇಲ್ಲ. ಇದರ ಮೊದಲು ಹೀಗೇನೇ ಶರತ್ತು ಒಪ್ಪಿದ್ದ ಕ್ಯಾಡ್‌ಬರಿ ಶ್ವೆಪ್ಸ್ ಎಂಬ ಕಂಪನಿ ರಫ್ತು ಶರತ್ತನ್ನು ಪಾಲಿಸಲಿಲ್ಲ. ತಯಾರಿಸುವ ಘಟಕವನ್ನು ಅದು ಮುಚ್ಚಿಯೇ ಬಿಟ್ಟಿತು. ಕೊಲಾರಿ ಜನರಲ್ ಫುಡ್ಸ್‌ಕಂಪನಿ ತಾನು ತಯಾರಿಸಿದ ಎಲ್ಲಾ ಉತ್ಪಾದನೆಗಳನ್ನು ರಫ್ತು ಮಾಡಿ ವಿದೇಶೀವಿನಿಮಯ ಗಳಿಸಿಕೊಡುವ ಶರತ್ತಿನ ಮೇಲೆ ೧೯೮೪ರಲ್ಲಿ ಉತ್ಪಾದನೆ ಆರಂಭಿಸಿದರೂ ಇದುವರೆಗೂ ಒಂದುಡಾಲರ್ ಕೂಡಾ ವಿದೇಶಿ ವಿನಿಮಯ ಗಳಿಸಿಲ್ಲ.

ಪೆಪ್ಸಿಕೋ ಕೂಡಾ ಈ ಶರತ್ತನ್ನು ಪಾಲಿಸಲಿಕ್ಕಿಲ್ಲ ಎಂಬ ಸಂಶಯಕ್ಕೆ ಆಸ್ಪದ ನೀಡುವ ಇನ್ನೊಂದು ಸಂಗತಿಯೆಂದರೆ ಪೆಪ್ಸಿಕೋದೊಡನೆ ಸಹಕಾರದ ಒಪ್ಪಂದದಲ್ಲಿ ರಫ್ತು ಮಾಡುವ ಶರತ್ತಿಗೆ ಮುರಿದರೆ ಪೆಪ್ಸಿಕೋ ತರಬೇಕಾದ ದಂಡವೇನು ಎಂದು ತಿಳಿಸಿಯೇ ಇಲ್ಲ. ರಫ್ತು ಮಾರುಕಟ್ಟೆ ಪಡೆಯುವುದು ಈ ಹೊಸ ಕಂಪನಿಗೆ ಸಾಧ್ಯವೇ ಎಂಬ ಬಗ್ಗೆ ಈ ಕಂಪನಿಯ ಒಬ್ಬ ಪಾಲುದಾರರಾದ ವೋಲ್ಟಾಸ್‌ನ ವಕ್ತಾರರಿಗೂ ಸಂಶಯವಿದೆ.

ಅಸಮಂಜಸ ಸಮರ್ಥನೆ

ಈಗ ಎರಡನೇ ವಾದ ಪರಿಶೀಲಿಸೋಣ. ಪೆಪ್ಸಿಕೋ ಹಣ್ಣಿನ ಸಾರವನ್ನು ಭಾರತದಲ್ಲೇ ತಯಾರಿಸುವ ಮೂಲಕ ಈ ಒಪ್ಪಂದದಿಂದಾಗಿ ಅತ್ಯಾಧುನಿಕ ತಂತ್ರಜ್ಞಾನದ ಗುಟ್ಟನ್ನು ನಮಗೆ ನೀಡುವಂತಾಗಿದೆ ಎಂದು ಕೇಂದ್ರ ಮಂತ್ರಿವರ್ಯ ಜಗದೀಶ್ ಟೈಟ್ಲರ್ ಎದೆತಟ್ಟಿ ಹೇಳುತ್ತಿದ್ದಾರೆ. ಹೊಸದಾಗಿ ನಿರ್ಮಿಸಿದ ಆಹಾರ ಸಂಸ್ಕರಣಾ ಇಲಾಖೆಯ ಪುರಾಣವೇ ಈ ಯೋಜನೆಗೆ ಪ್ರತಿ ವರ್ಷ ೩.೨ ಕೋಟಿ ರೂ.ಗಳ ರಾಸಾಯನಿಕರಣ ಆಮದು ಬೇಕು. ಈ ಆಮದಿನ ನಿಜ ಮೊತ್ತ ೯.೩ ಕೋಟಿಗಳಾಗುತ್ತದೆ. ಅಂದರೆ ಪೆಪ್ಸಿಕೋ ೧೯೯೩ ರಫ್ತು ಶರತ್ತನ್ನು ಪಾಲಿಸಿದರೂ ಕೂಡಾ ರಫ್ತಿನ ೬೩%ರಷ್ಟು ಆಮದಿಗೆ ಖರ್ಚಾಗುತ್ತದೆ. ವಾಸ್ತವವಾಗಿ ಈ ಸಾರದ ಪ್ರಮುಖ ಅಂಶ ವಿದೇಶಗಳಲ್ಲೇ ತಯಾರಾಗುತ್ತದೆ. ಭಾರತದಲ್ಲಿ ತಯಾರಾದುದು ಎಂಬ ಮುಸುಕು ಹಾಕಲಷ್ಟೇ ಸಕ್ಕರೆ ಪಾಕದ ಬಣ್ಣ ಸೇರಿಸುವಂತಹ ಅಲ್ಪ-ಸ್ವಲ್ಪ ಕೆಲಸದಷ್ಟೇ ಇಲ್ಲಿ ನಡೆಯುತ್ತದೆ. ಕ್ರಮೇಣ ಇಂತಹ ರಾಸಾಯನ ದ್ರವ್ಯಗಳನ್ನೆಲ್ಲಾ ಭಾರತದಲ್ಲೇ ತಯಾರಿಸುವ ಪ್ರಸ್ತಾಪವಂತೂ ಪೆಪ್ಸಿಕೋ ಒಪ್ಪಂದದಲ್ಲಿ ಇಲ್ಲವೇ ಇಲ್ಲ. ಈಗಾಗಲೇ ಸಂಪೂರ್ಣವಾಗಿ ಭಾರತದಲ್ಲೇ ಇಂತಹ ಸಾರವನ್ನು ತಯಾರಿಸುವ ಸಾಮರ್ಥ್ಯವುಳ್ಳ ಹಗುರ ಪೇಯದ ಉದ್ದಿಮೆ ಇದ್ದು. ಅವು ಇಂತಹ ಕಚ್ಚಾಸಾಮಗ್ರಿಗಳನ್ನು ಆಮದು ಮಾಡಿಕೊಳ್ಳಬಾರದೆಂಬ ನಿಷೇಧ ಇದೆ ಎಂಬುದನ್ನೂ ಇಲ್ಲಿ ಗಮನಿಸಬೇಕು.

ಪಂಜಾಬಿನ ರೈತರಿಗೆ ಉತ್ಪನ್ನಗಳಿಗೆ ಈ ಉದ್ದಿಮೆಯಿಂದಾಗಿ ಬೇಡಿಕೆ ಹೆಚ್ಚಿ ಅವರಿಗೆ ಲಾಭವಾಗುತ್ತದೆ ಎಂಬ ವಾದವೂ ಇಷ್ಟೇ ಅಸಮಂಜಸ ಪಂಜಾಬಿನ ಹಣ್ಣು ಮತ್ತು ತರಕಾರಿ ಬೆಳೆಯನ್ನು ೨೫% ಈ ಪೆಪ್ಸಿಕೋ ಉದ್ದಿಮೆ ಸಂಸ್ಕರಿಸುತ್ತದೆ ಎಂದು ಕೇಂದ್ರ ಸರ್ಕಾರ ಹೇಳುತ್ತಿದೆ.

ಆದರೆ ರಾಷ್ಟ್ರೀಯ ತೋಟಗಾರಿಕೆ ಮಂಡಳಿಯ ಅಂಕಿ-ಅಂಶ ನಂಬುವುದಾದರೆ ಪೆಪ್ಸಿಕೋ ಉದ್ದಿಮೆಗೆ ಬಳಸಬಹುದಾದ ಹಣ್ಣು-ತರಕಾರಿಗಳು ಪಂಜಾಬಿನ ಒಟ್ಟು ಉತ್ಪನ್ನದ ಏಳು ಶೇಕಡಾ ಕೂಡಾ ಆಗಲಿಕ್ಕಿಲ್ಲ.

ಈ ಏಳು ಶೇಕಡಾಕ್ಕಾದರೂ ಒಳ್ಳೆಯ ಬೆಲೆ ಸಿಗುವ ಗ್ಯಾರಂಟಿಯಿದೆಯೇ? ನಮ್ಮ ದೃಷ್ಟಿವಲಯದಲ್ಲಿ ಬೆಳೆಗಾರರಿಗೆ ಅತೀ ಕಮ್ಮಿ ಬೆಲೆ. ಬಳಕೆದಾರರು ಅತೀ ಹೆಚ್ಚು ತೆರಬೇಕು. ಇವುಗಳ ನಡುವಿನ ಅಪಾರ ಲಾಭಾಂಶ ಮಧ್ಯವರ್ತಿಗಳ ಪಾಲು. ಪೆಪ್ಸಿಕೋ ಒಪ್ಪಂದದ ಮೂಲಕ ಈ ಅಪಾರ ಲಾಭಾಂಶ ಪಂಜಾಬಿನ ಮಧ್ಯವರ್ತಿಗಳ ಬದಲು ಪೆಪ್ಸಿಕೋದ ಪಾಲಾಗುತ್ತದಷ್ಟೆ. ಯಾಕೆಂದರೆ ಪೆಪ್ಸಿಕೋ ಆಲೂಗೆಡ್ಡೆ ಟೊಮ್ಯಾಟೋ ಬೆಳೆಗಾರರಿಗೆ ಕೊಡಬೇಕೆಂದಿರುವ ಬೆಲೆ ಕೆ.ಜಿ.ಗೆ ೫೦ ಪೈಸೆ !

ಗುತ್ತೆದಾರಿ ಹತೋಟಿ

ಹೇಗೆ ಸರ್ಕಾರದ ಪ್ರಮುಖ ಮೂರು ವಾಹನಗಳೂ ಪೊಳ್ಳು ಎಂಬುದನ್ನು ನೋಡಿದ್ದೇವೆ. ಈ ಪೆಪ್ಸಿಕೋ ಒಪ್ಪಂದ ಪೊಳ್ಳುವಾದಗಳ ಮೇಲೆ ನಿಂತಿದೆ ಮಾತ್ರವಲ್ಲ. ಅಪಾಯಕಾರೀ ಪರಿಣಾಮಗಳಿಂದಲೂ ಕೂಡಿದೆ. ಮುಖ್ಯವಾಗಿ ಬೀಜಗಳ ಆಮದು ಮಾಡಲು ಪೆಪ್ಸಿಕೋಗೆ ನೀಡಿರುವ ಸೌಲಭ್ಯ ಅಪಾಯಕಾರಿ. ಬೀಜಗಳನ್ನು ಪೆಪ್ಸಿಕೋ ಕಂಪನಿಯೇ ರೈತರಿಗೆ ಒದಗಿಸುವ ಗುತ್ತೇದಾರಿಕೆ ಪಡೆಯುತ್ತದೆ. ಆಲೂಗೆಡ್ಡೆ ಉತ್ಪಾದನೆಯ ಖರ್ಚಿನಲ್ಲಿ ४೦-६೦% ಖರ್ಚು ಬೀಜಗಳದ್ದೇ ಆಗಿರುವುದರಿಂದ ಬೀಜಗಳ ಪೂರೈಕೆಯ ಮೇಲೆ ಪೆಪ್ಸಿಕೋದ ಗುತ್ತೇದಾರಿ ಹತೋಟಿಯಿಂದಾಗಿ ರೈತರ ಸ್ಥಿತಿ ದುರ್ಬಲಗೊಂಡು ಹೊಸ ತಂತ್ರಜ್ಞಾನದ ಲಾಭ ಪೆಪ್ಸಿಕೋಗೆ ಮಾತ್ರ ದಕ್ಕುವಂತಾಗುತ್ತದೆ.

ಬೀಜಗಳ ಆಮದಿಗೆ ನೀಡಿರುವ ಅವಕಾಶದಲ್ಲಿ ಇನ್ನೊಂದು ಅಪಾಯವೂ ಇದೆ. ಈ ಪಾಶ್ಚಿಮಾತ್ಯ ಬೀಜಗಳು ನಮ್ಮ ದೇಶದ ಕೃಷಿಯನ್ನು ನಾಶಮಾಡಬಲ್ಲ ಸಾಂಕ್ರಾಮಿಕ ಸೋಂಕುಗಳನ್ನು ಹರಡಬಲ್ಲವು. ಅಪಾರ ಪ್ರಮಾಣದಲ್ಲಿ ಆಮದು ಮಾಡುವ ಬೀಜಗಳನ್ನು ಪರೀಕ್ಷಿಸುವ ಕ್ವಾರಂಟೀನ್ ಸೌಲಭ್ಯ ನಮ್ಮಲ್ಲಿಲ್ಲ. ಇದರ ಅವಶ್ಯಕತೆಯಿದೆಯೆಂದೂ ಸರಕಾರಕ್ಕೆ ಅನಿಸಿಲ್ಲವೆಂಬುದು ಅಪಾಯದ ತೀವ್ರತೆಯನ್ನು ಇನ್ನೂ ಹೆಚ್ಚಿಸಿದೆ. ಏಕೆಂದರೆ ಇದುವರೆಗೆ ಕನಿಷ್ಠ ಮೂರು ವರ್ಷಗಳ ಫಲಿತಾಂಶವನ್ನು ಭಾರತ ಕೃಷಿ ಸಂಶೋಧನಾ ಮಂಡಳಿ ಪರೀಕ್ಷಿಸಿದ ಮೇಲೆಯೇ ಬೀಜಗಳ ಆಮದು ಸಾಧ್ಯವಿತ್ತು. ಈಗ ಸರಕಾರದ ಹೊಸ ನೀತಿಯ ಪ್ರಕಾರ ಒಂದು ಬೆಳೆಯ ಪರಿಶೀಲನೆಯಷ್ಟೇ ಸಾಕು !

ಅಮೆರಿಕಾದ ಪಿ.ಎಲ್-೪೮೦ರ ಯೋಜನೆಯಡಿ ನಾವು ಆಮದು ಮಾಡಿಕೊಂಡ ಸುಧಾರಿತ ಬೀಜಗಳು ದೇಶದೊಳಗೆ ಹೊಸ ಸೊಂಕುಗಳಿಗೆ, ಕಳೆಗಳಿಗೆ ಪ್ರವೇಶ ನೀಡಿದ ಉದಾಹರಣೆಗಳು ಈಗಾಗಲೇ ನಮ್ಮೆದುರು ಇವೆಯೆಂದು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ (ದಿ. ೨೩-೯-೮೮) ವರದಿ ಮಾಡಿದೆ. ಪೆಪ್ಸಿಕೋ ಪಂಜಾಬಿನ ರೈತರಿಗೆ ಒದಗಿಸುವ ಆಲೂಗಡ್ಡೆಯಸುಧಾರಿತ ಬೀಜಗಳ ಮೂಲಕ ಯೂರೋಪಿನಲ್ಲಿ ಆಲೂಗಡ್ಡೆ ಬೆಳೆಗೆ ವ್ಯಾಪಕವಾಗಿ ಹತ್ತಿರುವ ಕದಿರುಗಡ್ಡೆ ನಂಜು ರೋಗವನ್ನು ಪತ್ತೆಹಚ್ಚುವ ಸಾಧನಗಳೇ ನಮ್ಮ ಬಳಿಯಿಲ್ಲ. ಅಂದರೆ ನಮ್ಮ ಆಲೂಗೆಡ್ಡೆ ಬೆಳೆಗೀಗ ಇರುವ ಅಪಾಯದ ತೀವ್ರತೆಯನ್ನು ಅಂದಾಜು ಮಾಡಬಹುದು.

ಪೆಪ್ಸಿಕೋ ಯೋಜನೆ..

ಇತ್ತೀಚೆಗೆ ಕೇಂದ್ರ ಸರ್ಕಾರ ಒಂದು ವಿವಾದಾತ್ಮಕ ಪ್ರಮುಖ ಕೃಷಿ ಉದ್ದಿಮೆಗೆ ಮಂಜೂರಾತಿ ನೀಡಿತು. ಅದರ ರೂಪರೇಷೆಗಳು ಹೀಗಿವೆ.

* ಪಂಜಾಬ್ ಸರ್ಕಾರೀ ಒಡೆತನದ ಪಂಜಾಬ್ ಆಗ್ರೋ-ಇಂಡಸ್ಟ್ರಿಯಲ್ ಕಾರ್ಪೋರೇಷನ್, ಭಾರತದ ಪ್ರಮುಖ ಗುತ್ತೇದಾರಿ ಟಾಟಾಗುಂಪಿನ ವೋಲ್ಟಾಸ್ ಕಂಪೆನಿ ಹಾಗೂ ವಿದೇಶೀ (ಅಮೆರಿಕನ್) ಬಹುರಾಷ್ಟ್ರೀಯ ಕಂಪೆನಿ ಪೆಪ್ಸಿಕೋ ಸೇರಿ ರಚಿಸಿದ ಹೊಸ ಕಂಪೆನಿ ಈ ಉದ್ದಿಮೆಯನ್ನು ಆರಂಭಿಸುತ್ತದೆ.

* ಈ ಹೊಸ ಕಂಪೆನಿಯ ಬಂಡವಾಳದಲ್ಲಿ ಪೆಪ್ಸಿಕೋದ ಪಾಲು ೩೯.೮೯% ಈ ಮೂಲಕ ಅದು ವಿದೇಶೀವಿನಿಮಯ ಹತೋಟಿ ಕಾನೂನಿನ ವ್ಯಾಪ್ತಿಗೆ ಬರುವುದಿಲ್ಲ. ಇದರಿಂದಾಗಿ ಈ ಹೊಸ ಕಂಪೆನಿಯ ಮೇಲೆ ಪೂರ್ಣ ಹತೋಟಿಯಿಡಲು ಪೆಪ್ಸಿಕೋಗೆ ಪೂರ್ಣ ಅವಕಾಶವಿದೆ.

* ಈ ಯೋಜನೆಯ ಒಟ್ಟು ಮೊತ್ತ ೨೧.೫ ಕೋಟಿರೂ. ಇದರಲ್ಲಿ ೩.೫೯ ಕೋಟಿ ರೂ.ಗಳನ್ನು ಪೆಪ್ಸಿಕೋ ಹಾಕುತ್ತದೆ. ಅದರಿಂದ ೧.೩ ಕೋಟಿ ರೂ.ಗಳನ್ನು ಅದು ತಾಂತ್ರಿಕ ಜ್ಞಾನ ಒದಗಿಸಿದ್ದಕ್ಕಾಗಿ ಶುಲ್ಕವಾಗಿ ವಾಪಸು ಪಡೆಯುತ್ತದೆ.

*ಈ ಯೋಜನೆಯಲ್ಲಿ ಮೂರು ಘಟಕಗಳಿವೆ-ಹಗುರ ಪಾನೀಯಗಳ ಸಾರ ತಯಾರಿಸುವ ಸ್ಥಾವರ, ಆಲೂಗೆಡ್ಡೆ ಮತ್ತು ಧಾನ್ಯಗಳಿಂದ ಸಿದ್ಧ ಉಪಹಾರ ತಯಾರಿಸುವ ಘಟಕ ಮತ್ತು ಒಂದು ಕೃಷಿಸಂಶೋಧನಾ ಕೇಂದ್ರ. ಹಣ್ಣುಗಳ ಸಾರ ತಯಾರಿಕೆಗಾಗಿ ಅಗತ್ಯವಾದ ರಾಸಾಯನಿಕ ಮತ್ತು ರುಚಿ ನೀಡುವ ೩.೨ ಕೋಟಿ ರೂ. ಬೆಲೆಯ ದ್ರವ್ಯಗಳನ್ನು ಪ್ರತೀವರ್ಷ ಪೆಪ್ಸಿಕೋ ಆಮದು ಮಾಡಿಕೊಳ್ಳಬಹುದು.

* ಪಂಜಾಬ್‌ನಲ್ಲಿ ಈಗ ಬೆಳೆಯುತ್ತಿರುವ ಆಲೂಗೆಡ್ಡೆ ಉಪಹಾರ ತಯಾರಿಕೆಗೆ ಸೂಕ್ತವಾಗಿಲ್ಲವಾದ್ದರಿಂದ ಸೂಕ್ತ ಆಲೂಗೆಡ್ಡೆಯ ಉತ್ಪಾದನೆಗೆ ಬೇಕಾದ ಬೀಜಗಳನ್ನು ಪೆಪ್ಸಿಕೋ ಆಮದು ಕೊಳ್ಳಲು ಅವಕಾಶವಿದೆ.

"ಹಸುರು ಕ್ರಾಂತಿಯ ಹೆಮ್ಮೆ"ಯ ಪಂಜಾಬಿನ ರೈತರಿಗೆ ಮತ್ತೊಮ್ಮೆ ಆತ್ಯಾಕರ್ಷಕ ಲಾಭಗಳಿಸಿಕೊಡುವ, ಅತ್ಯುತಮ ಬೀಜಗಳನ್ನು ಒದಗಿಸಿಕೊಡುವ, ಜತೆಗೆ ದೇಶಕ್ಕೆ ೫ ಪಟ್ಟು ವಿದೇಶೀ ವಿನಿಮಯ ಗಳಿಸಿಕೊಡುವ ಭಾರತೀಯ ಜನತೆಯ ದೊಡ್ಡ ವಿಜಯವೆಂದು ಕೇಂದ್ರ ಮಂತ್ರಿ ಟೈಟ್ಲರ್‌ರಿಂದ ಹಿಡಿದು ಎಲ್ಲಾ ಐ.ಎ.ಎಸ್. ಅಧಿಕಾರಿಗಳು ಹಾಡಿ ಹೊಗಳುತ್ತಿರುವುವಂತೆ ಇದು ನಿಜವಾಗಿಯೂ ಒಂದು ಉತ್ಕೃಷ್ಟ ಯೋಜನೆಯೇ ?"ಅಲ್ಲ' ಎಂದೇ ಉತ್ತರಿಸಬೇಕಾಗುತ್ತದೆ.

ನಮ್ಮ ದೇಶದ. ಜನರಿಗೆ ಅಂತರರಾಷ್ಟ್ರೀಯ ಗುಣಮಟ್ಟದ ಅತ್ಯಾಧುನಿಕ ಸರಕುಗಳನ್ನು ಒದಗಿಸುತ್ತೇವೆಂದು ಹೇಳಿ ಬೆರಳೆಣಿಕೆ ಯಷ್ಟು ಶ್ರೀಮಂತರಿಗೆ ಅದನ್ನು ಪೂರೈಸಿ, ಬಂಡವಾಳ ಶಾಹಿಗಳಿಗೆ ಲಾಭದ ಸೂರೆ, ಬಹುಪಾಲು ಜನರಿಗೆ ನಿರುದ್ಯೋಗ, ನಾಗಾಲೋಟದ ಬೆಲೆಯೇರಿಕೆ ಕೂಡಮಾಡಿದ ಹೊಸ ಆರ್ಥಿಕ ನೀತಿ, ಕೆಲವರಿಗೆ ಕಂಪ್ಯೂಟರ್ ಮಾಂತ್ರಿಕ ವಿದ್ಯೆ ಕೊಟ್ಟು, ಕೋಟಿ ಕೋಟಿ ಬಡವರನ್ನು ಅನರಕ್ಷತೆಯತ್ತ ತಳ್ಳುವ ಹೊಸ ಶಿಕ್ಷಣ ನೀತಿ, ಇದೇ ಜಾಡಿನಲ್ಲಿ ಸಾಗಿರುವ ಯೋಜನೆಯಿದು.

ಪೆಪ್ಸಿಕೋ ಒಪ್ಪಂದದ ಪ್ರಕಾರ ಸ್ಥಾಪಿಸಲಾಗುವ ಕೃಷಿ ಸಂಶೋಧನಾ ಕೇಂದ್ರಕ್ಕೆ ಯೋಜಿಸಲಾಗಿರುವ ಬಂಡವಾಳ ೨ ಕೋಟಿ ರೂ. ಈ ಅಲ್ಪ ಹಣದಿಂದ ಯಾವುದೇ ಉಪಯುಕ್ತ ಸಂಧಾನ ಸಾಧ್ಯವಿಲ್ಲ. ಪಂಜಾಬಿನ ಕೃಷಿ ವಿಶ್ವ ವಿದ್ಯಾಲಯದ ವಾರ್ಷಿಕ ಬಜೆಟ್ಟೇ ೨೦ ಕೋಟಿ ರೂ. ಆದ್ದರಿಂದ ಈ ಕೇಂದ್ರದ ನಿಜವಾದ ಉದ್ದೇಶ ಭಾರತದಲ್ಲಿ ಕೃಷಿ ಸಂಶೋಧನೆಯಂತೂ ಅಲ್ಲ ಎಂದು ಸ್ಪಷ್ಟವಾಗುತ್ತದೆ. ಈ ಕೇಂದ್ರ ರೈತರಿಗೆ ಪಾಶ್ಚಿಮಾತ್ಯ ದೇಶಗಳಿಂದ ಆಮದು ಮಾಡಿದ ಬೀಜಗಳನ್ನು ಹಂಚುವ ವ್ಯವಸ್ಥೆಯ ಒಂದುಕೊಂಡಿಯಾಗ ಬಹುದಷ್ಟೆ. ಅದೇ ಅದರ ವಾಸ್ತವಿಕ ಉದ್ದೇಶ ಕೂಡಾ. ಈ ರೀತಿ ಬೀಜಗಳಂತಹ ನಿರ್ಣಾಯಕ ಅಂಶದಲ್ಲೂ ದೇಶ ಬಹುರಾಷ್ಟ್ರೀಯ ಕಂಪೆನಿಗಳ ಒತ್ತಡಕ್ಕೆ ಬಲಿಯಾಗುವ ಪ್ರಕ್ರಿಯೆಯನ್ನು ಪೆಪ್ಸಿಕೋ ಯೋಜನೆ ಆರಂಭಿಸಲಿದೆ.

ಸಣ್ಣ ಉದ್ದಿಮೆಗಳಿಗೆ ಹೊಡೆತ

ಪೆಪ್ಸಿಕೋ ಯೋಜನೆ ಸಣ್ಣ ಉದ್ದಿಮೆಗಳ ಮೇಲೆ ಮಾಡುವ ಆಕ್ರಮಣ ಅದರ ಇನ್ನೊಂದು ಅಪಾಯಕಾರೀ ಅಂಶ. ಸುಗಂಧ ದ್ರವ್ಯ ಹಾಗೂ ರುಚಿದ್ರವ್ಯಗಳ ಉತ್ಪಾದಕರ ಸಂಘ ಹಾಕಿದ ಲೆಕ್ಕಾಚಾರದ ಪ್ರಕಾರ ಇದರಿಂದ ಕನಿಷ್ಠ ನೂರು ಸಣ್ಣ ಪ್ರಮಾಣದ ರುಚಿ ದ್ರವ್ಯಕ ತಯಾರಿಸುವ ಘಟಕಗಳು ಮುಚ್ಚಿ ಹೋಗುತ್ತವೆ. ಪೆಪ್ಸಿಕೋಗೆ ಈಗ ನೀಡಿರುವ ಅವಕಾಶ ಇದೇ ಪ್ರಮಾಣದಲ್ಲಿ ನಿಲ್ಲುವುದಿಲ್ಲ. ಅದು ಇನ್ನಷ್ಟು ಹೆಚ್ಚುತ್ತದೆ. ಅಷ್ಟೇ ಅಲ್ಲ, ಅದು ಇತರ ಬಹುರಾಷ್ಟ್ರೀಯ ಕಂಪೆನಿಗಳಿಗೂ ವಿಸ್ತರಿಸುವ ಸಂಭವ ಖಂಡಿತ ಇದೆ. ಆದ್ದರಿಂದ ದೇಶದ ಸಣ್ಣ ಉದ್ದಿಮೆಗಳಿಗೆ ಆಗಬಹುದಾದ ಆಘಾತವನ್ನು ಊಹಿಸಿಕೊಳ್ಳಬೇಕಷ್ಟೇ.

ಇಂತಹ ವಿನಾಶ ಬಳಕೆದಾರರಿಗಾದರೂ ಪ್ರಯೋಜನ ಉಂಟು ಮಾಡುತ್ತದೆಯೇ? ಸ್ವದೇಶೀ ರುಚಿ ನೀಡುವ ದ್ರವ್ಯಗಳ ಸರಾಸರಿ ಖರ್ಚು ಪ್ರತಿ ಬಾಟಲಿಗೆ ೨೫ ಪೈಸೆಯಿದ್ದರೆ ಪೆಪ್ಸಿಕೋ ಆಮದು ಮಾಡುವ ರುಚಿ ದ್ರವ್ಯಗಳ ಖರ್ಚು ೨ ರೂ. ೫೦ ಪೈಸೆಯಾಗುತ್ತದೆ! "ಅಂತರರಾಷ್ಟ್ರೀಯ ಹೆಸರು"ಗಳಿಗಾಗಿ ದೇಶದ ಉದ್ದಿಮೆಯನ್ನು ತೊರೆದು ಹತ್ತು ಪಟ್ಟು ಹೆಚ್ಚು ತೆರಬೇಕು!

ಭಾರತದ ಕೃಷಿ ಉದ್ದಿಮೆಯಲ್ಲಿ ಪೆಪ್ಸಿಕೋ ಪ್ರವೇಶದಿಂದ ಸಂಕಟಕ್ಕೀಡಾಗುವ ಇನ್ನೊಂದು ಉದ್ದಿಮೆಯೆಂದರೆ ಆಹಾರ ಸಂಸ್ಕರಣಾ ಘಟಕಗಳು. ಈಗಾಗಲೇ ಈ ವಲಯದ ಸಾಮರ್ಥ್ಯದ ಪೂರ್ಣಬಳಕೆಯಾಗುತ್ತಿಲ್ಲ. ೨೫೨೫ ಘಟಕಗಳಲ್ಲಿ ३८% ಸಾಮರ್ಥ್ಯ ಮಾತ್ರವೇ ಬಳಕೆ ಯಾಗುತ್ತಿದೆ. ಪೆಪ್ಸಿಕೋ ಈ ಸಾಮರ್ಥ್ಯ ವನ್ನು ೧೫%ದಷ್ಟು ಹೆಚ್ಚಿಸುತ್ತದೆ. ಅಂದರೆ ಕನಿಷ್ಠ ಇಷ್ಟೇ ಪ್ರಮಾಣದ ಸಣ್ಣ ಸಂಸ್ಕರಣ ಘಟಕಗಳಿಗೆ ಅಥವಾ ಸುಮಾರು ३೦೦ ಘಟಕಗಳಿಗೆ ಕೊಡಲಿ ಏಟಿನ ಭಯ.

ಈ ಯೋಜನೆ ವಿದೇಶೀ ವಿನಿಮಯಕ್ಕೆ ದೊಡ್ಡ ಕೊಡುಗೆ ನೀಡುವ ಪ್ರಮುಖ ಸಾಧನೆಯೆಂದು ಹೇಳಿಕೊಳ್ಳುವ ಸರಕಾರ, ಅದರ ಈ ದುಷ್ಪರಿಣಾಮಗಳ ಬಗ್ಗೆ ಮೌನವಾಗಿದೆ. 5ನೇ ಪುಟ ನೋಡಿ

ಆಳುವವರ ವರ್ಗಸ್ವಭಾವದ ಕೈಗನ್ನಡಿ

೧೯೭೩ರಲ್ಲಿ ಚಿಲಿಯಲ್ಲಿ ಪ್ರಜಾಸತ್ತಾತ್ಮಕವಾಗಿ ಚುನಾಯಿತಗೊಂಡ ಅಲೆಂಡೆಯವರ ಕೊಲೆ ಮತ್ತು ಅವರ ಸರ್ಕಾರವನ್ನು ಉರುಳಿಸಿದ ಸಿ.ಐ.ಎ.ಯ ಕೃತ್ಯ ಸಾರಭೂತವಾಗಿ ಪೆಪ್ಸಿಕೋಗೆ ಬೆಂಬಲವಾಗಿ ನಡೆಸಿದ ಒಂದು ವ್ಯಾಪಾರೀ ನಿರ್ಣಯದ ಫಲ ಎಂದು ಹೇಳಲಾಗುತ್ತಿದೆ.

ಆಗಿನ ಅಮೆರಿಕನ್ ಅಧ್ಯಕ್ಷ ನಿಕ್ಸನ್ ಮತ್ತು ಚಿಲಿಯಲ್ಲಿ ಪೆಪ್ಸಿಕೋ ಪೇಯವನ್ನು ಬಾಟಲಿಗಳಲ್ಲಿ ತುಂಬುವ ಘಟಕದ ಮಾಲಕ ಅಗಸ್ಟೊ ಎಡ್ವರ್ಡ್ಸ್ ನಡುವೆ ತಾನು ಭೇಟಿ ಏರ್ಪಡಿಸಿದುದಾಗಿ ಪೆಪ್ಸಿಕೋ ಚೇರ್‌ಮನ್ ಡೊನಾಲ್ಡ್ ಕೆಂಡಾಲ್ ಒಪ್ಪಿಕೊಂಡಿದ್ದಾರೆ. ಈ ಭೇಟಿ ಅಲೆಂಡೆ ಸರ್ಕಾರವನ್ನು ಉರುಳಿಸಿದ ಪ್ರತಿಗಾಮೀ ಚಳುವಳಿಯ ಮೊದಲ ಹೆಜ್ಜೆಯಾಯಿತು.

ಅಲೆಂಡೆಯವರ ಪ್ರಗತಿಪರ ಸರ್ಕಾರದ ವಿರುದ್ಧ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿದ್ದ 'ಮರ್ಕ್ಯೂರಿಯೋ' ಪತ್ರಿಕೆಗೆ ಕೂಡಾ ಪೆಪ್ಸಿಕೋ ಏಜೆಂಟ್ ಮೇಲೆ ಹೇಳಿದ ಎಡ್ವರ್ಡ್ಸ್‌ನೇ ಮಾಲಿಕ.

ವಿದೇಶೀ ವಿನಿಮಯ ಗಳಿಕೆಯ ಹೆಸರಿನಲ್ಲಿ ಈ ಕುಪ್ರಸಿದ್ಧ ಬಹುರಾಷ್ಟ್ರೀಯ ಗುತ್ತೇದಾರಿ ಕಂಪೆನಿಗೆ ವಿಶೇಷ ರಿಯಾಯ್ತಿಗಳನ್ನಿತ್ತಿರುವ ರಾಜೀವ್ ಸರ್ಕಾರಕ್ಕೆ ಇದು ಗೊತ್ತಿರಲಿಕ್ಕಿಲ್ಲವೇ?

4ನೇ ಪುಟದಿಂದ

ಗೊತ್ತಿದ್ದರೂ ಏಕೆ ಈ ಒಪ್ಪಂದ ನಡೆದಿದೆಯೆನ್ನುವುದು. ರಾಜೀವ್ ಸರ್ಕಾರದ ವರ್ಗಸ್ವರೂಪವನ್ನು ತೋರಿಸಿಕೊಡುತ್ತದಷ್ಟೆ. ಈ ಯೋಜನೆಯ ಒಂದು ಕುತೂಹಲಕಾರೀ ಅಂಶವೆಂದರೆ ನಮ್ಮ ಸಮಾಜದ ಪ್ರತಿಗಾಮಿ ಶಕ್ತಿಗಳು- ಭೂ ಮಾಲೀಕರು, ಗುತ್ತೆದಾರಿ ಬಂಡವಾಳ ಶಾಹಿಗಳು ಮತ್ತು ಅಂತರ ರಾಷ್ಟ್ರೀಯ ಬಂಡವಾಳದ ನೇರ ಕೂಟವನ್ನು ಪ್ರತಿನಿಧಿಸುವ ಯೋಜನೆಯಿದು. ಇದು ಬಂಡವಾಳ ಶಾಹಿಗಳ ಹಿತಾಸಕ್ತಿ ಹೇಗೆ ಕಾಪಾಡುತ್ತದೆ ಎಂಬ ಪ್ರಶ್ನೆಗೆ ಉತ್ತರ ಸ್ಪಷ್ಟವಾಗಿದೆ. ಪೆಪ್ಸಿಕೋಗೆ ಹಾಗೂ ವೋಲ್ಟಾಸ್‌ಗೆ ಭಾರತದಲ್ಲಿ ಹಗುರ ಪೇಯ ಮತ್ತು ಆಲೂಗೆಡ್ಡೆ ಚಿಪ್ಸ್‌ಗಳ ಆಂತರಿಕ ಮಾರುಕಟ್ಟೆಯಲ್ಲಿ ಅಂತರರಾಷ್ಟ್ರೀಯ ಹೆಸರು ಹೇಳಿಕೊಂಡು ಸೂಪರ್ ಲಾಭಗಳಿಕೆ. ಈ ಪೇಯಗಳ ಬಾಟ್ಲಿಂಗ್ ಮಾಡುವವರು ಭೂಮಾಲಿಕ ವಿಭಾಗಕ್ಕೆ ಸೇರಿದವರು. ಅವರಿಗೂ ಯಾವುದೇ ಸ್ವದೇಶೀ ಉತ್ಪಾದನೆಯ ಬಾಟ್ಲಿಂಗ್‌ಗಿಂತ ಇದರಲ್ಲೇ ಹೆಚ್ಚು ಲಾಭ.

ವಿದೇಶೀ ವಿನಿಮಯದ ಗೀಳು

ಅಲ್ಲದೆ ಈ ಯೋಜನೆಯಲ್ಲಿ ಪಾಲು ಹೊಂದಿರುವ ಪಂಜಾಬ್ ಆಗ್ರೋ-ಇಂಡಸ್ಟ್ರೀಸ್ ಕಾರ್ಪೋರೇಷನ್ ಕೂಡಾ ಭೂಮಾಲಕರ ಹಿತಾಸಕ್ತಿ ಪ್ರತಿನಿಧಿಸುವ ಸಂಸ್ಥೆ. ಇದು ಭೂಮಾಲೀಕರಿಗೆ ಶೇರುಗಳನ್ನು ಮಾರಿ ಈ ಹೊಸ ಉದ್ದಿಮೆಯಲ್ಲಿ ಅವರು ನೇರವಾಗಿ ಹತೋಟಿ ಪಡೆಯುವಂತೆ ಅನುಕೂಲ ಮಾಡಿಕೊಡುವ ಯೋಜನೆಯನ್ನು ರೂಪಿಸಿಕೊಂಡಿದೆ. ನಮ್ಮ ದೇಶದ ಒಂದು ಪ್ರಮುಖ ಆಹಾರ ಸಂಶೋಧನಾ ಸಂಘಟನೆ ಇದೇ ಗುಣಮಟ್ಟದ ಆಲೂಗೆಡ್ಡೆ ವೇಫರ್‌ಗಳನ್ನು ತಯಾರಿಸುವಲ್ಲಿ ನೆರವಾಗುವುದಾಗಿ ಹೇಳಿತ್ತು. ಆದರೆ ಪಂಜಾಬ್ ಆಗ್ರೋ ಅದನ್ನು ತಿರಸ್ಕರಿಸಿತು- ಯಾಕೆಂದರೆ ಈ ಸಂಶೋಧನಾ ಸಂಸ್ಥೆ ಒಳ್ಳೇ ಗುಣಮಟ್ಟದ ಉತ್ಪಾದನೆಗೆ ನೆರವಾಗಬಹುದಿತ್ತು, ಆದರೆ ಸೂಪರ್-ಲಾಭಗಳಿಸಿ ಕೊಡುತ್ತಿತ್ತೇ? ಇಲ್ಲ.

ವಿದೇಶೀ ವಿನಿಮಯ ಗಳಿಕೆಯ ಬಗ್ಗೆ ಸರಕಾರದ ಗೀಳಿನಲ್ಲೂ ಅದರ ವರ್ಗ ಸ್ವಭಾವ ಕಾಣುತ್ತದೆ. ನಮ್ಮ ದೇಶದಲ್ಲಿ ಹಣ್ಣು ಮತ್ತು ತರಕಾರಿಗಳ ತಲಾ ಬಳಕೆ ಅಗತ್ಯ ಪ್ರಮಾಣದ ಅರ್ಧದಷ್ಟೂ ಇಲ್ಲದಿರುವಾಗ ಅದನ್ನೇ ಸಂಸ್ಕರಿಸಿ ವಿದೇಶಕ್ಕೆ ರಫ್ತು ಮಾಡಬೇಕೇ ಇದಕ್ಕೆ ಸರ್ಕಾರದ ಪ್ರತಿವಾದವೆಂದರೆ ಈ ಹಣ್ಣು-ತರಕಾರಿಗಳು ೪೦% ಈಗ ನಾಶವಾಗುತ್ತಿವೆ. ಅದನ್ನು ಆಹಾರ ಸಂಸ್ಕರಣಾಕ್ಕೆ ಉಪಯೋಗಿಸಲಾಗುವುದು. ಆದರೆ ಈ ರೀತಿ ಆಹಾ. ಸಂಸ್ಕರಣಕ್ಕೆ ಉಪಯೋಗವಾಗುವ ಹಣ್ಣು-ತರಕಾರಿಗಳು ಬಹುಪಾಲು ಬಡಜನರು, ರೈತರು ಬಳಸುವ ಕಡಿಮೆ ಮೌಲ್ಯದ ಹಣ್ಣು-ತರಕಾರಿಗಳ ಎಂಬುದನ್ನು ಅದು ಮರೆಮಾಚಿದೆ. ಅಲ್ಲದೆ ಈ ಪೆಪ್ಸಿಕೋ ಯೋಜನೆಯಲ್ಲಿ ಇಂತಹ ಹಣ್ಣು-ತರಕಾರಿಗಳ ಪೂರೈಕೆ ಹೆಚ್ಚಿಸುವ ಬಗ್ಗೆ ಯಾವ ಕಾರ್ಯಕ್ರಮವೂ ಇಲ್ಲ.

ರಫ್ತು ಮಾಡಬಾರದೆಂದು ಇದರ ಅರ್ಥವಲ್ಲ, ಇಲ್ಲಿ ಜನಗಳಿಗೆ ಅಗತ್ಯವಾದ ಕೆಲವು ಸರಕುಗಳನ್ನು ಕೂಡಾ ಯಾವ ಸಂದರ್ಭದಲ್ಲೂ ರಫ್ತು ಮಾಡಲೇಬಾರದೆಂದೂ ಅರ್ಥವಲ್ಲ. ಉದಾಹರಣೆಗೆ ಟೊಮ್ಯಾಟೋ ರಫ್ತು ಮಾಡಿ, ಜೀವ ಉಳಿಸುವ ಔಷಧಿಗಳ ಅಥವಾ ವಿಶೇಷ ಉಕ್ಕಿನ ಆಮದು ಮಾಡಲು ಮಾಡಿದ್ದು ಅಭ್ಯಂತರವಿರುವುದಿಲ್ಲ. ಆದರೆ ಪೆಪ್ಸಿಕೋ ಯೋಜನೆಯಲ್ಲಿ ಹಗುರ ಪೇಯದ ಸಾರದಂತಹ ಅತ್ಯಾವಶ್ಯಕವಲ್ಲದ ಸರಕನ್ನು ಆಮದು ಮಾಡಲು ಹಣ್ಣು-ತರಕಾರಿಯಂತಹ ಅಗತ್ಯ ಸರಕುಗಳನ್ನು ರಫ್ತು ಮಾಡಲಾಗುತ್ತದೆ. ಸಿರಿವಂತರಿಗೆ "ಅಂತರ ರಾಷ್ಟ್ರೀಯ ಮಟ್ಟ"ದ ಪೆಪ್ಸಿಕೋಲಾಕ್ಕಾಗಿ ಬಡವರ ಹಣ್ಣು-ತರಕಾರಿಗಳ ರಫ್ತು.

ಕೃಷಿ-ಸ್ವಾವಲಂಬಿಗೆ ವಿದಾಯ

ನಮ್ಮ ಕೃಷಿ ರಂಗವನ್ನು ಬಹು ರಾಷ್ಟ್ರೀಯ ಗುತ್ತೆದಾರಿಗಳ ನೇರ ಹತೋಟಿಗೆ ಒಳಪಡಿಸುವುದು ಪೆಪ್ಸಿಕೋ ಯೋಜನೆಯ ಒಂದು ಪ್ರಮುಖ ರಾಜಕೀಯ ದುಷ್ಪರಿಣಾಮ.

ಪೆಪ್ಸಿಕೋ ಯೋಜನೆ ರೈತರಿಗೆ ಲಾಭದಾಯಕ ಬೆಲೆ ಕೊಡುತ್ತದೆ ಎಂಬ ಸರಕಾರದ ವಾದ ಪೊಳ್ಳು ಮಾತ್ರವೇ ಅಲ್ಲ, ಬದಲಿಗೆ, ಈ ಯೋಜನೆ ಅವಕಾಶ ಮಾಡಿಕೊಟ್ಟಿರುವ ಆಲೂಗೆಡ್ಡೆ ಬೀಜದ ಆಮದು ರೈತರ ಚೌಕಾಸಿ ಸಾಮರ್ಥ್ಯವನ್ನು ಇನ್ನಷ್ಟು ಕುಗ್ಗಿಸುತ್ತದೆ.

ಸರಕಾರ ನೇಮಿಸಿದ ತೋಟಗಾರೀ ಕೃಷಿ ಸರಕುಗಳನ್ನು ಕುರಿತ ಅಧ್ಯಯನ ಗುಂಪು ತೋಟಗಾರಿಕಾ ಸಹಕಾರಿ ಸಂಘಗಳೇ ಆಹಾರ ಸಂಸ್ಕರಣ ಸೌಲಭ್ಯಗಳನ್ನು ಬೆಳೆಸಿಕೊಳ್ಳಬೇಕೆಂದು ಶಿಫಾರಸು ಮಾಡಿತು. ಇದರಿಂದ ರೈತಾಪಿ ಜನಗಳಿಗೆ ಸ್ವಲ್ಪವಾದರೂ ಪ್ರಯೋಜನ ಸಿಗುತ್ತಿತ್ತು. ಆದರೆ ಸರಕಾರ ಈ ಅಲ್ಪ-ಸ್ವಲ್ಪ ಪ್ರಗತಿ ಶೀಲ ನಿಲುವನ್ನು ತ್ಯಜಿಸಿ ಗ್ರಾಮೀಣ ಸಹಕಾರಿ ಸಂಘಗಳು ನೇರವಾಗಿ ವಿದೇಶೀ ಗುತ್ತೇದಾರಿಗಳ ಹತೋಟಿಗೊಳಪಡುವ ಯೋಜನೆಗೆ ಅಂಗೀಕಾರ ನೀಡಿದೆ. ಪೆಪ್ಸಿಕೋ ಯೋಜನೆ ಇದರ ಒಂದು ಆರಂಭವಷ್ಟೆ. ಕೃಷಿ ಕ್ಷೇತ್ರದಲ್ಲಿ ಸ್ವಲ್ಪಮಟ್ಟಿನ ಸ್ವಾವಲಂಬನೆ ಸಾಧಿಸುವ ನೀತಿಯನ್ನು ಸರಕಾರ ಪೂರ್ಣವಾಗಿ ಕೈಬಿಟ್ಟಂತಾಗಿದೆ.

ಈಗೆ ಪೆಪ್ಸಿಕೋ ಯೋಜನೆ ನಮ್ಮ ಕೃಷಿ ಅಭಿವೃದ್ಧಿಗೆ, ಆ ಮೂಲಕ ನಮ್ಮ ರಾಜಕೀಯ ಸಾರ್ವಭೌಮತೆಗೆ ಬಹು ರಾಷ್ಟ್ರೀಯ ಕಂಪೆನಿಗಳಿಂದ ಉಂಟಾಗಿರುವ ಬೆದರಿಕೆಯ ಒಂದು ಸೂಚನೆ ಅಷ್ಟೆ. ಸಸ್ಯಶಾಸ್ತ್ರ ತಂತ್ರಜ್ಞಾನದ ಬೆಳವಣಿಗೆಗಳು ಮತ್ತು ಅದರ ಜೊತೆಗೆ ಬೀಜಗಳ ಪೂರೈಕೆ ಕುರಿತ ಸರಕಾರದ ಹೊಸ ನೀತಿ ನಮ್ಮ ರೈತಾಪಿ ವರ್ಗವನ್ನು ಶೋಷಿಸುವ ಬಹುರಾಷ್ಟ್ರೀಯ ಗುತ್ತೇದಾರಿಗಳ ಸಾಮರ್ಥ್ಯವನ್ನು ಹಲವು ಪಟ್ಟು ಹೆಚ್ಚಿಸಿದೆ. ಇದರ ದುಷ್ಪರಿಣಾಮ ಇಂದಿನ 'ಹಸಿರು ಕ್ರಾಂತಿ' ಕ್ಕಿಂತಲೂ ತೀವ್ರವಾಗಿರುತ್ತದೆ. ಫಿಲಿಫೈನ್ಸ್, ಥೈಲ್ಯಾಂಡ್‌ನ ಉದಾಹರಣೆಗಳು ನಮ್ಮ ಮುಂದಿವೆ.

ರೈತರಿಗೆ ಕೈಕೊಟ್ಟರು!

ಪೆಪ್ಸಿಕೋ ಯೋಜನೆ ಪಂಜಾಬಿನ ರೈತರಿಗೆ ಮತ್ತೆ ಹೆಮ್ಮೆಯ ಸ್ಥಾನ ನೀಡುವ ವರದಾನ ಎಂದು ಘೋಷಿಸಲಾಗುತ್ತಿದೆ. ಆದರೆ ಇಂತಹುದೇ ಒಂದು ಯೋಜನೆಯನ್ನು ಪಂಜಾಬಿನ ರೈತರು ಈಗಾಗಲೇ ನೋಡಿದ್ದಾರೆ. ಪಂಜಾಬ್ ಕೃಷಿ ಉದ್ದಿಮೆ ಕಾರ್ಪೋರೇಷನ್ ಹಾಗೂ ಟಾಟಾಗಳ ವೋಲ್ಟಾಸ್ ಕಂಪೆನಿ ಜಂಟಿಯಾಗಿ ಅಬೋಹರದಲ್ಲಿ ಆರಂಭಿಸಿದ ಆಹಾರ ಸಂಸ್ಕರಣಾ ಘಟಕವೊಂದು ಮೊದಲ ವರ್ಷ ಟಮೋಟೋ ಬೆಳೆಗಾರರಿಗೆ ಒಳ್ಳೆಯ ಬೆಲೆ ನೀಡಿತು. ಆದರೆ ಎರಡನೇ ವರ್ಷವೇ ಹಗ್ಗದಲ್ಲಿ ಟೊಮೋಟೋ ಎಲ್ಲಿಂದ ಸಿಗ ಬಹುದು ಎಂದು ಅದು ಹುಡುಕಲಾರಂಭಿಸಿತು. ಫಲವಾಗಿ ಈ ಯೋಜನೆ ವಿಫಲಗೊಂಡಿತು. ಜೊತೆಗೆ ನೂರಾರು ರೈತರ ನಿರೀಕ್ಷೆ ಮಣ್ಣುಕೂಡಿತು. ಈ ನಡುವೆ ಪೆಪ್ಸಿಕೋ ಯೋಜನೆ ಬಂದು ಜನರ ಗಮನವನ್ನು ಬೇರೆ ಧಿಕ್ಕಿನಲ್ಲಿ ಸೆಳೆಯಲಾರಂಭಿಸಿತು!

ರಾಜಕೀಯ ಮುಗ್ಧರು

ಅಕ್ಟೋಬರ್ ೨ರಿಂದ ೭ರವರೆಗೆ ಸೇರಿದ್ದ ಸಿ.ಪಿ.ಐ.(ಎಂ)ನ ಕೇಂದ್ರ ಸಮಿತಿ ಮುಂಬರುವ ಮಹಾಧಿವೇಶನದಲ್ಲಿ ಪಕ್ಷದ ಸಂವಿಧಾನಕ್ಕೆ ಈ ಕೆಳಗಿನ ತಿದ್ದುಪಡಿ ಸೂಚಿಸಲು ನಿರ್ಧರಿಸಿದೆ.

ಪಕ್ಷದ ಸಂವಿಧಾನದ ೧೫ನೇ ಕಾಲಮಿನ ೫ನೇ ವಿಭಾಗದಲ್ಲಿ ಈ ಉಪವಿಭಾಗವನ್ನು ಸೇರಿಸುವುದು -

ಅ) ಕೇಂದ್ರ ಸಮಿತಿ ತನ್ನ ಸದಸ್ಯರಿಂದ ಒಂದು ಕಾರ್ಯದರ್ಶಿ ಮಂಡಳಿಯನ್ನು ಚುನಾಯಿಸುತ್ತದೆ. ಕಾರ್ಯದರ್ಶಿ ಮಂಡಳಿಯ ಸದಸ್ಯರ ಸಂಖ್ಯೆಯನ್ನು ಕೇಂದ್ರ ಸಮಿತಿ ನಿರ್ಧರಿಸುತ್ತದೆ. ಕಾರ್ಯದರ್ಶಿ ಮಂಡಳಿ ಪಾಲಿಟ್‌ಬ್ಯೂರೋ ಮಾರ್ಗದರ್ಶನದಲ್ಲಿ ಪಕ್ಷದ ಕೇಂದ್ರದ ದೈನಂದಿನ ಕೆಲಸ ಕಾರ್ಯಗಳನ್ನು ನೋಡಿಕೊಳ್ಳುತ್ತದೆ ಮತ್ತು ಕೇಂದ್ರ ಸಮಿತಿಯ ನಿರ್ಣಯಗಳ ಅನುಷ್ಠಾನದಲ್ಲಿ ಪಾಲಿಟ್‌ಬ್ಯೂರೋಗೆ ನೆರವಾಗುತ್ತದೆ.

ಎಲ್ಲಾ ರಂಗಗಳಲ್ಲೂ ಮಹಿಳೆಯರ ಸಂಘಟನೆ

ರಾಷ್ಟ್ರಮಟ್ಟದಲ್ಲಿ ಎಡ ಪ್ರಜಾಪ್ರಭುತ್ವ ಶಕ್ತಿಗಳು ಬೆಳೆದು ಬರುತ್ತಿರುವ ಸಂದರ್ಭದಲ್ಲಿ ಮಹಿಳಾ ಚಳುವಳಿಗಳು ಬೆಳೆದು ಬರುತ್ತಿದೆ. ಕಾಂಗ್ರೆಸ್ ಆಳ್ವಿಕೆ ರಾಜ್ಯಗಳಲ್ಲಿ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ, ಅತ್ಯಾಚಾರ, ವರದಕ್ಷಿಣೆ ಮುಂತಾದವು ಹೆಚ್ಚಾಗುತ್ತಿರುವುದು ಕೇಂದ್ರ ಸರ್ಕಾರದ ಅಂಕಿ ಅಂಶಗಳಲ್ಲೇ ಹೇಳಲ್ಪಡುತ್ತಿದೆ. ಸತಿ ಪದ್ಧತಿಯಂಥ ಅಮಾನವೀಯ ಪದ್ಧತಿಯನ್ನು ಜೀವಂತವಾಗಿಡಲು ಪ್ರಯತ್ನಿಸುತ್ತಿರುವುದು ಕಾಂಗ್ರೆಸ್ ಸರ್ಕಾರಗಳ ಧೋರಣೆಯಾದಲ್ಲಿ, ತ್ರಿಪುರಾದಲ್ಲಿ ಪ್ರಜಾಪ್ರಭುತ್ವದ ಕೊಲೆ ಮಾಡಿ, ಆದಿವಾಸಿ ಮಹಿಳೆಯರ ಮೇಲೆ ನಡೆಸಿದ ಸಾಮೂಹಿಕ ಅತ್ಯಾಚಾರದ ವಿರುದ್ಧ ದೇಶಾದ್ಯಂತ ಎಲ್ಲಾ ಎಡ ಪ್ರಜಾಪ್ರಭುತ್ವ ಸಂಘಟನೆಗಳು ಉಗ್ರವಾಗಿ ಖಂಡಿಸಿವೆ. ಕಾಂಗ್ರೆಸ್ ಸರ್ಕಾರಗಳಲ್ಲಿ ಮಹಿಳೆಯರಿಗೆ ಯಾವುದೇ ರಕ್ಷಣೆಯಿಲ್ಲದಿರುವುದರ ವಿರುದ್ಧ ಸಮ್ಮೇಳನವು ಖಂಡಿಸುತ್ತದೆ. ಕೇಂದ್ರ ಸರ್ಕಾರ ಕೂಡಲೇ ಸೂಕ್ತ ರಕ್ಷಣೆಯನ್ನು ಎಲ್ಲಾ ವಿಭಾಗದ ಮಹಿಳೆಯರಿಗೆ ನೀಡಬೇಕೆಂದು ಸಮ್ಮೇಳನವು ಒತ್ತಾಯಿಸುತ್ತದೆ.

ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಆದ ರಾಜಕೀಯ ಬದಲಾವಣೆಯಲ್ಲಿ ಮಹಿಳೆಯರು ಭಾಗವಹಿಸಿದ್ದಾರೆ. ಮಂಡಲ್ ಹಾಗೂ ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಮಹಿಳೆಯರ ಸಹಾನುಭೂತಿ ಪಡೆದು ಅಧಿಕಾರಕ್ಕೆ ಬಂದ ಜನತಾ ಸರ್ಕಾರವೂ ಮಹಿಳೆಯರ ಪ್ರಗತಿ ಬಗ್ಗೆ ಕಿಂಚಿತ್ತು ಗಮನ ಕೊಟ್ಟಿಲ್ಲ. ನಮ್ಮ ರಾಜ್ಯದಲ್ಲಿ ಉಳಿದಿರುವ ಅರೆ ಊಳಿಗಮಾನ್ಯ, ಬಂಡವಾಳಶಾಹಿ ಪ್ರವೃತ್ತಿಗಳಿಂದಾಗಿ ಗ್ರಾಮೀಣ ಹಾಗೂ ಪಟ್ಟಣ ಪ್ರದೇಶದಲ್ಲಿ ಮಹಿಳೆಯರು ನಾನಾ ರೀತಿಯ ದಬ್ಬಾಳಿಕೆ, ದೌರ್ಜನ್ಯ, ಅತ್ಯಾಚಾರ, ವರದಕ್ಷಿಣೆ, ಸಾಮೂಹಿಕ ಬಾಲ್ಯವಿವಾಹ, ಇತರೆ ಸಾಮಾಜಿಕ ಅನಿಷ್ಟ ಪದ್ಧತಿಯಲ್ಲಿ ಉಳಿಯುವಂತಾಗಿದೆ. ಇದರ ವಿರುದ್ಧ ಸರ್ಕಾರ ಗಮನ ಕೊಡದೆ ಇರುವುದರ ಬಗ್ಗೆ ಪಕ್ಷದ 13 ನೇ ರಾಜ್ಯ ಸಮ್ಮೇಳನವು ಖಂಡಿಸಿ ಕೂಡಲೇ ಸರ್ಕಾರ ಮಹಿಳೆಯರ ಬಗ್ಗೆ ಹೆಚ್ಚು ಗಮನ ಹರಿಸಬೇಕು ಹಾಗೂ ಎಲ್ಲಾ ಸಾಮೂಹಿಕ ಸಂಘಟನೆಗಳು ಶ್ರಮಿಸಬೇಕೆಂದು ಒತ್ತಾಯಿಸುತ್ತದೆ.

ಇತ್ತೀಚೆಗೆ ಹಲವಾರು ಚಳುವಳಿಗಳು ಬೆಳೆದು ಬರುತ್ತಿರುವ ಸಂದರ್ಭದಲ್ಲಿ ಮಹಿಳೆಯರು ಪ್ರವಾಹದ ರೀತಿಯಲ್ಲಿ ರೈತ, ಕೃಷಿ, ಕಾರ್ಮಿಕರ,ಯುವಕ ಹಾಗೂ ವಿದ್ಯಾರ್ಥಿ ರಂಗದಲ್ಲಿ ಬರುತ್ತಿರುವುದು ಒಂದು ಸ್ವಾಗತಾರ್ಹ ವಿಷಯವಾಗಿದೆ. ಮತ್ತೊಂದು ಕಡೆ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ, ಅತ್ಯಾಚಾರಗಳು ಹೆಚ್ಚಾಗುತ್ತಿದೆ. ರಾಜ್ಯದ ಮಠೀಯ, ಧಾರ್ಮಿಕ, ಸಂಸ್ಥೆಗಳ ಅಡಿಯಲ್ಲಿ ಸುವ್ಯವಸ್ಥಿತವಾಗಿ ನಡೆಸಿದ, ಅಮಾನವೀಯವಾಗಿ ಅತ್ಯಂತ ಕ್ರೂರವಾದ ಪ್ರಕರಣಗಳೆಂದರೆ ಕುದುರೆಮೋತಿಪ್ರಕರಣ,ಬೆತ್ತಲೆ ಸೇವೆ, ಪದ್ಮಲತಾ ಪ್ರಕರಣ, ಕೆ.ಹೊಸಳ್ಳಿಪ್ರಕರಣ ಹೀಗೆ ಹಲವಾರನ್ನು ಹೆಸರಿಸಬಹುದಾಗಿದೆ.

ರಾಜ್ಯದಲ್ಲಿ ವಿವಿಧ ರಂಗಗಳಲ್ಲಿ ದುಡಿಯುವ ಲಕ್ಷಾಂತರ ಮಹಿಳೆಯರು ಯಾವುದೇ ಸೌಲಭ್ಯ, ರಕ್ಷಣೆ, ಸಮಾನ ವೇತನದಿಂದಾಗಿ ವಂಚಿತರಾಗಿದ್ದಾರೆ. ಈ ನಿಟ್ಟಿನಲ್ಲಿ ಸ್ವಲ್ಪ ಮಟ್ಟಿಗೆ ಸಂಘಟಿತರಾಗಿದ್ದಾರೆ. ಆದರೆ, ಹೆಚ್ಚಿನವರು ಅಸಂಘಟಿತರಾಗಿಯೇ ಉಳಿದಿದ್ದಾರೆ. ಈ ದುಡಿಯುವ ಮಹಿಳೆಯರ ಬಗ್ಗೆಯೂ ಹೆಚ್ಚಿಗೆ ಸಂಘಟಿಸಬೇಕಾದ ಅವಶ್ಯಕತೆ ಇದೆ. ರೈತ ಹಾಗೂ ಕೃಷಿ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳು ಬೆಳಕಿಗೆ ಬರದೆ ಇಂತಹ ಮಹಿಳೆಯರು ಭೂಮಾಲಿಕರ ಅವಹೇಳನಕಾರಿ ಕೃತ್ಯಗಳಿಗೆ ಬಲಿಯಾಗುತ್ತಿದ್ದಾರೆ. ಈ ಮಹಿಳೆಯರ ರಕ್ಷಣೆಗಾಗಿ ಪಕ್ಷವು ತೀವ್ರ ಗಮನ ಕೊಡಬೇಕಾಗಿದೆ.

ರಾಜ್ಯದಲ್ಲಿ ಹಲವಾರು ವಿಚ್ಛಿದ್ರಕಾರಿ ಮಹಿಳಾ ಸಂಘಟನೆಗಳು ಹಳ್ಳಿ ಹಾಗೂ ಪಟ್ಟಣ ಪ್ರದೇಶಗಳಲ್ಲಿ ವಿವಿಧ ಮುಖವಾಡಗಳೊತ್ತು ಕೆಲಸ ನಿರ್ವಹಿಸುತ್ತಿವೆ. ಎಡ ಪಂಥವಾದಿ ಮಹಿಳಾ ಸಂಸ್ಕೃತಿ ಸಂಘಟನೆ ಕೆಲಸ ನಿರ್ವಹಿಸುತ್ತಿದೆ. ಮಹಿಳೆಯರ ದೌರ್ಜನ್ಯದ ಲಾಭಗಳನ್ನು ಪಡೆದ ಮಹಿಳೆಯರನ್ನು ತಪ್ಪು ದಾರಿಗೆ ಎಳೆಯುವ ಸಾಧ್ಯತೆಗಳು ಕಂಡು ಬರುತ್ತಿದೆ. ಇದರ ವಿರುದ್ಧ ಹೋರಾಡಬೇಕಾಗಿದೆ. ಮಹಿಳೆಯರನ್ನು ಎಡ ಮತ್ತು ಪ್ರಜಾಪ್ರಭುತ್ವ ಸಂಘಟನೆ ಅಡಿಯಲ್ಲಿ ತರುವುದು ಅತ್ಯವಶ್ಯಕವಾಗಿದೆ.

ಜನತಾ ಸರ್ಕಾರವು ತಾನು ಅಧಿಕಾರಕ್ಕೆ ಬರಲು ಮುಂಚಿತವಾಗಿ ಮಹಿಳೆಯರಿಗೆ ಆಸ್ತಿ ಹಕ್ಕು ಕೊಡುವುದಾಗಿ ಆಶ್ವಾಸನೆ ಕೊಟ್ಟಿದ್ದು ಅದನ್ನು ಕೂಡಲೇ ಜಾರಿಗೊಳಿಸಬೇಕೆಂದು ಮಹಿಳೆಯರ ಕುರಿತು ಹಲವಾರು ಪ್ರಗತಿಪರ ಯೋಜನೆಗಳನ್ನು ಜಾರಿಗೆ ತರುವಂತೆ ಸರ್ಕಾರಕ್ಕೆ ಸಮ್ಮೇಳನವು ಒತ್ತಾಯಿಸುತ್ತದೆ.

ರಾಜ್ಯದಲ್ಲಿ ಮಹಿಳಾ ಚಳವಳಿಗಳು ದುರ್ಬಲವಾಗಿರುವುದರಿಂದ ಮಹಿಳಾ ಚಳುವಳಿ ಬೆಳೆಯಲು ಎಲ್ಲಾ ರಂಗಗಳಲ್ಲೂ ಮಹಿಳೆಯರನ್ನು ಸಂಘಟಿಸಲು ಹೆಚ್ಚು ಮುತುವರ್ಜಿ ವಹಿಸಿ ಕೆಲಸ ಮಾಡಬೇಕಾಗಿದೆ ಎಂದು 13 ನೇ ಕರ್ನಾಟಕ ರಾಜ್ಯ ಸಮ್ಮೇಳನವು ಒತ್ತಾಯಿಸುತ್ತದೆ.

ಪಾಕಿಸ್ತಾನದಲ್ಲಿ ಪ್ರಜಾಪ್ರಭುತ್ವದ ಮರುಸ್ಥಾಪನೆ

ಶ್ರೀಮತಿ ಬೆನಝೀರ್ ಭುಟ್ಟೊ ಪ್ರಧಾನ ಮಂತ್ರಿಯಾಗುವುದರೊಂದಿಗೆ ಉಂಟಾಗಿರುವ ಹೊಸ ಸನ್ನಿವೇಶ ಪಾಕಿಸ್ತಾನದ ಮೇಲೆ ಮಾತ್ರವಲ್ಲ, ನಮ್ಮ ಇಡೀ ಉಪಖಂಡ ಮತ್ತು ವಿಶ್ವದ ರಾಜಕೀಯದ ಮೇಲೂ ಪ್ರಭಾವ ಬೀರಲಿದೆ.

ಮಿಲಿಟರಿ ಆಳ್ವಿಕೆ ಹಲವಾರು ಅಡ್ಡಿ-ಆತಂಕವೊಡ್ಡಿದರೂ, ಪರಿಚಯ ಪತ್ರದ ಮೂಲಕ ಸುಮಾರು 30% ಜನರ ಮತದಾನದ ಹಕ್ಕನ್ನು ಕಸಿದುಕೊಂಡರೂ ಮಿಲಿಟರಿ ಕೂಟದ ಬೆಂಬಲ ಪಡೆದ ಇಸ್ಲಾಮಿಕ್ ಜಮೂರಿ ಇತ್ತಿಹಾದ್(ಐ.ಜೆ.ಐ) ಕೇವಲ 54 ಸ್ಥಾನ ಪಡೆಯಲು ಶಕ್ತವಾಯಿತಷ್ಟೆ. ಪಾಕಿಸ್ತಾನ್ ಪೀಪಲ್ಸ್ ಪಾರ್ಟಿ (ಪಿ.ಪಿ.ಪಿ.)ಗೆ 93, ಪ್ರಜಾಪ್ರಭುತ್ವ ಮರುಸ್ಥಾಪನಾ ಆಂದೋಲನದಲ್ಲಿನ ಅದರ ಮಿತ್ರರಿಗೆ 18 ಸೀಟು ದೊರೆಯಿತು.

ಈ ವಿಜಯ, ಪಿ.ಪಿ.ಪಿ. ಮತ್ತು ಐ.ಜೆ.ಐ. ನಡುವೆ ಧ್ರುವೀಕರಣ ನಿರೀಕ್ಷಿತವೇ ಆಗಿತ್ತು. ಯಾಕೆಂದರೆ ಈ ಚುನಾವಣೆ ಮಿಲಿಟರಿ ಆಳ್ವಿಕೆಯ ವಿರುದ್ಧ ದೀರ್ಘ ಸಾಮೂಹಿಕ ಪ್ರಕ್ಷೋಭೆಯ ಫಲವಾಗಿಯೇ ನಡೆದಿತ್ತು. ಅತ್ತ ಈ ಸಾಮೂಹಿಕ ಆಂದೋಲನದ ರಭಸ ಕಂಡ ಅಮೆರಿಕನ್ ಸಾಮ್ರಾಜ್ಯಶಾಹಿಗಳು ಕೂಡಾ ಮಿಲಿಟರಿ ಆಳ್ವಿಕೆಯನ್ನು ಪಾಕಿಸ್ತಾನದಲ್ಲಿ ಮುಂದುವರೆಸುವುದು ಸಾಧ್ಯವಿಲ್ಲ ಎಂದು ಅರಿತುಕೊಂಡು ಮಿಲಿಟರಿ ಅರಸರ ಬಗ್ಗೆ ತನ್ನ ನಿಲುವನ್ನು ಸೂಕ್ತವಾಗಿ ಬದಲಿಸಿಕೊಂಡಿತು.

ಚುನಾವಣೆಗಳ ನಂತರವೂ ಮಿಲಿಟರಿ ಅರಸರು ಮೂರು ತೂರಿ ಪಿ.ಪಿ.ಪಿ. ಪಕ್ಷ ಐ.ಜೆ.ಐ.ನೊಂದಿಗೆ ಸಮ್ಮಿಶ್ರ ಸರ್ಕಾರ ರಚಿಸುವಂತೆ ಒತ್ತಡ ತಂದಿತು. ಆದರೆ ಸಾಮೂಹಿಕ ಆಂದೋಲನದ ಒತ್ತಡ ಇದನ್ನು ತಡೆಯಿತು. ಹೊಸ ಅಧ್ಯಕ್ಷರ ಚುನಾವಣೆಗೆ ಸಂಬಂಧಪಟ್ಟಂತೆ, ಝಿಯಾರ ವಿದೇಶಾಂಗ ಮಂತ್ರಿಯನ್ನೇ ಮುಂದುವರೆಸುವಲ್ಲಿ ಶ್ರೀಮತಿ ಬೆನಝೀರ್ ಕೆಲವು ರಾಜಿ ಮಾಡಿಕೊಂಡಿದ್ದರೂ ಈ ಚುನಾವಣೆಯ ಮಹತ್ವವನ್ನು ಕಡೆಗಣಿಸುವಂತಿಲ್ಲ. ಯಾಕೆಂದರೆ ಇದು ಆಳುವ ವರ್ಗಗಳ ನಡುವಿನ ಕಸರತ್ತುಗಳ ಫಲವಲ್ಲ. ಬದಲಾಗಿ ಪ್ರಜಾ ಪ್ರಭುತ್ವದ ಮರುಸ್ಥಾಪನೆಗಾಗಿ ವಿವಿಧ ದೇಶೀ ಗುಂಪುಗಳು, ವಿವಿಧ ಜನವಿಭಾಗಗಳು ಒಂದೇ ಪ್ರವಾಹದಲ್ಲಿ ಬೆರೆತು ಮತೀಯ ಮೂಲಭೂತವಾದಿಗಳನ್ನು ಪೂರ್ಣವಾಗಿ ದೂರೀಕರಿಸಿದ ಚುನಾವಣೆಯಿದು.

ಈ ಚುನಾವಣಾ ವಿಜಯ ಈಗ ರಕ್ಷಣಾ ಬಾಬ್ತಿಗಾಗಿ ಅಗಾಧ ಮೊತ್ತಗಳನ್ನು ಖರ್ಚು ಮಾಡುತ್ತಿರುವ ನಮ್ಮೆರಡು ದೇಶಗಳ ಸಂಬಂಧಗಳನ್ನು ಉತ್ತಮಪಡಿಸಲಿದೆ. ಖಾಲಿಸ್ತಾನಿಗಳಿಗೆ, ಮುಸ್ಲಿಂ ಮೂಲಭೂತವಾದಿ ಗಳಿಗೆ ಪಾಕ್ ಬೆಂಬಲ ಕುಸಿದು, ಭಾರತ-ಪಾಕಿಸ್ತಾನ ಸಂಬಂಧಗಳ ಈ ಕರಾಳ ಅಧ್ಯಾಯ ಕೊನೆಗೊಂಡು ಪಂಜಾಬ್ ಮತ್ತು ಜಮ್ಮು-ಕಾಶ್ಮೀರದಲ್ಲಿ ಶಾಂತಿ ನೆಲೆಸಲು ಸಹಾಯಕ ವಾಗಲಿದೆ.

ಅಫಘಾನ್ ಸಮಸ್ಯೆ ಸಂಬಂಧಪಟ್ಟಂತೆ ಹಿಂದಿನ ಮಿಲಿಟರಿ ಕೂಟದ ನೀತಿ ಮುಂದುವರೆಯುತ್ತದೆ ಎಂದು ಸಾಮ್ರಾಜ್ಯ ಶಾಹಿಗಳಿಗೆ, ಮಿಲಿಟರಿ ಶಕ್ತಿಗಳಿಗೆ ಶ್ರೀಮತಿ ಬೆನಝೀರ್ ಆಶ್ವಾಸನೆ ಕೊಟ್ಟಿದ್ದರೂ ಜಿನೇವಾ ಒಪ್ಪಂದವನ್ನು ಬುಡಮೇಲು ಮಾಡುವ ಹಳೆಯ ನೀತಿಯನ್ನು ಮುಂದುವರೆ ಸುವುದು ಆಕೆಯ ಸರ್ಕಾರಕ್ಕೆ ಕಷ್ಟವಾಗಲಿದೆ. ಯಾಕೆಂದರೆ ಪಿ.ಪಿ.ಪಿ.ಗೆ ಬೆಂಬಲ ನೀಡಿರುವ, ಪಾಕಿಸ್ತಾನದಲ್ಲಿ ಈ ಹೊಸ ಸನ್ನಿವೇಶ ಕಂಡುಕೊಳ್ಳಲು ಬೆಂಬಲ ನೀಡಬೇಕಾದ ಹಲವು ಪಕ್ಷಗಳು ಅಫ್‌ಘಾನಿಸ್ತಾನದ ಆಂತರಿಕ ವಿಷಯಗಳಲ್ಲಿ ಕೈಹಾಕಬಾರದೆಂಬ ನೀತಿಗೆ ಬದ್ಧವಾಗಿವೆ. ಅವುಗಳ ದನಿಯನ್ನು ನಿರ್ಲಕ್ಷಿಸುವುದು ಹೊಸ ಸರಕಾರಕ್ಕೆ ಸಾಧ್ಯವಿಲ್ಲ. 11 ವರ್ಷಗಳ ಮಿಲಿಟರಿ ಆಳ್ವಿಕೆ ದೇಶೀಯ ಸಮಸ್ಯೆಯನ್ನು ಬಿಗಡಾಯಿಸಿದೆ. ಆರ್ಥಿಕ ರಂಗದಲ್ಲಿ ದೇಶವನ್ನು ಸಾಲ ಬಲೆಯಲ್ಲಿ ಸಿಲುಕಿಸಿದೆ. ಈ ಗಂಭೀರ ಸಮಸ್ಯೆಗಳನ್ನು ಹೊಸ ಪ್ರಜಾಪ್ರಭುತ್ವ ಸರ್ಕಾರ ಎದುರಿಸ ಬೇಕಾಗಿದೆ. ಪಾಕಿಸ್ತಾನವನ್ನು ಸ್ವಾವಲಂಬೀ ದೇಶವನ್ನಾಗಿಸುವ ಪಿ.ಪಿ.ಪಿ. ಆಶ್ವಾಸನೆಯನ್ನು ಜಾರಿಗೆ ತರಲು ಜನಸಮೂಹಗಳ ಸಕ್ರಿಯ ಭಾಗವಹಿಸುವಿಕೆ ಅತ್ಯಗತ್ಯ. ಪ್ರಜಾಪ್ರಭುತ್ವ ಆಂದೋಲನದ ಬಲವರ್ಧನೆಯಿಂದ ಮಾತ್ರವೇ ಪಾಕಿಸ್ತಾನೀ ರಾಜಕೀಯಕ್ಕೆ ಒಂದು ಸರಿ ಯಾದ ಮಾರ್ಗನಿರ್ದೇಶನ ಕೊಡಲು ಸಾಧ್ಯ.

ಬೆನಝೀರ್ ಸರ್ಕಾರ ತನ್ನ ಆಳ್ವಿಕೆಯನ್ನು ದೃಢಪಡಿಸಿಕೊಳ್ಳಬೇಕಾದರೆ, ಪಾಕಿಸ್ತಾನೀ ರಾಜಕೀಯಕ್ಕೆ ಸ್ಥಿರತೆ ತಂದು ಕೊಡಬೇಕಾದರೆ ಪಾಕಿಸ್ತಾನದ ಜನತೆಯನ್ನು ಜಾಗೃತಗೊಳಿಸ ಬೇಕು. ಈ ಹೊಣೆಯನ್ನು ಅದು ಹೇಗೆ ನಿರ್ವಹಿಸುತ್ತದೆ ಎಂದು ಕಾದು ನೋಡಬೇಕು.

ಆರ್ಮೇನಿಯಾ ದುರಂತಕ್ಕೆ ಪಕ್ಷದ ಸಂತಾಪ

ಸೋವಿಯತ್ ಒಕ್ಕೂಟದ ಆರ್ಮೇನಿಯಾ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಭೂಕಂಪದಿಂದ ಅಗಾಧ ಅನಾಹುತ ಉಂಟಾಗಿರುವ ಬಗ್ಗೆ ಸಿ.ಪಿ.ಐ.(ಎಂ) ಆಘಾತವ್ಯಕ್ತಪಡಿಸಿದೆ. ಈ ಅನಾಹುತದಲ್ಲಿ ಸಾವಿರಾರು ಜೀವಹಾನಿಯಾಗಿದೆ; ಅಪಾರ ತೊಂದರೆ ಉಂಟಾಗಿವೆ. ಈ ದುರಂತದ ಬಗ್ಗೆ ತೀವ್ರ ಶೋಕವನ್ನು ಮತ್ತು ಭೂಕಂಪ ಪೀಡಿತ ಕುಟುಂಬಗಳಿಗೆ ಹಾರ್ದಿಕ ಸಂತಾಪ ವ್ಯಕ್ತಪಡಿಸಿರುವ ಸಿ.ಪಿ.ಐ.(ಎಂ)ಈ ವಿಪತ್ತನ್ನು ಎದುರಿಸುವಲ್ಲಿ ಸೋವಿಯತ್ ಜನತೆಯೊಂದಿಗೆ ಸೌಹಾರ್ದತೆ ವ್ಯಕ್ತಪಡಿಸಿದೆ.

ಕೇಂದ್ರ ಸಮಿತಿ, ಪ್ರಧಾನಮಂತ್ರಿಗಳ ವಿಶೇಷ ಆರ್ಮೇನಿಯಾ ಭೂಕಂಪ ಪರಿಹಾರ ನಿಧಿಗೆ ಒಂದು ಲಕ್ಷ ರೂ. ನೀಡಿದೆ.

ಸಾಮ್ರಾಜ್ಯಶಾಹಿಂಗಳಿಗೆ ಮತ್ತೊಮ್ಮೆ ಮುಖಭಂಗ

ಈ ಸಾಲುಗಳನ್ನು ಬರೆಯುವ ಸಮಯ ಕ್ಕೆ ಜಿನೇವಾದಲ್ಲಿ ಪ್ಯಾಲೆಸ್ಟೈನ್ ಕುರಿತ ವಿಶ್ವ ಸಂಸ್ಥೆ ಚರ್ಚೆ ಆರಂಭವಾಗಿದೆ. ಈ ಘಟನೆ ಒಂದೇ ಕಾಲಕ್ಕೆ ರೇಗನ್ ಆಳ್ವಿಕೆಯ ನಿಜಬಣ್ಣವನ್ನು ಬಯಲುಗೆಳೆದಿದೆ. ವಿಶ್ವ ಸಮುದಾಯದಲ್ಲಿ ಅದರ ಒಂಟಿತನ ವನ್ನು ಮತ್ತು ಪ್ಯಾಲೆಸ್ಟೈನ್ ಹೋರಾಟಗಾರರ ಒಂದು ವರ್ಷದ 'ಇಂತಿಫಾದಾ' ಹೋರಾಟದ ಪರಿಣಾಮವನ್ನು ಜಗತ್ತಿಗೆ ತೋರಿಸಿಕೊಟ್ಟಿದೆ.

ಪ್ಯಾಲೆಸ್ಟೈನ್ ವಿಮೋಚನಾರಂಗದ ಮುಖಂಡ ಯಾಸೆರ್ ಅರಾಫತ್ ವಿಶ್ವಸಂಸ್ಥೆಯ ಚರ್ಚೆ ಯಲ್ಲಿ ಭಾಗವಹಿಸಲು ಪ್ರವೇಶ ವೀಸಾ ನೀಡಲು ಅಮೆರಿಕಾದ ನಿರಾಕರಣೆ ನಿಸ್ಸಂಶಯವಾಗಿಯೂ ಕೆಲವೇ ದಿನಗಳ ಹಿಂದೆ, ಅಂದರೆ ನವಂಬರ್ 15 ರಂದು ಪ್ಯಾಲೆಸ್ಟೈನ್ ರಾಷ್ಟ್ರೀಯ ಮಂಡಳಿ ಮಾಡಿದ ಪ್ಯಾಲೆಸ್ಟೈನ್ ಪ್ರಭುತ್ವದ ಘೋಷಣೆಗೆ ರೇಗನ್ ಆಡಳಿತದ ಹತಾಶ ಪ್ರತಿಕ್ರಿಯೆ. ಜತೆಗೆ ಇಸ್ರೇಲ್ ಆಕ್ರಮಿತ ಪ್ರದೇಶಗಳಲ್ಲಿ ಒಂದು ವರ್ಷದಿಂದ ಧೀರ ಪ್ಯಾಲೆಸ್ಟೈನ್ ಜನತೆ ಕೇವಲ ಕಲ್ಲುಗಳನ್ನೇ ಆಯುಧ ಮಾಡಿಕೊಂಡು, ಸರದಿ ಮುಷ್ಕರಗಳ ಮೂಲಕ ನಡೆಸಿಕೊಂಡು ಬಂದ ಹೋರಾಟದ ಪರಿಣಾಮವನ್ನು ರೇಗನ್ ಆಡಳಿತ ಕೂಡ ಒಪ್ಪಿಕೊಡಂತಾಗಿದೆ. ರೇಗನ್ ಆಳ್ವಿಕೆಯ ವೀಸಾ ನಿರಾಕರಣೆ ಪ್ರತಿಯಾಗಿ ಸಮಸ್ತ ವಿಶ್ವ ಸಮುದಾಯ ಒಕ್ಕೊರಲಿನಿಂದ ಜಿನೇವಾದಲ್ಲಿ ಅಧಿವೇಶನ ನಡೆಸುವ ಠರಾವನ್ನು ಅಂಗೀಕರಿಸಿತು. ಅಮೆರಿಕಾದ ಜತೆಗೆ ಸ್ವಾಭಾವಿಕವಾಗಿಯೇ ಇಸ್ರೇಲ್ ಮಾತ್ರವಿತ್ತು. ಬಾಲಬುಡುಕ ಥ್ಯಾಚರ್ ಸರ್ಕಾರ ಕೂಡಾ ಬೆಂಬಲಿಸಲೂ ಆಗದೆ, ವಿರೋಧಿಸಲೂ ಆಗದೆ ಗೈರುಹಾಜರಾಯಿತು.

ಇದೇ ಡಿಸೆಂಬರ್ 8 ರಂದು ಇಸ್ರೇಲಿ ಆಕ್ರಮಿತ ಪ್ರದೇಶದಲ್ಲಿ ಪ್ಯಾಲೆಸ್ಟೈನ್ ಜನತೆ ತಮ್ಮ ಬಂಡಾಯದ ಮೊದಲನೇ ವಾರ್ಷಿಕೋತ್ಸವವನ್ನು ವಿರೋಚಿತ ರೀತಿಯಲ್ಲಿ ಆಚರಿಸಿದರು. ಯಥಾಪ್ರಕಾರ ಇಸ್ರೇಲೀ ಝಿಯೋನಿಸ್ಟರ ರಾಕ್ಷಸೀ ಮುಖ ಮತ್ತೊಮ್ಮೆ ಪ್ರಕಟಗೊಂಡಿತು.

ಬಂಡಾಯದ ಈ ಒಂದು ವರ್ಷದಲ್ಲಿ 500 ಮಂದಿ ಹುತಾತ್ಮರಾಗಿದ್ದಾರೆ. ಹತ್ತು ಸಾವಿರ ಮಂದಿ ಗಾಯಗೊಂಡಿದ್ದಾರೆ. ಮೂವತ್ತು ಸಾವಿರ ಯುವಜನರು ಸೆರೆಮನೆ ಗಳಿಗೆ ತಳ್ಳಲ್ಪಟ್ಟಿದ್ದಾರೆ. ಇಂತಹ ತ್ಯಾಗದ ಆಘಾತವನ್ನು ಮನಗಂಡೇ ಬಂಡಾಯ ಆರಂಭಿಸಿರುವ ಪ್ಯಾಲೆಸ್ಟೈನ್ ಜನತೆ ವ್ಯವಸ್ಥಿತ ವಾಗಿ ಹೋರಾಟ ಮುಂದುವರೆಸುತ್ತಿದ್ದಾರೆ. ಸಾಮ್ರಾಜ್ಯಶಾಹಿಂಗಳ ಕ್ರಮ ಈ ಹೋರಾಟದ ವಿಜಯವನ್ನು ವಿಳಂಬಗೊಳಿಸಬಹುದಷ್ಟೆ. ಅದನ್ನು ತಡೆಯುವ ಸ್ಥಿತಿಯಲ್ಲಿ ಅವರೀಗ ಇಲ್ಲ.

ಅತ್ತ ಪ್ಯಾಲೆಸ್ಟೈನ್‌ರ ಬಂಡಾಯ ಇಸ್ರೇಲೀ ಆರ್ಥಿಕ ವ್ಯವಸ್ಥೆಯನ್ನು ಸಂಪೂರ್ಣ ನಜ್ಜುಗುಜ್ಜಾಗಿಸಿದೆ.

ಕಾರ್ಮಿಕ -ವಿರೋಧಿ ಮಸೂದೆಗಳ ಬಗ್ಗೆ ಎಚ್ಚರಿಕೆ

ಕಳೆದ 3 ವರ್ಷಗಳ ಜವಳಿ ಉದ್ದಿಮೆಯ ಬಿಕ್ಕಟ್ಟನ್ನು ಇನ್ನಷ್ಟು ಉಲ್ಬಣಗೊಳಿಸಿರುವ, ಕರ್ನಾಟಕದಲ್ಲಿಯೂ ಹಲವಾರು ಗಿರಣಿಗಳು ಮುಚ್ಚುವಂತಾಗಿ ಒಟ್ಟು ಸುಮಾರು 20 ಸಾವಿರ ಕಾರ್ಮಿಕರನ್ನು ನಿರುದ್ಯೋಗಿಗಳನ್ನಾಗಿ ಮಾಡಿದ 1985 ಹೊಸ ರಾಷ್ಟ್ರೀಯ ಜವಳಿ ನೀತಿಯ ದಾರುಣ ದಿವಾಳಿತನ ಬಟ್ಟ ಬಯಲಾಗಿದೆ ಎಂದು 13ನೇ ಸಮ್ಮೇಳನ ದೂಷಿಸಿದೆ.

ಸಹಕಾರಿ ಕ್ಷೇತ್ರಕ್ಕೆ ಜವಾಬ್ದಾರಿಯಾದ ರಾಜ್ಯ ಸರಕಾರ ಕೂಡಾ ರಾಯಚೂರು ಮುಂತಾದೆಡೆ ಮುಚ್ಚಿರುವ ಸಹಕಾರಿ ಗಿರಣಿಗಳನ್ನು ತೆರೆಯುವತ್ತ ಗಮನ ಹರಿಸಿಲ್ಲ ಎಂದು ಹೇಳಿರುವ ಸಮ್ಮೇಳ ನದ ಒಂದು ಠರಾವು ಒಂದೆಡೆ ನಾಲ್ಕು ಸಹಕಾರಿ ಸ್ಪಿನ್ನಿಂಗ್ ಮಿಲ್‌ಗಳನ್ನು ತೆರೆಯದ ರಾಜ್ಯ ಸರ್ಕಾರ ಕೋಟ್ಯಾಂತರ ರೂಪಾಯಿಗಳ 18 ಹೊಸ ಸಹಕಾರಿ ಸ್ಪಿನ್ನಿಂಗ್ ಮಿಲ್‌ಗಳ ಸ್ಥಾಪನೆಗೆ ಲೈಸನ್ಸ್ ನೀಡಿದೆ ಎಂಬ ಸಂಗತಿಯತ್ತ ಜನತೆಯ ಗಮನ ಸೆಳೆದಿದೆ.

ಸಾರ್ವಜನಿಕ ಉದ್ಯಮದ ಎಲ್ಲಾ ಕಾಯಿಲೆಗಳಿಗೆ ಖಾಸಗೀಕರಣವೇ ಮದ್ದು ಎನ್ನುವ ಕಲ್ಪನೆಯನ್ನು ಮೂಡಿಸುತ್ತಿರುವಾಗಲೇ ರಾಜ್ಯದಲ್ಲಿ ಐದು ಖಾಸಗೀ ಕ್ಷೇತ್ರದ ಮಿಲ್‌ಗಳು, ದೇಶದ ಇತರೆಡೆ ಟಾಟಾ ಒಡೆತನದ ಎಂಪ್ರೆಸ್ ಮಿಲ್ಲೂ ಸೇರಿದಂತೆ ಹಲವಾರು ಖಾಸಗೀ ಗಿರಣಿ ಗಳು ಮುಚ್ಚಿವೆ ಎಂಬ ವಾಸ್ತವಾಂಶದತ್ತ ಠರಾವು ಗಮನ ಸೆಳೆದಿದೆ.

ಹೊಸ ಜವಳಿ ನೀತಿ ಗುತ್ತೇದಾರಿಗಳಿಗೆ ಮಾತ್ರ ಅನುಕೂಲಕರವಾಗಿದ್ದು ಆಧುನೀಕರಣದಿಂದ ಹೊರದಬ್ಬಲ್ಪಟ್ಟ ಕಾರ್ಮಿಕ ಹತ್ತಿ ಬೆಳೆಗಾರ, ಜವಳಿಯ ಉತ್ಪಾದನಾ ಉದ್ದಿಮೆ ಮುಂತಾದ ಇತರ ಎಲ್ಲಾ ವಿಭಾಗಗಳ ಹಿತಾಸಕ್ತಿಗೆ ಮಾರಕವಾಗಿದೆ.

ಆದ್ದರಿಂದ ಈ ನೀತಿಯನ್ನು ಕೈಬಿಡಬೇಕೆಂದೂ, ಎಲ್ಲಾ ಗಿರಣಿಗಳನ್ನೂ ರಾಷ್ಟ್ರೀಕರಿಸಬೇಕೆಂದೂ ಸಮ್ಮೇಳನದ ಠರಾವು ಒತ್ತಾಯಿಸಿದೆ.

ರಾಜ್ಯ ಸರಕಾರ ಸಹಕಾರಿ ಮಿಲ್ಲುಗಳ ಸಹಿತ ಎಲ್ಲಾ ಮುಚ್ಚಿರುವ ಜವಳಿ ಮಿಲ್ಲುಗಳನ್ನು ತೆರೆಯಿಸಬೇಕೆಂದು ಮತ್ತು ಬೀಗಮುದ್ರೆಗಳನ್ನು ನಿಷೇಧಿಸಿ ಈ ಮಿಲ್ಲುಗಳ ಎಲ್ಲಾ ಕಾರ್ಮಿಕರಿಗೆ ಕೆಲಸ ಸಿಗುವಂತೆ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಎಲ್ಲಾ ನೇಕಾರರೂ ಪೂರ್ಣಾವಧಿ ಕೆಲಸ ಸಿಗುವಂತೆ ನೋಡಿಕೊಳ್ಳಬೇಕೆಂದೂ, ಕೈಮಗ್ಗ ಮತ್ತು ವಿದ್ಯುತ್‌ಚಾಲಿತ ಮಗ್ಗಗಳ ಕೆಲಸಗಾರರಿಗೆ ಕನಿಷ್ಠ ಕೂಲಿ ನಿಗದಿಪಡಿಸಲು ಕ್ರಮಗಳನ್ನು ಕೈಗೊಳ್ಳಬೇಕು. ಅವರಿಗೆ ರಕ್ಷಣೆ ನೀಡುವಂತಹ ಶಾಸನಗಳನ್ನು ಜಾರಿಗೊಳಿಸಬೇಕೆಂದೂ 13ನೇ ಸಮ್ಮೇಳನ ಒತ್ತಾಯಿಸಿದೆ.

ಐಕ್ಯರಂಗ ಏಜೆನ್ಸಿದಾರರ ಮತ್ತು ಚಂದಾದಾರರ ಗಮನಕ್ಕೆ

'ಐಕ್ಯರಂಗ'ದ ನಿರ್ವಹಣೆಯನ್ನು ಸುವ್ಯವಸ್ಥಿತಗೊಳಿಸುವ ಉದ್ದೇಶದಿಂದ ಪತ್ರಿಕೆಯ ನಿರ್ವಹಣಾ ಕಚೇರಿಯನ್ನು ಈ ಕೆಳಗಿನ ವಿಳಾಸಕ್ಕೆ ಸ್ಥಳಾಂತರಿಸಲಾಗಿದೆ. ಏಜೆನ್ಸಿದಾರರು, ಚಂದಾದಾರರು ತಮ್ಮ ಏಜೆನ್ಸಿ ಚಂದಾ ಬಗ್ಗೆ ವಿಚಾರಣೆ, ಹಣಪಾವತಿಗೆ ಇನ್ನು ಮುಂದೆ ಈ ವಿಳಾಸದೊಂದಿಗೆ ವ್ಯವಹರಿಸಬೇಕಾಗಿ ಕೋರುತ್ತೇವೆ.

ಎಂದಿನಂತೆ ಸುದ್ದಿಗಳನ್ನು ಮತ್ತು ಲೇಖನಗಳನ್ನು ಸುಲ್ತಾನ್ ಪೇಟೆ ಕಚೇರಿಯ ವಿಳಾಸಕ್ಕೆ ಕಳಿಸುವುದು.

ಐಕ್ಯರಂಗ C/O ಕ್ರಿಯಾಪ್ರಕಾಶನ ಪ್ರೈ. ಲಿಮಿಟೆಡ್
ನಂ.24, ಶೋಭ ಲಾಡ್ಜ್ ಕಾಂಪ್ಲೆಕ್ಸ್,
5ನೇ ಮುಖ್ಯ ರಸ್ತೆ, ಗಾಂಧಿನಗರ,
ಬೆಂಗಳೂರು-560 009

ಪ್ಯಾಲೆಸ್ಟೀನಿಯನ್ನರ ಹೋರಾಟಕ್ಕೆ ಬೆಂಬಲ

13ನೇ ರಾಜ್ಯ ಸಮ್ಮೇಳನ ನಲವತ್ತರ ದಶಕದಿಂದಲೂ ತಾಯ್ನಾಡಿಗಾಗಿ ಪ್ಯಾಲೆಸ್ಟೀನಿಯನ್ನರು ನಡೆಸಿಕೊಂಡು ಬಂದಿರುವ ಹೋರಾಟಕ್ಕೆ ಹೃತ್ಪೂರ್ವಕ ಬೆಂಬಲ ಸೂಚಿಸುತ್ತಾ ಹೆಂಗಸರು, ಮಕ್ಕಳೆನ್ನದೆ ಪ್ಯಾಲೆಸ್ಟೀನಿಯನ್ನರ ಕಗ್ಗೊಲೆಗಳನ್ನು ನಡೆಸುತ್ತಿರುವ ಇಸ್ರೇಲಿನ ಕುಕೃತ್ಯಗಳ ಬಗ್ಗೆ ಸಮಾಜವಾದಿ ರಾಷ್ಟ್ರಗಳಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯ ಹುಯ್ಲೆಬ್ಬಿಸುತ್ತಿರುವ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಚಕಾರವೆತ್ತದೆ ಸುಮ್ಮನಿದ್ದಾರೆ ಎಂದಿದೆ. ಜೋರ್ಡಾನ್ ನದಿಯ ಪಶ್ಚಿಮಭಾಗದಲ್ಲಿ ಪ್ರತ್ಯೇಕ ಪ್ಯಾಲೆಸ್ತೀನ್ ರಾಷ್ಟ್ರವು ಘೋಷಿಸಲ್ಪಟ್ಟಿರುವುದನ್ನು ಸೋವಿಯೆತ್ ಒಕ್ಕೂಟ ಮತ್ತು ಭಾರತದ ಸರ್ಕಾರವೂ ಸೇರಿದಂತೆ ಹಲವು ದೇಶಗಳು ಮಾನ್ಯತೆ ನೀಡಿದುದನ್ನು ಸ್ವಾಗತಿಸಿರುವ ಸಮ್ಮೇಳನ ಪ್ಯಾಲೆಸ್ಟೀನಿಯನ್ನರ ಹೋರಾಟಕ್ಕೆ ಬೆಂಬಲ ಸೂಚಿಸಿದೆ.

ಹೊಸ ವರ್ಷದ ಶುಭಾಶಯಗಳು

ಹೊಸ ವರುಷಗಳು
ಬಂದು ಹೋಗುತ್ತವೆ.
ಹಗಲು ರಾತ್ರಿಗಳಂತೆ
ಋತುಗಳ ಆವರ್ತನದಂತೆ
ಬಂದು ಹೋಗುವ ರೈಲುಗಳಂತೆ
ಹುಟ್ಟು ಸಾವುಗಳಂತೆ
ಆದರೆ
ಸತ್ತ ವರುಷಗಳ ಸಮಾಧಿಯ ಮೇಲೆ
ಕಾಯುತ್ತಿದ್ದೇನೆ ನಾನು
ಸಡಗರ ತರುವ
ಸೂರ್ಯೋದಯಕ್ಕಾಗಿ
ಸಮಸ್ತ ಮನುಕುಲದ
ಬಿಡುಗಡೆಯ ಬೆಳಕಲ್ಲಿ
ಬೆಳಗಿಸುವ
ಅರುಣೋದಯದ
ಕೆಂಪು ಕಿರಣಗಳಿಗಾಗಿ
ಶುಭಾಶಯಗಳ
ಯಥಾರ್ಥಗೊಳಿಸುವ
ಹೊಸ ವರುಷದ
ಆಗಮನಕ್ಕಾಗಿ

ಉದಯ.

13ನೇ ಉತ್ತರಪ್ರದೇಶ ಸಮ್ಮೇಳನ

ಉತ್ತರ ಪ್ರದೇಶದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕಿಸಾನ್ ಸಭಾ ಸದಸ್ಯತ್ವ 76 ಸಾವಿರದಿಂದ 1 ಲಕ್ಷ 75 ಸಾವಿರಕ್ಕೇರಿದೆ. ಕೃಷಿಕೂಲಿಗಾರ ಸಂಘಟನೆಯ ಸದಸ್ಯತ್ವ 26 ಸಾವಿರದಿಂದ 45 ಸಾವಿರಕ್ಕೇರಿದೆ. ಇದೇ ರೀತಿ ಇತರ ಸಾಮೂಹಿಕ ಸಂಘಟನೆಗಳ ಸದಸ್ಯತ್ವ ದ್ವಿಗುಣಗೊಂಡಿದೆ. ಪಕ್ಷದ ಸದಸ್ಯತ್ವ ಕೂಡ 6239ರಿಂದ 7282 ಕ್ಕೇರಿದ್ದರೂ ಸಾಮೂಹಿಕ ಸಂಘಟನೆಗಳ ಸದಸ್ಯತ್ವ ಹೆಚ್ಚಳಕ್ಕೆ ಅನುಗುಣವಾಗಿಲ್ಲ. ಈ ಅಂಶ ಉತ್ತರಪ್ರದೇಶ 13ನೇ ಸಮ್ಮೇಳನದ ವರದಿಯಿಂದ ತಿಳಿದು ಬಂದಿದೆ. ಈ ಸಮ್ಮೇಳನ ಅಕ್ಟೋಬರ್ 26 ರಿಂದ 30 ರವರೆಗೆ ಇಟಾದಲ್ಲಿ ನಡೆಯಿತು. ಪಾಲಿಟ್‌ಬ್ಯೂರೋ ಸದಸ್ಯರಾದ ಕಾ॥ಬಿ.ಟಿ.ಆರ್ ಮತ್ತು ಸುರ್ಜಿತ್ ಹಾಜರಿದ್ದರು.

ಅಕ್ಟೋಬರ್ 26ರಂದು ಸಾರ್ವಜನಿಕ ರ್‍ಯಾಲಿಯೊಂದಿಗೆ ಆರಂಭವಾದ ಸಮ್ಮೇಳನದ ಪ್ರತಿನಿಧಿ ಅಧಿವೇಶನವನ್ನು ಬಿ.ಟಿ.ಆರ್. ಉದ್ಘಾಟಿಸಿದರು.

ರಾಜ್ಯ ಕಾರ್ಯದರ್ಶಿ ಶಂಕರ ದಯಾಳ್ ತಿವಾರಿ ವರದಿ ಮಂಡಿಸಿದ ಮೇಲೆ ಸುರ್ಜಿತ್ ಸದ್ಯದ ರಾಜೀವ್ ಸರ್ಕಾರ ಕಿತ್ತೆಸೆಯುವಲ್ಲಿ ಮಹತ್ವದ ಪಾತ್ರ ವಹಿಸಬೇಕಾದ ಈ ರಾಜ್ಯದಲ್ಲಿ ಪಕ್ಷದಷ ಸಂಘಟನೆ ಇನ್ನೂ ದುರ್ಬಲವಾಗಿರುವುದಕ್ಕೆ ಕಾರಣವೇನೆಂದು ತಮ್ಮ ಚಟುವಟಿಕೆಗಳ ಅನುಭವದ ಮೇಲೆ ತಿಳಿಸಬೇಕೆಂದು ಕಾಂ.ಸುರ್ಜಿತ್ ಹೇಳಿದರು. 165 ಪ್ರತಿನಿಧಿಗಳು ಹಾಗೂ ವೀಕ್ಷಕರಲ್ಲಿ 49 ಮಂದಿ ಚರ್ಚೆಯಲ್ಲಿ ಭಾಗವಹಿಸಿದ್ದರು.

ರಾಮ ಜನ್ಮಭೂಮಿ, ಬಾಬ್ರಿಮಸೀದಿ ವಿವಾದದ ಫೈಜಾಬಾದ್ ಜಿಲ್ಲೆಯಲ್ಲಿ ಸೆಳೆತವನ್ನು ಕಡಿಮೆ ಮಾಡುವಲ್ಲಿ ಪಕ್ಷದ ಗಣನೀಯ ಪಾತ್ರವಹಿಸಿದ್ದರೂ ಒಟ್ಟಾರೆ ರಾಜ್ಯದಲ್ಲಿ ಈ ಬಗ್ಗೆ ತನ್ನ ಜವಾಬ್ದಾರಿ ನಿರ್ವಹಿಸಲು ಇನ್ನೂ ಬಹಳಷ್ಟು ಮಾಡಬೇಕಾಗಿದೆ ಎಂಬುದು ವರದಿಯಿಂದ ತಿಳಿದು ಬಂತು. ಪಕ್ಷದ ದೌರ್ಬಲ್ಯಗಳ ಬಗ್ಗೆ ಹೇಳುತ್ತಾ ರಾಜ್ಯದಲ್ಲಿ ಮೂಲ ವರ್ಗಗಳ ಸಂಘಟನೆಯತ್ತ ಲಕ್ಷ್ಯ ಹರಿಸುವುದು ಮತ್ತು ಪಕ್ಷ ಹಾಗೂ ಸಾಮಾಜಿಕ ಸಂಘಟನೆಗಳ ನಡುವೆ ಆರೋಗ್ಯಕರ ಮತ್ತು ಪ್ರಜಾಸತ್ತಾತ್ಮಕ ಸಂಬಂಧಗಳ ಅಭಾವದತ್ತ ಕಾಂ.ಸುರ್ಜಿತ್ ಪ್ರತಿನಿಧಿಗಳ ಗಮನ ಸೆಳೆದರು.

165 ಪ್ರತಿನಿಧಿಗಳಲ್ಲಿ 101 ಮಂದಿ ರೈತ ಮೂಲದವರು. ಕಾರ್ಮಿಕರು ಮತ್ತು ಕೃಷಿಕೂಲಿಕಾರ ಮೂಲದವರು ಒಟ್ಟು 17 ಮಾತ್ರ. ವಯೋಗುಂಪಿನಲ್ಲಿ 35 ವರ್ಷದ ಕೆಳಗಿನವರ ಸಂಖ್ಯೆ ಕೇವಲ 37. 36 ರಿಂದ 50 ವರ್ಷದ ವಯೋ ಗುಂಪಿನಲ್ಲಿ 75 ಪ್ರತಿನಿಧಿಗಳಿದ್ದರು. ಮಹಿಳಾ ಪ್ರತಿನಿಧಿಗಳ ಸಂಖ್ಯೆ ಕೇವಲ 3.

ಸಮ್ಮೇಳನ 27 ಸದಸ್ಯರುಗಳ್ಳ ರಾಜ್ಯಸಮಿತಿಯನ್ನು ಆರಿಸಿ ಇನ್ನು ಮೂರು ಸ್ಥಾನಗಳನ್ನು ಮುಂದೆ ತುಂಬುವುದೆಂದು ನಿರ್ಧರಿಸಿತು. ರಾಮ್ ಸುಮೇರ್ ಯಾದವ್ ಕಾರ್ಯದರ್ಶಿಯಾಗಿ ಆಯ್ಕೆಗೊಂಡರು.

ಹಿಮಾಚಲ ರಾಜ್ಯ ಸಮ್ಮೇಳನ

ಹಿಮಾಚಲ ಪ್ರದೇಶದಲ್ಲಿ ದೊಡ್ಡ ಶಕ್ತಿಯಲ್ಲದಿದ್ದರೂ ದುಡಿಯುವ ಜನಗಳ ಹಿತಾಸಕ್ತಿಗಳ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದು ಇತ್ತೀಚೆಗೆ ಆಳುವ ಕಾಂಗ್ರೆಸ್(ಐ)ನ ದಬ್ಬಾಳಿಕೆಯ ಪ್ರಮುಖ ಗುರಿಯಾಗಿರುವ ಸಿ.ಪಿ.ಐ(ಎಂ)ನ ರಾಜ್ಯ ಘಟಕದ ೭ನೇ ಸಮ್ಮೇಳನ ಅಕ್ಟೋಬರ್ ೧೦ ಹಾಗೂ ೧೧ರಂದು ಶಿಮ್ಲಾದಲ್ಲಿ ನಡೆಯಿತು. ಖಾಲಿಸ್ತಾನಿ ಭಯೋತ್ಪಾದಕರನ್ನೆದುರಿಸಿ ಹುತಾತ್ಮರಾದ ಚನ್ನನ್‌ಸಿಂಗ್‌ಧೂತ್‌ರವರ ಹೆಸರನ್ನು ಸಮ್ಮೇಳನದ ಸ್ಥಳಕ್ಕೆ ಇಡಲಾಗಿತ್ತು.

೮೪೩ ಸದಸ್ಯರನ್ನೂ ಪ್ರತಿನಿಧಿಸಿದ ೮೧ ಸಂಗಾತಿಗಳು ಹಾಗೂ ೨೧ ವೀಕ್ಷಕರು ಭಾಗವಹಿಸಿದ ಸಮ್ಮೇಳನ ಮೂರು ವರ್ಷಗಳಲ್ಲಿ ಪಕ್ಷದ ಬೆಳವಣಿಗೆಯನ್ನು ಪ್ರತಿಫಲಿಸಿತು. ಪ್ರತಿನಿಧಿಗಳಲ್ಲಿ ೨೪ ಸಂಗಾತಿಗಳು ಪೂರ್ಣಕಾಲದ ಕಾರ್ಯಕರ್ತರು. ೬೬ ಪ್ರತಿನಿಧಿಗಳು ೩೫ ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಹಾಗೂ ೬೦ ಮಂದಿ ಪದವೀಧರರು ಅಥವಾ ಇನ್ನು ಹೆಚ್ಚಿನ ಶಿಕ್ಷಣ ಪಡೆದವರು. ೮ ಪ್ರತಿನಿಧಿಗಳು ಮಾತ್ರವೇ ೧೯೬೪ರ ಮೊದಲು ಕಮ್ಯೂನಿಸ್ಟ್ ಆಂದೋಲನ ಸೇರಿದವರು.

ದಬ್ಬಾಳಿಕೆಯನ್ನು ಎದುರಿಸಿ ಪಕ್ಷದ ಸದಸ್ಯತ್ವ ೪೨% ಹೆಚ್ಚಿದೆ ಸಾಮೂಹಿಕ ಸಂಘಟನೆಗಳ ಸದಸ್ಯತ್ವ ೬೦ ಸಾವಿರದಷ್ಟಾಗಿದೆ. ಸಿ.ಐ.ಟಿ.ಯು. ಸದಸ್ಯತ್ವ ೪ ಸಾವಿರದಿಂದ ೨೦ ಸಾವಿರವಾದರೆ ಕಿಸಾನ್‌ಸಭಾ ಸದಸ್ಯತ್ವ ೬ ಸಾವಿರದಿಂದ ೧೪ ಸಾವಿರಕ್ಕೆ, ಎಸ್.ಎಫ್.ಐ. ಸದಸ್ಯತ್ವ ೧೫ ಸಾವಿರ ದಾಟಿದೆ. ಎಸ್.ಎಫ್.ಐ. ಈಗ ರಾಜ್ಯದ ಅತೀದೊಡ್ಡ ವಿದ್ಯಾರ್ಥಿ ಸಂಘಟನೆ.

ಸಮ್ಮೇಳನದ ವರದಿ ಈ ಬೆಳವಣಿಗೆಗಳನ್ನು ಗುರುತಿಸುವ ಜೊತೆಗೆ ನ್ಯೂನತೆಗಳನ್ನು ಕೂಲಂಕುಷವಾಗಿ ವಿಮರ್ಶಿಸಿತು. ಕೋಮು ಶಕ್ತಿಗಳನ್ನು ದೂರತಳ್ಳಿ ಕಾಂಗ್ರೆಗೆ ಪರ್ಯಾಯವಾಗಿ ಎಡ-ಪ್ರಜಾಪ್ರಭುತ್ವವಾದಿ ರಂಗ ರಾಜ್ಯದಲ್ಲಿ "ಹಿಮಾಚಲ ಕ್ರಾಂತಿಕಾರಿ ಮೋರ್ಚಾ" ಎಂಬ ಹೆಸರಲ್ಲಿ ಈಗಾಗಲೇ ರೂಪುಗೊಂಡಿದ್ದು ಇದನ್ನು ಹೋರಾಟ, ಪ್ರಕ್ಷೋಭೆಗಳ ಮೂಲಕ ಬಲಪಡಿಸಬೇಕೆಂದು ವರದಿ ಹೇಳಿತು. ಪಕ್ಷದ ಸದಸ್ಯರ ಸೈದ್ಧಾಂತಿಕಮಟ್ಟ ಹೆಚ್ಚಿಸುವ ದಿಕ್ಕಿನಲ್ಲಿ 'ಲೋಕಲಹರ್' ಪ್ರತಿಕೆಯ ಚಂದಾದಾರರ ಸಂಖ್ಯೆ ಒಂದು ಸಾವಿರಕ್ಕೇರಿಸುವ ಗುರಿಯನ್ನು ಸಮ್ಮೇಳನ ಹಾಕಿಕೊಂಡಿತಲ್ಲದೆ. ಶಿಮ್ಲಾದಲ್ಲಿ ಪಕ್ಷದ ಕಟ್ಟಡಕ್ಕಾಗಿ ವಿಶೇಷ ನಿಧಿ ರಚಿಸುವ ನಿರ್ಣಯ ಕೈಗೊಂಡಿತು.

ಸಮ್ಮೇಳನ ೨೧ ಸದಸ್ಯರುಳ್ಳ ಹೊಸ ರಾಜ್ಯ ಸಮಿತಿಯನ್ನು ಆರಿಸಿತು. ತಾರಾಚಂದ್ ಕಾರ್ಯದರ್ಶಿಯಾಗುಳ್ಳ ಹಾಗೂ ಕುಲದೀಪ್‌ಸಿಂಗ್, ಅಶೋಕವೈದ್ಯ ಮತ್ತು ರಾಕೇಶ್‌ಸಿಂಘ್ ಇತರ ಸದಸ್ಯರಾಗುಳ್ಳ ಕಾರ್ಯದರ್ಶಿ ಮಂಡಳಿ ಆರಿಸಲ್ಪಟ್ಟಿತು.

ಸುರ್ಜಿತ್ ಹಾಗೂ ಸೀತಾರಾಮ್ ಯೆಚೂರಿ ಸಮ್ಮೇಳನದಲ್ಲಿ ಹಾಜರಿದ್ದರು. ಸಮ್ಮೇಳನದ ಎರಡು ದಿನಗಳ ಮೊದಲು ಶಿಮ್ಲಾದಲ್ಲಿ ನಡೆದ ಬಹಿರಂಗ ಸಭೆ ನಗರ ಇದುವರೆಗೆ ಕಂಡ ಅತೀದೊಡ್ಡ ರ್‍ಯಾಲಿಯೆಂದು ಹೇಳಲಾಗಿದೆ. ಜ್ಯೋತಿಬಸು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಸಮ್ಮೇಳನದ ಒಬ್ಬ ಪ್ರತಿನಿಧಿ ಕೆ.ಆರ್. ಪಾಲ್ಟಾ ಆಯಾದ್ ಹಿಂದ್ ಸೇನೆಯಲ್ಲಿ ಭಾಗವಹಿಸಿದ್ದ ಸ್ವಾತಂತ್ರ್ಯ ಹೋರಾಟಗಾರ. ಕಾಂಗ್ರಾ ಜಿಲ್ಲೆಯಲ್ಲಿನ ತನ್ನ ಸಾಕಷ್ಟು ದೊಡ್ಡ ಆಸ್ತಿಯನ್ನು ಪಕ್ಷದ ಕೇಂದ್ರ ಸಮಿತಿಗೆ ಕೊಡುಗೆಯಾಗಿ ನೀಡುವುದಾಗಿ ಅವರು ಘೋಷಿಸಿದರು. ಸುರ್ಜಿತ್ ಈ ಬಗ್ಗೆ ಮೆಚ್ಚುಗೆ ಸೂಚಿಸಿ ಈ ಜಾಗದಲ್ಲಿ ಹಿಂದೀ ಭಾಷೆಯಾಡುವ ಪ್ರದೇಶಗಳ ಕಾರ್ಯಕರ್ತರಿಗೆ ಪಕ್ಷದ ಶಾಲೆ ರಚಿಸಲು ಪಕ್ಷ ಪ್ರಯತ್ನಿಸುವುದೆಂದು ತಿಳಿಸಿದರು.

ಸಿ.ಪಿ.ಐ (ಎಂ) ನ ದೆಹಲಿ ರಾಜ್ಯ ಸಮಿತಿಯ ಆರನೇ ಸಮ್ಮೇಳನ ಅಕ್ಟೋಬರ್ ೮ರಿಂದ ೧೦ರವರೆಗೆ ನವದೆಹಲಿಯ ಸಂವಿಧಾನ ಕ್ಲಬ್‌ನಲ್ಲಿ ನಡೆಯಿತು.

ಹರಿಕಿಶನ್‌ಸಿಂಗ್ ಸುರ್ಜಿತ್ ರವರು ಸಮ್ಮೇಳನವನ್ನು ಉದ್ಘಾಟಿಸುತ್ತಾ ಜನರ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುವಲ್ಲಿ ವಿಶೇಷವಾಗಿ ಕೋಮುವಾದದ ವಿರುದ್ಧ ವ್ಯಾಪಕ ಪ್ರಚಾರ ನಡೆಸುವಲ್ಲಿ ಪಕ್ಷದ ದೆಹಲಿ ಘಟಕದ ಪಾತ್ರವನ್ನು ಅಭಿನಂದಿಸಿದರು.

ರಾಜ್ಯ ಸಮಿತಿ ಕಾರ್ಯದರ್ಶಿ ಕಾ॥ ಜೋಗೇಂದ್ರಶರ್ಮ ಮಂಡಿಸಿದ ವರದಿ ಕಲ್ಕತ್ತಾ ಮಹಾಧಿವೇಶನ ರೂಪಿಸಿದ ಧೋರಣೆಯ ಮತ್ತು ಕಳೆದ ರಾಜ್ಯ ಸಮ್ಮೇಳನದ ನಿರ್ಣಯಗಳ ಹಿನ್ನೆಲೆಯಲ್ಲಿ ರಾಜ್ಯ ಘಟಕದ ಕೆಲಸ ಕಾರ್ಯಗಳ ವಿಮರ್ಶೆ ನಡೆಸಿತು. ದೆಹಲಿಯ ರಾಜಕೀಯ ಬೆಳವಣಿಗೆಗಳಲ್ಲಿ ಮಧ್ಯಪ್ರವೇಶಿಸುವ ಪಕ್ಷದ ಸಾಮರ್ಥ್ಯ ಬೆಳೆದಿದ್ದು ಕೋಮುವಾದಿ ಮತ್ತು ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಪ್ರಕ್ಷೋಭೆಯಲ್ಲಿ ಹಾಗೂ ಮಾರ್ಚ್ ೧೫ರ ಭಾರತ ಬಂದ್‌ನವರೆಗಿನ ಹೋರಾಟಗಳಲ್ಲಿ ಪ್ರತಿಫಲನಗೊಂಡಿತು. ಕನಿಷ್ಠ ವೇತನದ ಪ್ರಶ್ನೆಯ ಮೇಲೆ ಸಿ.ಐ.ಟಿ.ಯು. ಸಂಘಟಿಸಿದ ೭೨ ಗಂಟೆಗಳ ಮುಷ್ಕರ, ಅದರಲ್ಲಿ ಪಕ್ಷದ ಪಾತ್ರ ಸಿ.ಐ.ಟಿ.ಯು ಮತ್ತು ಪಕ್ಷದ ಪ್ರತಿಷ್ಠೆಯನ್ನು ದಿಲ್ಲಿ, ಘಾಜಿಯಾಬಾದ್ ಹಾಗೂ ಫೈಜಾಬಾದ್‌ಗಳ ಕಾರ್ಮಿಕ ವರ್ಗದ ನಡುವೆ ಬೆಳೆಸಿದೆ ಎಂದು ವರದಿ ಗಮನಿಸಿತು.

ಕಳೆದ ಮೂರು ವರ್ಷಗಳಲ್ಲಿ ಸಿ.ಐ.ಟಿ.ಯು. ಸದಸ್ಯತ್ವ ೨೬ ಸಾವಿರದಿಂದ ೩೯ ಸಾವಿರಕ್ಕೇರಿತು. ಡಿ.ವೈ.ಎಫ್.ಐ ಸದಸ್ಯತ್ವ ೬೫೦೦ರಿಂದ ೯೯೮೫ಕ್ಕೆ. ಜನವಾದಿ ಮಹಿಳಾ ಸಮಿತಿ ಸದಸ್ಯತ್ವ ೫೦೦೦ದಿಂದ ೯೨೦೦ ಆಯಿತು. ಆದರೆ ವಿದ್ಯಾರ್ಥಿ ರಂಗದಲ್ಲಿ ಸದಸ್ಯತ್ವ ೨ ಸಾವಿರಕ್ಕೇ ಸ್ಥಗಿತಗೊಂಡಿರುವ ದೌರ್ಬಲ್ಯವನ್ನು ವರದಿ ಗಮನಿಸಿತು. ಪಕ್ಷದ ಹೆಚ್ಚುತ್ತಿರುವ ಪ್ರತಿಷ್ಠೆಯನ್ನು ಸದಸ್ಯತ್ವದ ರೂಪದಲ್ಲಿ ಕ್ರೋಢೀಕರಿಸುವಲ್ಲಿನ ದೌರ್ಬಲ್ಯವನ್ನೂ ಸಮ್ಮೇಳನ ವಿಮರ್ಶಿಸಿತು.

೮೬೨ ಸದಸ್ಯರನ್ನೂ ಪ್ರತಿನಿಧಿಸಿದ ನೂರು ಪ್ರತಿನಿಧಿಗಳು ಭಾಗವಹಿಸಿದ್ದ ಈ ಸಮ್ಮೇಳನದಲ್ಲಿ ೪೧ ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿ ದೆಹಲಿಯಲ್ಲಿ ಪಕ್ಷ ಕಟ್ಟುವ ಬಗ್ಗೆ ವಿವರವಾಗಿ ಚರ್ಚಿಸಿದರು.

ನೂರು ಪ್ರತಿನಿಧಿಗಳಲ್ಲಿ ೬೬ ಮಂದಿಯ ವಯಸ್ಸು ೪೦ವರ್ಷಕ್ಕಿಂತ ಕಡಿಮೆ. ೧೬ ಮಹಿಳಾ ಪ್ರತಿನಿಧಿಗಳು ಭಾಗವಹಿಸಿದರು.

ವರದಿಯನ್ನು ಅಂಗೀಕರಿಸಿದ ಸಮ್ಮೇಳನ ೨೧ ಸದಸ್ಯರ ಹೊಸ ರಾಜ್ಯ ಸಮಿತಿಯನ್ನು ಆರಿಸಿತು. ಹೊಸರಾಜ್ಯ ಸಮಿತಿ ಕಾ॥ ಜೋಗೇಂದ್ರಶರ್ಮಾರವರನ್ನು ಕಾರ್ಯದರ್ಶಿಯಾಗಿ ಹಾಗೂ ಸೂರಜ್‌ಭಾನ್ ಭಾರದ್ವಾಜ್, ಬೃಂದಾಕಾರಟ್, ಮೋಹನ್‌ಲಾಲ್ ಮತ್ತು ಸೋಹೈಲ್ ಕಾಶ್ಮಿಯವರನ್ನು ಕಾರ್ಯದರ್ಶಿ ಮಂಡಳಿ ಸದಸ್ಯರನ್ನಾಗಿ ಆರಿಸಿತು.

ಅಕ್ಟೋಬರ್ ೧೦ರಂದು ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾ॥ಬಿ.ಟಿ.ಆರ್. ಹಾಗೂ ಕಾ॥ ಜೋಗೇಂದ್ರಶರ್ಮಾ ಮಾತನಾಡಿದರು.

6ನೇ ಮಧ್ಯಪ್ರದೇಶ ರಾಜ್ಯ ಸಮ್ಮೇಳನ

ಮಧ್ಯಪ್ರದೇಶದ ಡಕಾಯಿತಿ-ಪೀಡಿತ ಮೋರೈನಾ ಪಟ್ಟಣ ಅಕ್ಟೋಬರ್ 16 ರಂದು ಒಂದು ವಿಶಿಷ್ಟ ರೂಪ ತಳೆದಂತಿತ್ತು. ಅಂದು ಸಿ.ಪಿ.ಐ.(ಎಂ)ನ ಮಧ್ಯಪ್ರದೇಶ ರಾಜ್ಯ ಸಮ್ಮೇಳನದ ಆರಂಭಕ್ಕೆ ಪೂರ್ವ ಭಾವಿಯಾಗಿ ನಡೆಯಲಿದ್ದ ಬೃಹತ್ ರ್‍ಯಾಲಿ ಅದಕ್ಕೆ ಕಾರಣ. ಸುತ್ತಮುತ್ತಲ ಹಳ್ಳಿಗಳಿಂದ ರೈತರು ಹಾಗು ಗ್ವಾಲಿಯರ್ ನಗರದಿಂದ ಕಾರ್ಮಿಕರು ಮೋರೈನಾದಲ್ಲಿ ಬಂದು ನೆರೆದಿದರು. ಕಾಂ.ಬಿ.ಟಿ.ಆರ್. ಅವರನ್ನುದ್ದೇಶಿಸಿ ಮಾತನಾಡಿದರು.

ಕಾಂ.ಬಿ.ಟಿ.ಆರ್. ಸಮ್ಮೇಳನದ ಪ್ರತಿನಿಧಿ ಅಧಿವೇಶನವನ್ನು ಉದ್ಘಾಟಿಸಿದ ನಂತರ ರಾಜ್ಯ ಕಾರ್ಯದರ್ಶಿ ಮೋತಿಲಾಲ್ ಶರ್ಮಾ ವರದಿ ಮಂಡಿಸಿದರು. 45 ರಲ್ಲಿ 35 ಜಿಲ್ಲೆಗಳು ಕೈಗಾರಿಕೆಯಲ್ಲಿ ಹಿಂದುಳಿದಿರುವ, ಕೇವಲ 13% ಸಾಗುವಳಿ ಭೂಮಿ ನೀರಾವರಿ ಪಡೆದಿರುವ ಈ ರಾಜ್ಯದ ರಾಜಕೀಯದಲ್ಲಿ ಮಾಜೀ ರಾಜರುಗಳ, ಪಾಳೆಯಗಾರೀ ಭೂಸ್ವಾಮಿಗಳದ್ದೇ ಪ್ರಾಬಲ್ಯ. ಸಹಜವಾಗಿಯೇ ಆದಿವಾಸಿಗಳು, ಹರಿಜನರು, ಮಹಿಳೆಯರ ಮೇಲೆ ಅತ್ಯಾಚಾರಗಳು ಹೆಚ್ಚುತ್ತಿವೆ. ಆಡಳಿತ ಅದನ್ನು ತಡೆಯುವ ಬದಲು ಅಪರಾಧಿಗಳನ್ನು ರಕ್ಷಿಸುತ್ತಿದೆ. ರಾಜ್ಯದ ಪ್ರಬಲ ಪಕ್ಷಗಳಾದ ಕಾಂಗ್ರೆಸ್(ಐ) ಬಿ.ಜೆ.ಪಿ. ಜನ ಸಾಮಾನ್ಯರೊಂದಿಗೆ ಸಂಪರ್ಕ ಕಳೆಓಂಡಿವೆ. ಬಿ.ಜೆ.ಪಿ. ಯಂತೂ ಕಾಂಗ್ರೆಸ್(ಐ)ನ 'ಬಿ' ತಂಡದಂತೆ ವರ್ತಿಸುತ್ತಿದೆ. ಈ ರಾಜಕೀಯ ಹಿನ್ನೆಲೆ ಯಲ್ಲಿ ಸೀಮಿತ ಸದಸ್ಯತ್ವದ ಸಿ.ಪಿ.ಐ.(ಎಂ) ರಾಜ್ಯದ ಬೆಳವಣಿಗೆಗಳಲ್ಲಿ ಹೆಚ್ಚೆಚ್ಚು ಪಾತ್ರವಹಿಸಲಾರಂಬಿಸಿದೆ. ಪಕ್ಷದ ಸಂಘಟನೆ ಯನ್ನೂ ಬಲಗೊಳಿಸಲುವರದಿ ಕೆಲವು ನಿರ್ದಿಷ್ಟ ಕ್ರಮಗಳನ್ನು ಸೂಚಿಸಿತು.

ಸಮ್ಮೇಳನದಲ್ಲಿ ಭಾಗವಹಿಸಿದ್ದ 117 ಸಂಗಾತಿಗಳಲ್ಲಿ 41 ಮಂದಿ ಚರ್ಚೆಯಲ್ಲಿ ಭಾಗವಹಿಸಿದರು. ಇಬ್ಬರು ಮಹಿಳಾ ಸಂಗಾತಿಗಳೂ ಚರ್ಚೆಯಲ್ಲಿಭಾಗವಹಿಸಿದ್ದರು. ಕೆಲವು ತಿದ್ದುಪಡಿಗಳೊಂದಿಗೆ ವರದಿ ಅಂಗೀಕಾರಗೊಂಡಿತು.

ಡಿಸೆಂಬರ್ 1989ರ ವರೆಗಿನ ತುರ್ತು ಕರ್ತವ್ಯಗಳನ್ನೂ ರೂಪಿಸಿದ ಸಮ್ಮೇಳನ 19 ಸದಸ್ಯರುಳ್ಳ ರಾಜ್ಯ ಸಮಿತಿಯನ್ನು ಆರಿಸಿತು. ಮೋತಿಲಾಲ್ ಶರ್ಮಾ ಕಾರ್ಯದರ್ಶಿಯಾಗಿ ಶೈಲೇಂದ್ರಶೈಲಿ ತಾತ್ಕಾಲಿಕ ಕಾರ್ಯದರ್ಶಿಯಾಗಿ ಆಯ್ಕೆಗೊಂಡರು.

ಸಮಾರೋಪ ಭಾಷಣ ಮಾಡಿದ ಬಿ.ಟಿ.ಆರ್. ರಾಜ್ಯದ ರಾಜಕೀಯ ಸನ್ನಿವೇಶದ ಹಿನ್ನೆಲೆಯಲ್ಲಿ ಕೆಲವು ಅಮೂಲ್ಯ ಸಲಹೆಗಳನ್ನು ನೀಡಿದರು. ರಾಜ್ಯದಲ್ಲಿ ಚಾರಿತ್ರಿಕವಾಗಿ ಸುಧಾರಣಾ ಆಂದೋಲನಗಳಿಲ್ಲದ್ದರಿಂದ ಹರಿ ಜನರು, ಆದಿವಾಸಿಗಳು ಹಾಗೂ ದಲಿತರಲ್ಲಿ ಸಾಕಷ್ಟು ಪ್ರಜ್ಞೆ ಬೆಳೆದಿಲ್ಲ. ಅತ್ತ ಅವರು ಪೂರ್ಣವಾಗಿ ಭೂರ್ಜ್ವಾ-ಭೂಮಾಲಿಕ ಪಕ್ಷಗಳ ಪ್ರಭಾವ ದೊಳಗೂ ಇಲ್ಲ. ಆದ್ದರಿಂದ ದೃಢಪ್ರಯತ್ನದಿಂದ ಈ ವಿಭಾಗ ಗಳನ್ನು ಜಾತಿ-ವಿರೋಧಿ ಆಂದೋಲ ನಗಳಲ್ಲಿ ತರುವುದು ಸಾಧ್ಯ ಎಂದರು.



ಆರನೇ ಹರ್ಯಾಣಾ ರಾಜ್ಯ ಸಮ್ಮೇಳನ

ಪಂಜಾಬಿನಲ್ಲಿ ಅಕಾಲಿಗಳ 'ಧರ್ಮ ಯುದ್ಧ' ಮತ್ತು ಹರ್ಯಾಣದಲ್ಲಿ ದೇವೀಲಾಲ್‌ರ 'ನ್ಯಾಯ ಯುದ್ಧ' ದ ಸಮಯದಲ್ಲಿ ಕೋಮು ಧ್ರುವೀಕರಣ ನಡೆದಿದ್ದ ಗಂಭೀರ ಪರಿಸ್ಥಿತಿಯಲ್ಲಿ ದರ್ಯಾಪುರ್ ಬಸ್ ಸಾಮೂಹಿಕ ಹತ್ಯಾ ಕಾಂಡದ ನಂತರ ಫತೇಹಾಬಾದ್‌ನಲ್ಲಿ ಕೋಮು ಸೌಹಾರ್ದ ಕಾಪಾಡಲು ತಮ್ಮ ಜೀವಗಳನ್ನೇ ಪಣತೆತ್ತು ಯಶಸ್ವಿಯಾದ ಹರ್ಯಾಣಾ ಪಕ್ಷದ ಆರನೇ ಸಮ್ಮೇಳನ ಅಕ್ಟೋಬರ್ 14 ರಿಂದ 16 ರವರೆಗೆ ಜಿಂದ್‌ನಲ್ಲಿ ಜರುಗಿತು. ಪಕ್ಷದ ರಾಜ್ಯ ಹಿಮಾಚಲದಂತೆ ಇಲ್ಲೂ ಸಮ್ಮೇಳನದ ಆವರಣಕ್ಕೆ ಹುತಾತ್ಮ ಕಾಂ.ಧೂತ್‌ರ ಹೆಸರಿಡಲಾಗಿತ್ತು.

ಮೊದಲ ದಿನದ ಭಾರೀ ರ್‍ಯಾಲಿಯ ನಂತರ ಆರಂಭವಾದ ಸಮ್ಮೇಳನದಲ್ಲಿ 114 ಪ್ರತಿನಿಧಿಗಳು ಭಾಗವಹಿಸಿದ್ದರು. ಪಾರ್ಟಿ ಕೇಂದ್ರದಿಂದ ಪಾಲಿಟ್ ಬ್ಯೂರೋ ಸದಸ್ಯ ಕಾಂ.ಸುರ್ಜಿತ್ ಭಾಗವಹಿಸಿದ್ದರು. ಅವರೇ ಸಮ್ಮೇಳನದ ಉದ್ಘಾಟನೆ ಯನ್ನೂ ನಡೆಸಿದರು. ಅಂತರಾಷ್ಟ್ರೀಯ ರಂಗದಲ್ಲಿ ಶಾಂತಿ, ಪ್ರಜಾಪ್ರಭುತ್ವ, ರಾಷ್ಟ್ರೀಯ ವಿಮೋಚನೆ ಮತ್ತು ಸಮಾಜ ವಾದದ ಪರವಾದ ಅನುಕೂಲವಾತಾವರಣ, ರಾಷ್ಟ್ರೀಯ ರಂಗದಲ್ಲಿ ರಾಜೀವ್ ಸರ್ಕಾರದ ವಿರುದ್ಧ ವಿಸ್ತರಿಸುತ್ತಿರುವ ಹೋರಾಟದ ಬಗ್ಗೆ ವಿವರಿಸಿದ ಮೇಲೆ ಕಾಂ.ಸುರ್ಜಿತ್ ಕಾಂಗ್ರೆಸ್(ಐ)ನ್ನು ಕಿತ್ತೆಸೆದ ಹರ್ಯಾಣಾ ಜನತೆ ಯನ್ನು ಅಭಿನಂದಿಸಿದರು.

ಸಮ್ಮೇಳನ ನವಂಬರ್ 7 ರೊಳಗೆ ಒಂದು ಲಕ್ಷ ರೂ. ನಿಧಿ ಸಂಗ್ರಹಿಸುವ ಕರೆ ನೀಡಿತು.

ರಾಜ್ಯ ಕಾರ್ಯದರ್ಶಿ ಕಾಂ.ರಘುಬೀರ್ ಸಿಂಗ್ ಹುದಾ ಮಂಡಿಸಿದ ವರದಿಯ ಮೇಲಿನ ಚರ್ಚೆಯಲ್ಲಿ 49 ಸಂಗಾತಿಗಳು ಭಾಗವಹಿಸಿದ್ದರು. ಚರ್ಚೆಯನ್ನು ಗಮನಿಸುತ್ತಿದ್ದ ಕಾಂ.ಸುರ್ಜಿತ್ ಈ ಬಗ್ಗೆ ತಮ್ಮ ಸಂತಸವನ್ನು ವ್ಯಕ್ತಪಡಿಸಿದರು. ಇದು ಪಕ್ಷದ ಮತ್ತು ಸಾಮೂಹಿಕ ಸಂಘಟನೆಗಳ ಬೆಳವಣಿಗೆಯ ಉತ್ತಮ ಸಂಕೇತ ಎಂದರು.

KRNW/BDS-312 MAG[2]PRB DECR 319-78-

ನೀರಾವರಿ ಯೋಜನೆಗಳು

1ನೇ ಪುಟದಿಂದ

ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳಬಹುದಾಗಿದೆ. ಅದರ ಎರಡನೇ ಹಂತವನ್ನು 2000 ಇಸವಿಯೊಳಗಾಗಿ ಮುಗಿಸಿ ನಮ್ಮ ಪಾಲಿನ 750ಟಿ.ಎಂ.ಸಿ ನೀರನ್ನು ಉಪಯೋಗಿಸುವ ಯೋಜನೆ ಹಾಕಿಕೊಳ್ಳದಿದ್ದರೆ, ರಾಜ್ಯದ ಪಾಲನ್ನು ಕಳೆದುಕೊಳ್ಳುವ ಸಂದಿಗ್ಧ ಪರಿಸ್ಥಿತಿ ಉಂಟಾಗ ಬಹುದು. ನಾವು ನಮ್ಮ ಪಾಲಿನ ನೀರನ್ನು ಉಪಯೋಗಿಸಿಕೊಳ್ಳದಿರುವುದರಿಂದ ಅದು ಸಮುದ್ರ ಪಾಲಾಗುತ್ತಿದೆ. ಅದನ್ನೇ ತಾವು ತೆಲುಗುಗಂಗಾ ಯೋಜನೆಯ ಮೂಲಕ ಬರಪೀಡಿತ ಪ್ರದೇಶಕ್ಕೆ ಉಪಯೋಗಿಸುತ್ತೇವೆಂದು ಆಂಧ್ರಪ್ರದೇಶ ಸರ್ಕಾರ ತನ್ನ ತೆಲುಗು ಗಂಗಾ ಯೋಜನೆಯನ್ನು ಸಮರ್ಥಿಸಿಕೊಳ್ಳುತ್ತಿದೆ.

ಈ ಯೋಜನೆಗೆ ಪ್ರಾರಂಭದಿಂದಲೂ ವಿಶ್ವಬ್ಯಾಂಕ್ ಸಾಕಷ್ಟು ಸಹಾಯ ನೀಡುತ್ತ ಬಂದಿದೆ. ಈ ಮಹತ್ತರವಾದ ಯೋಜನೆಗೆ ಕೇಂದ್ರ ಸರ್ಕಾರ ಸಾಕಷ್ಟು ಧನ ಸಹಾಯ ಮಾಡಿದ್ದರೆ, ರಾಜ್ಯ ಸರ್ಕಾರ ಸಂಪನ್ಮೂಲ ಒದಗಿಸಿದ್ದರೆ ಕಡಿಮೆ ಖರ್ಚಿನಿಂದಲೇ ಈ ಯೋಜನೆಯನ್ನು ಮುಕ್ತಾಯಗೊಳಿಸಿ ಮೂರು ಜಿಲ್ಲೆಗಳ ಬರಗಾಲ ಪರಿಸ್ಥಿತಿಯನ್ನು ನಿವಾರಿಸಿ. ಒಕ್ಕಲುತನಕ್ಕೂ, ಒಕ್ಕಲುತನ ಆಧಾರಿತ ಕೈಗಾರಿಕೆಗಳ ಬೆಳವಣಿಗೆಗೂ ಸಹಾಯವಾಗುತ್ತಿತ್ತು. ಹಾಗೆಯೇ ನಮ್ಮ ಪಾಲಿನ ನೀರನ್ನು ತಾವು ಉಪಯೋಗಿಸಿಕೊಳ್ಳಬೇಕೆಂದು ಆಂಧ್ರ ಸರ್ಕಾರ ಕೂಡ ವಿಚಾರ ಮಾಡುತ್ತಿರಲಿಲ್ಲ. ಕೃಷ್ಣಾ ನೀರಿನ ಬಳಕೆಯ ಕುರಿತು ಎರಡೂ ರಾಜ್ಯಗಳ ಮಧ್ಯೆ ತಕರಾರೂ ಬೆಂಬಲದಿಂದ ಒಂದು ತಿಂಗಳು ಉಪವಾಸ ಸತ್ಯಾಗ್ರಹ ನಡೆಸಿದ ಫಲವಾಗಿ ಯೋಜನೆಗೆ ಅಡಿಗಲ್ಲು ಹಾಕಲ್ಪಟ್ಟು, ಕೆಲಸ ಪ್ರಾರಂಭವಾದ ಆಲಮಟ್ಟಿ ಕೃಷ್ಣ ಮೇಲ್ದಂಡೆ ಯೋಜನೆ ಕಾರ್ಯ ರಾಜಕೀಯದ ನೆನೆಗುದಿಯಿಂದಲೂ, ಹಣದ ಅಭಾವದ ನೆವದಿಂದಲೂ ಇಂದಿಗೂ ಪೂರ್ಣಗೊಂಡಿಲ್ಲ. 1987ರಲ್ಲಿ ಅದರ ಅಂದಾಜು ಖರ್ಚು ರೂ 1358 ಕೋಟಿ ಈಗ ಅದು ರೂ 2000ಕೋಟಿ. 2000ಯೊಳಗೆ ಅದನ್ನು ಮುಗಿಸಬೇಕಾಗಿದ್ದರೆ ಅದರ ಎರಡು ಪಟ್ಟು ಖರ್ಚು ಮಾಡಬೇಕಾದೀತು. ಎಲ್ಲಾ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಈ ಯೋಜನೆಯನ್ನು ಆದಷ್ಟು ತೀವ್ರ ಮುಗಿಸಿದ್ದಾದರೆ ಮೂರು ಜಿಲ್ಲೆಗಳು ಎದುರಿಸುತ್ತಿರುವ ಭೀಕರ ಬರಗಾಲಕ್ಕೆ ಪರಿಹಾರ ಒದಗಿಸಬಹುದಾಗಿದೆ. ಮಾತ್ರವಲ್ಲ ಬಚಾವತ್ ಅವಾರ್ಡಿನ ಪ್ರಕಾರ ಕರ್ನಾಟಕದ ಪಾಲಿನ 750 ಟಿ.ಎಂ.ಸಿ. ನೀರಿನ ಷೈಕಿ 450 ಉದ್ಭವವಾಗುತ್ತಿರಲಿಲ್ಲ.

ಕಾವೇರಿ ನೀರಿನ ಬಳಕೆಯ ಕುರಿತೂ ಇದೆ ರೀತಿ ತಕರಾರು ಉಂಟಾರಿರುವುದರಿಂದ ಅದರ ನೀರನ್ನು ಸರಿಯಾಗಿ ಬಳಸಿಕೊಳ್ಳಲೂ ಸಾಧ್ಯವಾಗುತ್ತಿಲ್ಲ.

ಲೋಕೋಪಯೋಗಿ ಮಂತ್ರಿ ದೇವೇಗೌಡರು ಕೃಷ್ಣಾ ಮತ್ತು ಕಾವೇರಿ ನದಿಗಳ ನೀರಾವರಿ ಯೋಜನೆಗಳನ್ನು ಆದಷ್ಟು ಬೇಗ ಪೂರ್ಣಗೊಳಿಸುವ ಉದ್ದೇಶದಿಂದ ಎರಡು ಕಾರ್ಪೊರೇಷನ್‌ಗಳನ್ನು ರಚಿಸುವುದಾಗಿ ಪ್ರಕಟಿಸಿರುವುದನ್ನು ಈ ಸಮ್ಮೇಳನ ಸ್ವಾಗತಿಸುತ್ತದೆ. ಆದರೆ ಅದೇ ಸಮಯದಲ್ಲಿ ಆ ಕಾರ್ಪೋರೇಷನ್‌ಗಳಿಗೆ ಸಾಕಷ್ಟು ಸಂಪನ್ಮೂಲ ಒದಗಿಸುವುದಕ್ಕೆ ಅವಶ್ಯವಾದ ಕ್ರಮಕೈಗೊಂಡರೆ ಮಾತ್ರ ಆ ಕಾರ್ಪೋರೇಷನ್ ಕೆಲಸ ಸಮರ್ಪಕವಾಗಿ ಮುಂದುವರಿದು, ಆದಷ್ಟು ಬೇಗ ಯೋಜನೆಗಳು ಪೂರ್ತಿಗೊಳ್ಳಲು ಸಾಧ್ಯವೆಂಬುದರ ಕುರಿತು ಎಚ್ಚರ ನೀಡಲು ಇಚ್ಛೆಸುತ್ತೇವೆ.

ಬಚಾವತ್ ಅವಾರ್ಡ್ ಮಹಾರಾಷ್ಟ್ರಕ್ಕೆ 650 ಟಿ.ಎಂ.ಸಿ. ಕರ್ನಾಟಕಕ್ಕೆ 750 ಟಿ.ಎಂ.ಸಿ. ಆಂಧ್ರಪ್ರದೇಶಕ್ಕೆ 800ಕೊಡ ಮಾಡಿದ್ದು, ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶ ಸರಕಾರಗಳು ಈಗಾಗಲೇ ತಮ್ಮ ಪಾಲಿಗೆ ಸಂದ ನೀರನ್ನುಪಯೋಗಿಸುವ ಯೋಜನೆಗಳನ್ನು ಪೂರ್ಣಗೊಳಿಸುವ ಹೊಸ್ತಿಲಲ್ಲಿವೆ. ಅನಾನುಕೂಲತೆಯಿಂದ 2000 ಇಸವಿಯೊಳಗಾಗಿ ನಮ್ಮ ರಾಜ್ಯದ ಪಾಲಿನ ನೀರನ್ನು ಬಳಸಿಕೊಳ್ಳಲು ಅಕಸ್ಮಾತ್ ಸಾಧ್ಯವಾಗದಿದ್ದರೆ, ರಾಜ್ಯಕ್ಕೆ ಈಗ ಕೊಡಮಾಡಿದ 750 ಟಿ.ಎಂ.ಸಿ ನೀರಿನ ಹಕ್ಕನ್ನು ಕರ್ನಾಟಕ ಬಳಸಿಕೊಳ್ಳಲು ಉಳಿಸಬೇಕೆಂದೂ ಅನಂತರ ಬರುವ ಹೊಸ ಅವಾರ್ಡಿನಲ್ಲಿ ಇದರ ಹೊರತಾಗಿ ಹೆಚ್ಚುವರಿ ಪಾಲಿನ ನೀರನ್ನು ಒದಗಿಸುವಂತಾಗಬೇಕೆಂದೂ ಈ ಸಮ್ಮೇಳನ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರುತ್ತದೆ. ರಾಜ್ಯ ಸರ್ಕಾರವೂ ಅದೇ ರೀತಿ ಒತ್ತಾಯ ತರಬೇಕೆಂದು ಈ ಸಮ್ಮೇಳನ ಜನತಾ ಮಂತ್ರಿ ಮಂಡಲವನ್ನು ಕೇಳಿಕೊಳ್ಳುತ್ತದೆ.

ನೀರಾವರಿಯೋಜನೆಗಳಿಗೆ ವಿಶ್ವ-ಬ್ಯಾಂಕ್ ಸಾಲದ ರೂಪದಲ್ಲಿ ಕೊಡುತ್ತಿರುವ ಸಹಾಯವನ್ನು ಶೇ.30ರಷ್ಟು ಕೇಂದ್ರ ಸರ್ಕಾರ ಉಳಿಸಿಕೊಳ್ಳುತ್ತದೆ. ಆದರೆ ಒಟ್ಟು ಹಣವನ್ನು ರಾಜ್ಯ ಸರ್ಕಾರವೇ ಅಸಲು ಮತ್ತು ಬಡ್ಡಿಯಾಗಿ ವಾಪಸ್ ಸಂದಾಯ ಮಾಡಬೇಕಾಗುತ್ತದೆ. ಉದಾ:- ನವೆಂಬರ್ 24ರಂದು ಕೃಷ್ಣಾ ಮೇಲ್ದಂಡೆ ಯೋಜನೆಗೆ ವಿಶ್ವಬ್ಯಾಂಕ್ ರೂ.440ಕೋಟಿ ಮಂಜೂರು ಮಾಡಿದ್ದರೂ ವಿಶ್ವಬ್ಯಾಂಕ್ ನೆರವಿನ ನಿಯಮ ಪ್ರಕಾರ ಕರ್ನಾಟಕ ರಾಜ್ಯಕ್ಕೆ ಲಭ್ಯವಾಗುವುದು ಬರೇ ರೂ.308ಕೋಟಿ ಮಾತ್ರ. ಇಂಥ ಅನ್ಯಾಯವನ್ನು ಹೋಗಲಾಡಿಸಿ ಯಾವುದೇ ಯೋಜನೆಗೆ ಸಾಲದ ರೂಪದಲ್ಲಿ ಬರುವ ಪೂರ್ಣ ಹಣವನ್ನು ಸಂಬಂಧಪಟ್ಟ ರಾಜ್ಯ ಸರ್ಕಾರಗಳಿಗೆ ಕೊಡಬೇಕೆಂದು ಈ ಸಮ್ಮೇಳನ ಒತ್ತಾಯಿಸುತ್ತದೆ.

ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ನೀರಾವರಿ ಯೋಜನೆಗಳಿಗೆ ಕೊಡುವ ಸಾಲಗಳಿಗೆ ವಿಶ್ವ ಬ್ಯಾಂಕ್ ವಿಧಿಸುವ ಬಡ್ಡಿಯನ್ನೇ ವಸೂಲು ಮಾಡಬೇಕು: ವಿಶ್ವಬ್ಯಾಂಕ್ ಅನವಶ್ಯಕವಾದ ಷರತ್ತುಗಳನ್ನು ಕೈಬಿಡುವಂತೆ ಒತ್ತಾಯಿಸಬೇಕು.

ಕರ್ನಾಟಕ ರಾಜ್ಯದಲ್ಲಿರುವ ನೀರನ್ನು ಸರಿಯಾಗಿ ಉಪಯೋಗಿಸಿಕೊಳ್ಳುತ್ತಿದ್ದರೆ, ಕರ್ನಾಟಕ ಸಾಮಾಜಿಕ, ಆರ್ಥಿಕ, ಕೈಗಾರಿಕಾ ಪರಿಸ್ಥಿತಿಯಲ್ಲಿ ಸಾಕಷ್ಟು ಬದಲಾವಣೆಯಾಗುತ್ತಿತ್ತು. ಹಸಿರು ಕ್ರಾಂತಿಯಾಗಿ ಗ್ರಾಮಾಂತರ ಪ್ರದೇಶದ ಜನರ ಹಾಗೆಯೇ ನಗರಗಳ ಮಾತ್ರವಲ್ಲ ಇಡೀ ಜನಜೀವನದ ಸುಧಾರಣೆಯಾಗುತ್ತಿತ್ತು. ಸಕಾಲದಲ್ಲೇ ಆ ಯೋಜನೆಗಳನ್ನು ಮುಗಿಸುತ್ತಿದ್ದರೆ ರಾಜ್ಯ ಬೊಕ್ಕಸಕ್ಕೆ ಕಡಿಮೆ ಭಾರಬೀಳುತ್ತಿತ್ತು. ನೀರಾವರಿ ಯೋಜನೆಗಳ ಕುರಿತು ಕೇಂದ್ರ ಮತ್ತು ರಾಜ್ಯ ಸರ್ಕಾರದ ನಿರ್ಲಕ್ಷ್ಯ ಅತ್ಯಂತ ಖಂಡನೀಯ.

1) ಕೃಷ್ಣಾ ಮೇಲ್ದಂಡೆ ಆಲಮಟ್ಟಿ ಯೋಜನೆ ಅದಕ್ಕೆ ಪೂರಕವಾಗಿ ಮುಳವಾಡ ಏತ ನೀರಾವರಿ ಯೋಜನೆ, ಹಿಪ್ಪರಗಿ ಡ್ಯಾಂ ಕೆಲಸವನ್ನೂ.
2) ಕಾವೇರಿ ನದಿಗುಂಟ ವರುಣ ಹೇಮಾವತಿ, ಹಾರಂಗಿ ಯೋಜನೆಗಳನ್ನು.
3) ನಾರಾಯಣಪುರ ಅಣೆಕಟ್ಟಿನ ನೀರಿನ ಉಪಯೋಗಕ್ಕೆ ಶಹಪುರ ಸುರುಪುರ ತಾಲ್ಲೂಕುಗಳಲ್ಲಿ ಎಡದಂಡೆ ಕಾಲುವೆಗಳ ಕಾರ್ಯಗಳನ್ನು.
4) ರಾಯಚೂರು ಜಿಲ್ಲೆಗೆ ಕೃಷ್ಣಾ ನೀರು ಒದಗಿಸಲು ಕಾಲುವೆಗಳ ಕಾರ್ಯವನ್ನು.
5) ಬೀದರ್ ಜಿಲ್ಲೆಯ ಕಾರಂಜಿ ಯೋಜನೆಯನ್ನು ಈಗಾಗಲೇ ಪ್ರಾರಂಭಿಸಿರುವ ಮತ್ತು ಈಗಾಗಲೇ ತಯಾರಿಸಿರುವಂಥವುಗಳನ್ನೆಲ್ಲ.
6) ದ.ಕ.ಜಿಲ್ಲೆಯ ಕುಂದಾಪುರ, ವರಾಹಿ, ಯೋಜನೆಯನ್ನು ಪೂರ್ತಿಗೊಳಿಸಿದರೆ ಕುಂದಾಪುರ, ಉಡುಪಿ, ತಾಲ್ಲೂಕುಗಳಿಗೆ ಪ್ರಯೋಜನವಾಗುತ್ತದೆ.
7) ರಾಜ್ಯದಲ್ಲಿ ನಿರ್ಮಾಣ ಹಂತದಲ್ಲಿರುವ ಏತ ನೀರಾವರಿ, ಕೆರೆಕುಂಟೆ ಯೋಜನೆಗಳನ್ನು ಪೂರ್ಣಗೊಳಿಸಬೇಕು.
8) ಗುಲ್ಬರ್ಗಾ ಜಿಲ್ಲೆಯ ಅಮರ್ಜ, ಬೆಣ್ಣೆತೊರೆ, ಅಪ್ಪರ್, ಮಲ್ಲಾಮಾರಿ ಯೋಜನೆಗಳನ್ನು ಪೂರ್ತಿಗೊಳಿಸಬೇಕು.
9) ಭದ್ರಾ ಡ್ಯಾಂ 6 ಅಡಿ ಎತ್ತರಿಸಿದರೆ ಬಳ್ಳಾರಿ, ತುಮಕೂರು, ಚಿತ್ರದುರ್ಗ, ಜಿಲ್ಲೆಗಳಲ್ಲೂ ನೀರಾವರಿಯಾಗುತ್ತದೆ.
10) ತುಂಗಭದ್ರಾ ಡ್ಯಾಂ ಹೂಳೆತ್ತುವ ಕೆಲಸ ಮಾಡಬೇಕು.
11) ವರದಾ ನದಿಗೆ ಶಿರಸಿಯ, ಬಾಸಿ, ಬನವಾಸಿ, ಹತ್ತಿರ ಅಣೆಕಟ್ಟು ಕಟ್ಟಬೇಕು. ಅದ್ದರಿಂದ ಹಾವೇರಿ, ಹಾನಗಲ್, ಶಿಗ್ಗಾಂವ, ಸೊರಬ ತಾಲ್ಲೂಕುಗಳಿಗೆ ಸಾಕಷ್ಟು ನೀರು ಲಭ್ಯವಾಗುತ್ತದೆ.
12) ಪಶ್ಚಿಮ ಘಟ್ಟದ ಅಂಚಿನಿಂದ ಸಾಕಷ್ಟು ನೀರು ಹರಿದು ಸಮುದ್ರ ಸೇರುತ್ತದೆ. ಆ ನೀರನ್ನು ಒಂದೆಡೆ ಶೇಖರಿಸಿ ಬರಗಾಲ ಪ್ರದೇಶಗಳಿಗೆ ರವಾನಿಸುವ ಯೋಜನೆ ರೂಪಿಸಲು ಕ್ರಮ ಕೈಗೊಳ್ಳಬೇಕು.
13) ಶರಾವತಿ ಟೈಲ್ ರೇಸ್ ವಿದ್ಯುತ್ ಯೋಜನೆ ಕೂಡಲೇ ಕೈಗೊಳ್ಳಬೇಕು.

ಈ ಮೇಲ್ಕಂಡ ಯೋಜನೆಗಳನ್ನು ಸಕಾಲದಲ್ಲಿ ಮುಗಿಸಲಿಕ್ಕೆ ತುರ್ತು ಕ್ರಮ ಕೈಗೊಳ್ಳಬೇಕೆಂದುಸಿ.ಪಿ.ಐ(ಎಂ)ಪಕ್ಷದ 13ನೇ ರಾಜ್ಯ ಸಮ್ಮೇಳನ ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತದೆ.

ಈ ಯೋಜನೆಗಳನ್ನು ಪೂರ್ತಿಗೊಳಿಸುವಂತೆ ರಾಜ್ಯ ಸರ್ಕಾರದ ಮೇಲೆ ಒತ್ತಾಯ ತರಲು ಪಾರ್ಟಿ ಮತ್ತು ಪ್ರಾಂತ ರೈತ ಸಂಘ ಸ್ವತಂತ್ರವಾಗಿಯೂ, ಇತರ ಎಡ ಮತ್ತು ಜಾತ್ಯಾತೀತ ಶಕ್ತಿಗಳೊಡನೆ ಸೇರಿಯೂ ಹೋರಾಟ ನಡೆಸಬೇಕೆಂದು ಕರೆ ಕೊಡುತ್ತದೆ.

ಗೊರ್ಬಚೆವ್ ಪ್ರಸ್ತಾಪಗಳಿಗೆ ಪಾಲಿಟ್‌ಬ್ಯೂರೋ ಸ್ವಾಗತ

ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯನ್ನುದ್ದೇಶಿಸಿ ಮಾತನಾಡುತ್ತಾ ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಗೊರ್ಬಚೆವ್ ಮಂಡಿಸಿದ ಪ್ರಸ್ತಾಪಗಳು ವಿಶ್ವಶಾಂತಿಸಾಧಿಸುವ ಬಗ್ಗೆ ಸೋವಿಯತ್ ಒಕ್ಕೂಟದ ಪ್ರಾಮಾಣಿಕ ಆಕಾಂಕ್ಷೆಯನ್ನೂ ಮತ್ತೊಮ್ಮೆ ಸ್ಪಷ್ಟಪಡಿಸಿದೆ ಎಂದು ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ಸ್ವಾಗತಿಸಿದೆ.

ಸೋವಿಯತ್ ಸಶಸ್ತ್ರ ಪಡೆಗಳಲ್ಲಿ 5 ಲಕ್ಷದಷ್ಟು ಕಡಿತ, ಸಾಂಪ್ರದಾಯಿಕ ಶಸ್ತ್ರಗಳಲ್ಲಿ ಗಣನೀಯ ಕಡಿತ ಹಾಗೂ ಪೂರ್ವಯುರೋಪಿನ ಸೇನಾಪಡೆಗಳ ವಾಪಸಾತಿ ಕುರಿತ ಏಕಪಕ್ಷೀಯ ಘೋಷಣೆ, ಅಮೆರಿಕಾ, ಜಿನೇವಾ ಒಪ್ಪಂದವನ್ನು ನಿರಂತರವಾಗಿ ಉಲ್ಲಂಘಿಸುತ್ತಿದ್ದರೂ ಅಫ್‌ಘಾನ್ ಸಮಸ್ಯೆ ಪರಿಹಾರಕ್ಕೆ ಹೊಸ ಪ್ರಸ್ತಾಪಗಳು ಮತ್ತು ತೃತೀಯ ಜಗತ್ತಿನ ಸಾಲ ಮರುಪಾವತಿಯನ್ನು ನೂರು ವರ್ಷ ಮುಂದೂಡಬೇಕೆಂಬ ತೃತೀಯ ಜಗತ್ತಿನ ಕೋಟಿಗಟ್ಟಲೆ ಜನರ ಭಾವನೆಗಳನ್ನು ಪ್ರತಿಧ್ವನಿಸುವ ಅತ್ಯಂತ ಮಹತ್ವಪೂರ್ಣ ಪ್ರಸ್ತಾಪ- ಈ ಮೂರು ಹೊಸಹೆಜ್ಜೆಗಳು ಸೋವಿಯತ್ ಒಕ್ಕೂಟ ಆರಂಭಿಸಿರುವ ಶಾಂತಿಯ ರಭಸದ ಯತ್ನಗಳ ಮುಂದುವರಿಕೆಯೇ ಆಗಿದೆಯೆಂದಿರುವ ಪಾಲಿಟ್‌ಬ್ಯೂರೋ ಸಾಮ್ರಾಜ್ಯಶಾಹಿಗಳು ಈ ಪ್ರಸ್ತಾಪಗಳನ್ನು ಸ್ವೀಕರಿಸುವಂತೆ ಒತ್ತಾಯ ತರುವಂತೆ ಶಕ್ತಿಶಾಲೀ ಆಂದೋಲನ ಆರಂಭಿಸಬೇಕೆಂದು ಶಾಂತಿ ಪ್ರಿಯ ಶಕ್ತಿಗಳಿಗೆ ಕರೆ ನೀಡಿದೆ.

ಹದಿಮೂರನೇ ಮಹಾಧಿವೇಶನದತ್ತ

1ನೇ ಪುಟದಿಂದ

ಸಾವಿರಾರು ಮಕ್ಕಳ ಹಾಡಿನ ತಂಡ ಡಿಸೆಂಬರ್ 27ರ ಆಗಮನವನ್ನೇ ನಿರೀಕ್ಷಿಸುತ್ತಿದ್ದಾರೆ.

ತಿರುವನಂತಪುರ ದೇವಸ್ಥಾನಗಳು, ಮಸೀದಿಗಳು, ಚರ್ಚುಗಳು ಸ್ಮಾರಕಗಳ ಪ್ರಾಚೀನ ನಗರ. ಈಗ ಅದು ಯೌವನೋತ್ಸಾಹದಿಂದ ತುಂಬಿ ತುಳುಕುತ್ತಿದೆ. ಸಿ.ಪಿ.ಐ.(ಎಂ)ನ ಹದಿಮೂರನೇ ಮಹಾಧಿ[ವೇಶನ] ತಿರುವನಂತಪುರದ ಇತಿಹಾಸಕ್ಕೆ ಒಂದು ಅಧ್ಯಾಯವನ್ನು, ಕೇರಳದ ಪ್ರಜಾಪ[ಭುತ್ವ] ಚಳುವಳಿಯ ಇತಿಹಾಸಕ್ಕೂ ಒಂದು ಅಧ್ಯಾಯವನ್ನೂ ಸೇರಿಸಲಿದೆ.



ಸಮ್ಮೇಳನದ ಸಂದೇಶ ಸಾರುವ ಗೋಡೆ ಚಿತ್ರಗಳ ದೃಶ್ಯ

Printed & Published by P. Ramachandra Rao on behalf of the Communist Party of India (Marxist) Karnataka State Committee, K.V. Temple Street, Sulthanpet, Bangalore-560053. Managing Editor: N.K. Upadhayaya.

Managerial office: No.24, Shobha lodge Complex 5th Main Road, Gandhinagar, Bangalore-560009